ಕಾರ್ತೀಕಮಾಸ

ಕಾರ್ತೀಕಮಾಸದಲಿ (ನರಕಚತುರ್ದಶಿ-ಎಣ್ಣೆಶಾಸ್ತ್ರ)

ಕಾರ್ತೀಕಮಾಸದಲಿ ಕಾಮನ ಪಿತನ ಪೂಜಿಸುವಾ॥ಪ॥ ಮಾಸಾಭಿಮಾನಿ ದಾಮೋದರನ್ನ ಭುಜಿಸಿ ಲೇಸು ಸಂಪಿಗೀ ಗಂಧಣ್ಣೆ ಸಮರ್ಪಿಸಿ॥ ಆಪುಣ್ಯ ಪುರುಷೋತ್ತಮನ ಕೊಂಡಾಡುತಾ ತೈಲಶಾಸ್ತ್ರ ಪದವ ರಚಿಸುವೆ॥1॥ ಸಾಧನದ ಜನರೆಲ್ಲಾ ತಾವ್ ಭ್ರಾಹ್ಮಿ ಮುಹೂರ್ತದಲೆ ಎದ್ದು ಕಸ್ತೂರಿ ಕರಪುರ ದ್ವಿಳ್ಯವನಿಟ್ಟು॥ ಪನ್ನಂಗಶಯನಗ ಗೋಪಿ ಚಿನ್ನಗಾ ಹಚ್ಚಿದರು ಗಂಧೆಣ್ಣೆ॥2॥ ಸೃಷ್ಟಿಗೆ ಕರ್ತ ಶ್ರೀಹರಿಯು ತಾ ಸೃಷ್ಟಿಸಿದನು ದೀಪಾವಳಿಯಾ ಉತ್ತಮಾ ಚತುರ್ದಶಿ ದಿನದಲಿ ಬಂದು ಮತ್ತೆನರಕಾಸುರನಾ ವಧೆಯಾ, ಮಾಡಿದನೆಂದು ರುಕ್ಮಿಣಿ ಹಯವದನನ ನೆತ್ತಿಗೆ ಹಚ್ಚಿದಳು ಸಂಪಿಗೆಣ್ಣೆ॥3॥

❖ ❖ ❖

45. "ದಾಮೋದರ"ಮಾಸ ನಿಯಾಮಕ

ದಾಮೋದರ ದೂರತರಾಂತರ ವಂದೇ। ದಾರಿತಪಾರಿಗಪಾರ ಪರಸ್ಮಾತ್॥

ದಾಮೋದರ ದಾಮೋದರ ಎಂದರೆ ಯಶೋದಾದೇವಿಯ ಕೈಯಲ್ಲಿ ದಾಮ(ರ)ವನ್ನು ಕಟ್ಟಿಸಿಕೊಂಡಿದ್ದರಿಂದ। ದಾಮೋದರ ಎನಿಸಿಕೊಂಡ॥ಕೇಶಶಾಯ ನಮಃ॥

ಸಾಧು ಬೃಂದದಲ್ಲಿ ದಾಮೋದರನಿದ್ದಾನೆ ರಾಮ ರಾಮ।
ಸಾಧು ಬೃಂದವಕಂಡೆ ದಾಮೋದರನ ದಯದಿ ರಾಮ ರಾಮ॥ಕಾಶಿಯ ಹಾದಿಯಲಿ॥

ದಾಮೋದರ ಗುಣಧಾಮಾ।ಸ್ವಾಮಿ। ದಾನವಾಂತಕ ಯದುಕುಲ ಸಾರ್ವಭೌಮ।
ನೀಲಮೇಘ ನಿಭ ಶ್ಯಾಮ। ಕೃಷ್ಣ। ನೀಲಾಪತಿಯೆಂಬ ಬಹುಪುಣ್ಯನಾಮ॥ಅಚ್ಯುತಾನಂತ॥

ಕಾಮ ಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆಯೊಳಗೆ ನುಡಿಸು।
ಶ್ರೀಮಹಾನುಭಾವನಾದ ದಾಮೋದರ ॥ಈಶ ನಿನ್ನ॥

ದಾಮೋದರಂ ದಿವ್ಯಸಿಂಹಂ ದಯಾಲುಂ ದೀನಪಾಲಕಂ।
ದೈತ್ಯಾರಿಂ ದೇವ ದೇವೇಶಂ। ತಂ ವಂದೇ ದೇವಕೀ ಸುತಂ॥ ಓಂ ನಮೋ ಭಗವತೇ॥

ನೇಮಿಗಳ ನೇಮವನು ಪ್ರೇಮದಿಂದಲಿ ಕಾಯ್ವ। ನಾಮದ ಮಹಿಮೆಯನು ಪೂಗಳುವ ಜನರನ್ನು।
ನಾಮದ ಮಹಿಮೆಯನು ಪೊಗಳುವರನು ಕಾಯ್ವ। ದಾಮೋದರನೆ ನಮ್ಮ ಮನೆದೈವ॥ ರಂಗಬಾರೋ॥

ಮತ್ಸ್ಯಾಕೃತಿಧರ ಜಯದೇವೇಶ (ದಾಮೋದರಸ್ತೋತ್ರ)

ಮತ್ಸ್ಯಾ ಕೃತಿಧರ ಜಯ ದೇವೇಶ ವೇದವಿಬೂಧಕ ಕೂರ್ಮಸ್ವರೂಪ॥ಪ॥ ಮಂದರಗಿರಿಧರ ಸೂಕರರೂಪ ಭೂಮಿವಿಧಾರಕ ಜಯ ದೇವೇಶ॥1॥ ಕಾಂಚನ ಲೋಚನ ನರಹರಿರೂಪ ದುಷ್ಟಹಿರಣ್ಯಕ ಭಂಜನ ಜಯ ಭೋ ಜಯ ಜಯ ವಾಮನ ಬಲಿವಿಧ್ವಂಸಿನ್ ದುಷ್ಟ ಕುಲಾಂತಕ ಭಾರ್ಗವರೂಪ॥2॥ ಜಯವಿಶ್ರವಸಃ ಸುತವಿಧ್ವಂಸಿನ್ ಜಯ ಕಂಸಾರೇ ಯದುಕುಲತಿಲಕ। ಜಯವೃಂದಾವನಚರ ದೇವೇಶ ದೇವಕಿನಂದನ ನಂದಕುಮಾರ॥3॥ ಜಯಗೋವರ್ಧನ ಧರವತ್ಸಾರೇ ಧೇನುಕಭಂಜನ ಜಯ ಕಂಸಾರೇ। ರುಕ್ಮಿಣಿನಾಯಕ ಜಯಗೋವಿಂದ ಸತ್ಯಾವಲ್ಲಭ ಪಾಂಡವ ಬಂಧೋ॥4॥ ಖಿರವರವಾಹನ ಜಯಪಿತಾರೇ ಜಯ ಮುರಭಂಜನ ಪಾರ್ಥ ಸಖೇತ್ವಂ। ಭೌಮವಿನಾಶಕ ದುರ್ಜನಹಾರಿನ್ ಸಜ್ಜನಪಾಲಕ ಜಯದೇವೇಶ॥5॥ ಶುಭಗುಣಗಣಪೂರಿತ ಜಯ ವಿಶ್ವೇಶ ಜಯ ಪುರುಷೋತ್ತಮ

ನಿತ್ಯ ವಿಭೋಧ। ಭೂಮಿ ಭರಾಂತಕ ಕಕಾರಣ ರೂಪ ಜಯ ಖರಭಂಜನ ದೇವವರೇಣ್ಯ॥6॥ ವಿಧಿಭವಮುಖಸುರ ಸತತಸುವಂದಿತ ಸಚ್ಚರಣಾಂಬುಜ ಕಂಜಸುನೇತ್ರ ಸಕಲ। ಸುರಾಸುರ ನಿಗ್ರಹಕಾರಿನ್ ಪೂತನಿ ಮಾರಣ ಜಯದೇವೇಶ॥7॥ ಯದ್ಭ್ರೂವಿಭ್ರಮ ಮಾತ್ರಾತ್ತದಂ ಮಾಕಮಲಾಸನ ಶಂಭುವಿಪಾದಿದ್ಯಂ। ಸೃಷ್ಟಿಸ್ಥಿತಿಲಯ ಮೃಚ್ಛತಿ ಸರ್ವಂ ಸ್ಥಿರಚಲವಲ್ಲಭ ಸತ್ವಂ ಜಯಭೋ॥8॥ ಜಯ ಯಮಲಾರ್ಜುನ ಭಂಜನಮೂರ್ತೇ। ಜಯ ಗೋಪಿ ಕುಚಕುಂಕು ಮಾಂಕಿತಾಂಗ। ಪಾಂಚಾಲೀ ಪರಿಪಾಲನ ಜಯ। ಭೋ ಜಯ ಗೋಪೀಜನರಂಜನ ಜಯ ಭೋ॥9॥ ಜಯಜಯ ರಾಸೋತ್ಸವರತ ಲಕ್ಷ್ಮೀಶ ಸತತ ಸುಖಾರ್ಣವ ಜಯಕಂಜಾಕ್ಷ। ಜಯ ಜಯ ಜನನೀಕರಪಾಶಸುಬದ್ಧ ಹರಣಾನ್ನವನೀತಸ್ಯ ಸುರೇಶ॥10॥ ಬಾಲಕ್ರೀಡನಪರ ಜಯಭೋ ತ್ವಂ ಮುನಿ ವರವಂದಿತಪಾದಪದ್ಮೇಶ। ಕಾಲಿಯಫಣಿ ಫಣಮರ್ಧನ ಜಯಭೋದ್ವಿಜಪತ್ನ್ಯೈರ್ಪಿ ವಿಭೋಽನ್ನಂ॥11॥ ಕ್ಷೀರಾಂಬುಧಿ ಕೃತ ನಿಲಯನ ದೇವ ವರದ ಮಹಾಬಲ ಜಯಜಯ ಕಾಂತ। ದುರ್ಜನ ಮೋಹಕ ಬುದ್ಧಸ್ವರೂಪ ಸಜ್ಜನ ಬೋಧಕ ಕಲ್ಕಿಸ್ವರೂಪ॥12॥ ಜಯ ಯುಗಕೃತದುರ್ಜನವಿಧ್ವಂಸಿನ್ ಜಯ ಜಯ ಭೋ ಜಯ ವಿಶ್ವಾತನ। ಇತಿ ಮಂತ್ರಂ ಪಠೇನ್ನೇವ ಕುರ್ಯಾನ್ನೀರಾಜಂ ಮಧಃ॥13॥ ಘಟಿಕಾದ್ವಯ ಶಿಷ್ಟಾಯಾಂ ಸ್ನಾನಂ ಕುರ್ಯಾದ್ಯಥಾವಿಧಿ। ಅನ್ಯಥಾ ನರಕಂ ಯಾತಿ ಯಾವದಿಂದ್ರಾಶ್ಚ ತುರ್ದಶ॥14॥ ಕಾಯೇನ ವಾಚ ಮನಸೇಂದ್ರಯೈರ್ವಾ। ಬುದ್ಧ್ಯಾತ್ಮನಾವಾ ಸ್ವಭಾವಂ ಪ್ರಕೃತೇ। ಕರೋಮಿಯದ್ಯತ್ ಸಕಲಮ್ ಪರಸ್ಮೈ ನಾರಾಯಣೇತಿ ಸಮರ್ಪಯೇ ತತ್॥15॥

ಅಗ್ರೇ ಕರುಣಾಮಥ ಪಾಂಡವಾನಾಂ (ಗೋವಿಂದ ದಾಮೋದರ ಸ್ತೋತ್ರದಿಂದ)

ಅಗ್ರೇ ಕರುಣಾಮಥ ಪಾಂಡವಾನಾಂ ದುಶ್ಯಾಸನೇನಾಹೃತವಸ್ತ್ರಕೇಶಾ। ಕೃಷ್ಣ ತದಾಕ್ರೋಶದ ನನ್ಯನಾಥಾ ಗೋವಿಂದ ದಾಮೋದರ ಮಾಧವೇತಿ॥1॥ ಶ್ರೀಕೃಷ್ಣ ವಿಷ್ಣೋ ಮಧುಕೈಟಭಾರೇ ಭಕ್ತಾನುಕಂಪಿನ್ ಭಗವನ್ ಮುರಾರೇ। ತ್ರಾಯಸ್ವ ಮಾಂ ಕೇಶವ ಲೋಕನಾಥ, ಗೋವಿಂದ... ॥2॥ ಮಂದಾರಮೂಲೇ ವದನಾಭಿರಾಂ ಬಿಂಬಾಧರೇ ಪೂರಿತವೇಣುನಾದಮ್। ಗೋಗೋಪಗೋಪೀಜನಮಧ್ಯಸಂಸ್ಥಂ, ಗೋವಿಂದ...॥3॥ ವಿಹಾಯ ನಿದ್ರಾಮರುಣೋದಯೇ ಚ ವಿಧಾಯ ಕೃತ್ಯಾನಿ ಚ ವಿಪ್ರಮುಖ್ಯಾಃ। ವೇದಾವಸಾನೇ ಪ್ರಪಠಂತಿ ನಿತ್ಯಂ, ಗೋವಿಂದ...॥4॥ ಸುಖಂ ಶಯಾನಾ ನಿಲಯೇ ನಿಜೇಽಪಿ ನಾಮಾನಿ ವಿಷ್ಣೋಃ ಪ್ರವದಂತಿ ಮರ್ತ್ಯಾಃ। ತೇ ನಿಶ್ಚಿತಂ ತನ್ಮಯತಾಂ ವ್ರಜಂತಿ, ಗೋವಿಂದ...॥5॥ ಅತ್ಯಂತಿಕವ್ಯಾಧಿಹರಂ ಜನಾನಾಂ। ಚಿಕಿತ್ಸಕಂ ವೇದವಿದೋವದಂತಿ। ಸಂಸಾರತಾಪತ್ರಯ ನಾಶಬೀಜಂ, ಗೋವಿಂದ...॥6॥ ಧ್ಯೇಯಃ ಸದಾ ಯೋಗಿಭಿರ ಪ್ರಮೇಯಃ ಚಿಂತಾಹರ ಶ್ಚಿಂತಿತ ಪಾರಿಜಾತಃ। ಕಸ್ತೂರಿಕಾಕಲ್ಪಿತ ನೀಲವರ್ಣೋ, ಗೋವಿಂದ...॥7॥ ಸಂಸಾರಕೂಪೇ ಪತಿತೋತ್ಯಗಾಧೇ ಮೋಹಾಂಧಪೂರ್ಣೇ ವಿಷಯಾಭಿತಪ್ತೇ। ಕರಾವಲಂಬಂ ಮಮ ದೇಹಿ ವಿಷ್ಣೋ, ಗೋವಿಂದ...॥8॥ ಭಜಸ್ವಮಂತ್ರಂ ಭವಬಂಧಮುಕ್ತ್ಯೈ ಜಿಹ್ವೇ ರಸಜ್ಞೇ ಸುಲಭಂ ಮನೋಜ್ಞಮ್। ದ್ವೈಪಾಯನಾದ್ಯೈರ್ಮುನಿಭಿಃ ಪ್ರಜಪ್ತಂ, ಗೋವಿಂದ...॥9॥ ಸುಖಾವಸಾನೇ ತ್ವಿದಮೇವ ಸಾರಂ ದುಃಖಾವಸಾನೇ ತ್ವಿದಮೇವ ಗೇಯಮ್। ದೇಹಾವಸಾನೇ ತ್ವಿದಮೇವ ಜಾಪ್ಯಂ, ಗೋವಿಂದ...॥10॥ ನಾರಾಯಣಾನಂತ ಹರೇ ನೃಸಿಂಹ ಪ್ರಹ್ಲಾದಬಾಧಾಹರ ಹೇ ಕೃಪಾಲೋ। ಜಿಹ್ವೇ ಪಿಬಸ್ವಾಮೃತಮೇತದೇವ, ಗೋವಿಂದ...॥11॥ ಗೋವಿಂದ ಗೋವಿಂದ ಹರೇ ಮುರಾರೇ ಗೋವಿಂದ ಗೋವಿಂದ ಮುಕುಂದ ಕೃಷ್ಣ। ಗೋವಿಂದ ಗೋವಿಂದ ರಥಾಂಗಪಾಣೇ, ಗೋವಿಂದ...॥12॥

❖ ❖ ❖

46. ದೀಪಾವಳಿ-ಬಲಿಪಾಡ್ಯಮಿ

ಅದಿತಿದೇವಿ ಪಯೋವ್ರತವ ಮಾಡಿದಳಾಕೆ (ವಾಮನನ ಹುಟ್ಟು)

ಅದಿತಿದೇವಿ ಪಯೋವ್ರತವ ಮಾಡಿದಳಾಕೆ। ಪತಿಯಾಜ್ಞೆಯ ಕೇಳಿಕೊಂಡು। ಪೃಥಿವಿಯನೆಲ್ಲ ಆಳುವಂಥ ಸ್ವಾಮಿತಾ। ಸುತನಾಗಿ ಅಲ್ಲಿ ಜನಿಸಿದನು॥1॥ ದಶರಾತ್ರಿ ಕಳೆಯಲು ಅಸುರ ಸಂಹಾಗೆ। ಶಶಿಮುಖಿಯರೆಲ್ಲ ಕೂಡಿ। ಯೆಶೆವೊ ಚಿನ್ನದ ತೊಟ್ಟಿಲೊಳಗಿಟ್ಟು ಕಂದಗೆ। ಹೆಸರು ಇಟ್ಟರೆ ವಾಮನನೆಂದು॥2॥ ಅನ್ನಪ್ರಾಶನ ಚೌಲ ಕರ್ಮಂಗಳನುಮಾಡಿ। ತನ್ನ ಬಂಧುಗಳೆಲ್ಲ ಕರೆಸಿ। ಹನ್ನೆರಡು ವರ್ಷತಪವಿದ್ದು ಪಡೆದ। ಮೋಹನ್ನಂಗೆ ಮುಂಜಿ ಕಟ್ಟಿದರು॥3॥ ದಂಡಕಾಷ್ಟವು ಯಜ್ಞೋಪವೀತವು। ಮುಂಜಿಕೃಷ್ಣಾಂಜನಧರಿಸಿ। ಅದಿತಿ ಸರಸ್ವತಿ ಭಿಕ್ಷವ ನೀಡೆ ಮುತ್ತಿನಾ। ರತಿಯನೆತ್ತುವರು ಹರುಷದಲಿ॥4॥ ಕೋಟಿಸೂರ್ಯ ಚಂದ್ರಕಾಂತಿಯಿಂದ್ಹೊಳೆವಂತೆ। ಮಾಟವಾದ ಮುದ್ದು ಮುಖವು। ಕಾಂತಿಯಲ್ಲಿ ರವಿಶಶಿ ಹೊಳೆವಂತೆ। ಪ್ರಖ್ಯಾತ ಬಂದನು ಮಂಟಪಕೆ॥5॥ ಹೊಳೆವಕಿರೀಟಕುಂಡಲಹಾರಪದಕವು। ಬೆಲೆಯುಳ್ಳ ಕೌಸ್ತುಭ ಮಣಿಯು। ಬಲಹಸ್ತದಿಂದ ಅಮೃತಕಲಶವ ಪಿಡಿದಿದ್ದ। ಚೆಲುವ ಬಂದನು ರಾಜಸಭೆಗೆ॥6॥ ನೆರಿದಿದ್ದ ಸಭೆಯೆಲ್ಲ ಕರವೆತ್ತಿ ಮುಗಿಯಲು। ಪರಮಪುರುಷಈತನೆನುತ। ತಾಳಮದ್ದಳೆ ಧಿಮಿಧಿಮಿಕೆನಲು ನಾಟ್ಯವ। ಆಡಿದಳೂರ್ವಶಿರಂಭೆ॥7॥ ಮುತ್ತಿನಮಣೆಗಳ ತಂದಿಟ್ಟನೆ ಬಲಿರಾಯ। ಇತ್ತ ಬನ್ನಿರಿ ಕುಳ್ಳಿರೆನುತ। ಇತ್ತ ಕಡೆಯಲಿ ಬಂದ ಕಾರಣವೇನೆಂದು। ಹಸ್ತವ ಮುಗಿದು ಕೇಳಿದನು॥8॥ ಬಹಳ ದೂರದಿಂ ಬಂದೆನೊ ಬಲಿರಾಯ। ಕೀರುತಿ ವಾರ್ತೆಯ ಕೇಳಿ। ಮೂರುಪಾದ ಭೂಮಿಯ ದಾನವ ಕೊಡು ಎಂದು। ಬೇಡಿದ ಬಡಬ್ರಹ್ಮಚಾರಿ॥9॥ ಏನ ಬೇಡಿದೆ ಬಡಬ್ರಾಹ್ಮಣ ನೀನು। ಕನಕ ನಿಧಾನವ ಬೇಡು ಬೇಕೆಂದ್ರೆ। ಕನಕನಿಧಾನವ ನಾನೇನು ಮಾಡಲಿ। ಮೂರುಪಾದ ಭೂಮಿಯೇ ಸಾಕೆಂದ॥10॥ ಯಾಚಕ ಇವನಲ್ಲ ಯದುಕುಲತಿಲಕನು। ಮಾತಿಲಿ ಮನೆಯ ಕೊಂಬುವನು। ಸೂಚನೆ ಮಾಡಿದ ಶುಕ್ರಾಚಾರಿಯು ಬಲು। ಜೋಕೆ ಎಂದೆನುತ ಹೇಳಿದನು॥11॥ ಎಷ್ಟು ಅಂದರು ಇವ ಬಿಟ್ಟು ಹೋಗುವನಲ್ಲ। ಸಿಟ್ಟಲಿ ಬೈದು ಶಪಿಸುವ। ಕೊಟ್ಟೆನೊ ಯದುಕುಲ ತಿಲಕಗೆದಾನವ। ಕೊಟ್ಟ ವಾಕ್ಯಕ್ಕೆ ತಪ್ಪೆನೆಂದ॥12॥ ಚಿನ್ನದ ಗಿಂಡಿಲಿ ಉದಕವ ತರಹೇಳಿ ತನ್ನ ಸತಿಗೆ ಹೇಳಿದನು। ಅಂದನ ಮಾತನೆ ಕೇಳಿ ತಂದಳೆ ಉದಕವ। ಇಂದ್ರಾವತಿ ಸಭೆಯೊಳಗೆ॥13॥ ಇಂದಿರೆ ರಮಣನ ಪಾದ ಪದ್ಮವ ತೊಳೆದು। ವಂದಿಸಿದನು ಬಲಿರಾಯ। ಒಂದು ಪಾದವ ತೊಳೆಯಲು ಸುರನದಿ। ತುಂಬಿಹರಿದಳು ಧರಣಿಯಲಿ॥14॥ ಇನ್ನೊಂದು ಪಾದವ ತೊಳೆಯಲು ಸುರನದಿ। ಉಕ್ಕಿ ಹರಿದಳು ಆಕಾಶದಲಿ। ಇನ್ನೊಂದು ಪಾದವ ಇಡಲಿಕ್ಕೆ ಸ್ಥಳವಿಲ್ಲ। ಎಲ್ಲಿ ಇಡಲಿಹೇಳೆಂದ॥15॥ ಬಲಿಯ ನೆತ್ತಿಯ ಮೇಲಿಟ್ಟ ನಿಜವುಳ್ಳ ಪಾದವ। ಒತ್ತಿದ ಪಾತಾಳದ ಕೆಳಗೆ। ಚೆನ್ನಾಗಿ ವರ್ಣಪಾಶವ ತಂದು ಕಟ್ಟಲು। ಅನ್ಯಾಯವೆಂದರು ಜನರು॥16॥ ಇಂದ್ರನ ರಾಜ್ಯವ ಬಿಡಿಸಿಕೊಟ್ಟು ತಾ। ಉಪೇಂದ್ರನೆಂದು ಹೊಗಳಿಸಿಕೊಂಡ। ದುಂಧುಬಿ ಭೇರಿಯ ಬಡೆದಾರು ಸುರರೆಲ್ಲ। ಆನಂದ ಭರಿತರಾದಾರು॥17॥ ನಾಭಿಕಮಲದಲ್ಲಿ ಬ್ರಹ್ಮದೇವರ ಪಡೆದ। ಅಂಗುಷ್ಟದಿ ಭಾಗೀರತಿ ಪಡೆದ। ಕೋರೆದಾಡೆಯಲ್ಲಿ ತುಂಗಭದ್ರೆಯ ಪಡೆದ। ನಾರಾಯಣ ಗೆದುರುಂಟೆ॥18॥ ಮೆಚ್ಚಿದೆ ಬಲಿ ನಿನ್ನ ಭಕ್ತಿ ಭಾವಗಳಿಗೆ। ಬೇಕಾದವರವ ಬೇಡೆಂದ। ಮುಕ್ತಿದಾಯಕ ಸದಾ ಎನ್ನ ಮನೆಯೊಳಗಿರಬೇಕು। ಇಷ್ಟೇ ವರವು ಸಂಕೆಂದ॥19॥ ಬಲಿಯ ಬಾಗಿಲ ಕಾಯ್ದ ಕರುಣಾಕರಕೃಷ್ಣ। ಸಿರಿಯನುದ್ಧರಿಸಿದನಲ್ಲಿ। ಬಲವಂತರಂಗ ಅಂಬುಜವಿಠಲ ನಪಾದ। ಅನುದಿನ ನೆನ ಕಂಡ್ಯ ಮನವೆ॥20॥

ಪರ್ವತಗಳೆಲ್ಲಾ ನವರತ್ನಮಯವಾಗಿರಲು (ಬಲಿಪಾಡ್ಯಮಿ) ರಾಗ: ಆನಂದಭೈರವಿ

ಪರ್ವತಗಳೆಲ್ಲಾ ನವರತ್ನಮಯವಾಗಿರಲು। ತುರುಗಳೆಲ್ಲವು ಕರೆವ ಕಾಮಧೇನು। ತರುಗಳೆಲ್ಲವು ಕಲ್ಪವೃಕ್ಷಮಯ ವಾಗಿರಲು। ಧರೆಯನಾಳುವ ಬಲಿಯ ರಾಜ್ಯದಲ್ಲಿ॥1॥ ಅನ್ನದಾನಕೆ ತಕ್ಕ ಒದಗುವಾ ದ್ವಿಜರಿಲ್ಲ। ಕನ್ಯಾದಾನಕೆ ತಕ್ಕ ಪಾತ್ರವಿಲ್ಲ। ಹೊನ್ನು ದಾನಕೆ ತಕ್ಕ ಅನ್ಯತ್ರವಿಲ್ಲವೆಂದು। ಇನ್ನೊಬ್ಬರಿಲ್ಲ ಈ ಭೂಲೋಕದೊಳಗೇ॥2॥ ಇಷ್ಟು ಪರಿಯಲಿ ರಾಜ್ಯವಾಳುತಿರೆ ಬಲಿನಾಥ ತಾ। ಕೃಷ್ಣ ತಾ ಕೇಳಿ ಸೈರಿಸಲಾರದೇ। ಪುಟ್ಟಬ್ರಾಹ್ಮಣನಾಗಿ ಬಂದು ಭೂದಾನವನು।

ಕೊಟ್ಟಮೇಲೆ ಯಜ್ಞಸಂಪೂರ್ಣವೆಂದಾ॥3॥ ಹಸ್ತಿ ಕುದುರೆಗಳನ್ನು ಇತರರೊಯ್ಯುವನಲ್ಲ। ವಸ್ತ್ರ ಒಡವೆಗೆ ಬಂದ ವಿಪ್ರನಲ್ಲ। ಸ್ವಸ್ಥಿರವಾಗಿರದು ಮೂರಡೀ ಭೂಮಿಯನು। ಕೊಟ್ಟಮೇಲೆ ಧರ್ಮ ಶಾಶ್ವತವೆಂದನು॥4॥ ಅರಣ್ಯದೊಳಗೊಂದು ಶ್ರೀ ಮಂಟಪವನೆ ಕಟ್ಟಿಸೀ। ಚಾರುಗೆಣೆಯಾದ ಶ್ರೀಕೆರೆಯನೇ ಕಟ್ಟಿಸೀ। ಏರಿಯಾ ಮೇಲೆ ಶ್ರೀತುಳಸಿಯ ವನವನೇ ಬಿತ್ತಿಸಿ। ಮಾರನಾಜನಕಗೆ ಅರ್ಪಿಸುವೆನೆಂದಾ॥5॥ ಎಂದ ಮಾತನೆ ಕೇಳಿ ಬಂದು ಶುಕ್ರಾಚಾರ್ಯರೂ। ಬಂದಾತನ್ಯಾರೆಂದು ಅರಿಯೆ ನೀನು। ಒಂದಡೀ ಭೂಮಿಯನು ಧಾರೆಯನೆರೆದರೇ। ಕುಂದಿಹೋಯ್ತು ನಿನ್ನ ಸಂಪದವೆಂದನು॥6॥ ಮೂರ್ಜಗದೊಡೆಯ ಮಾಯದಲಿ ವಿಪ್ರನಾಗಿಹನು। ಸಹಜವಾಗಲಿ ಮಾತು ಹುಸಿಯಾಗಲೀ। ರಾಜಧರ್ಮವನಿತ್ತು ಧಾರೆ ಎರೆದೇನೆಂದೆನ್ನಲೂ। ಹೂಜಿಯೊಳಗಡ್ಡ ಬಂದನೇ ಶುಕ್ರನೂ॥7॥ ವಾಲಿದರು ಬೀಳಲದು ಕಾರಣವಿದೇನೆಂದು। ಕ್ರೂರ ದೃಷ್ಟಿಯಲಿ ನೋಡಿದನೇ ಬಲಿಯು। ವಾರಣದ ಬೆರಳಲ್ಲಿ ಇಟ್ಟ ಪವಿತ್ರದಲಿ। ಬಾರಿಸಿದನಾಚಾರ್ಯನೆಂದರಿಯದೇ॥8॥ ನಿನ್ನ ಹೆಜ್ಜೆಯಲಿ ಭೂಮಿಯನು ಅಳೆದುಕೋ ಎನ್ನಲೂ। ಉನ್ನತವಾಗಿ ಬೆಳೆದನೇ ರಂಗನೂ। ಇನ್ನೊಂದು ಪಾದ ಇನ್ನೆಲ್ಲಿ ತೋರೆನುತಲೀ। ಬೆನ್ನಮೇಲೆ ಅಳೆದು ಕೊಟ್ಟನೇ ಬಲಿಯು॥9॥ ಅಂದಿಂದಿಗೂ ನಯನಒಂದಾಯ್ತು ಶುಕ್ರರಿಗೇ। ಅಂದಿಂದಿಗೀ ಮಾತು ದಿಟವಾಯ್ತು। ರಾಜಧರ್ಮವನಿತ್ತು ಧಾರೆಯಾನೆರೆದನೇ। ಶ್ರೀ ಇಂದಿರಾರಮಣ ಶ್ರೀ ಗೋವಿಂದಗೇ ॥10॥ ಪಾತಾಳದೊಳಗೊಂದು ಅರಮನೆಯ ಕಟ್ಟಿಸೀ। ನೀ ತೆರಳಬೇಕೆಂದು ಬಲಿನಾಥನಾ। ಭೂತಳವನಾಳುವರೇ ಯಾವಾಗ ಬರಲೆಂದು। ಮಾತುಳಾಂತಕನೊಡನೆ ಬೆಸಗೊಂಡನು॥11॥ ವರುಷ ವರುಷಕ್ಕೆ ಬರುವ ನಲಿವ ದೀಪಾವಳಿಗೆ। ಪರಮಾನ್ನ ಭಕ್ಷ ಭೋಜನಗಳಿಂದ। ಪರಿಪರಿಯ ಫಲಪುಷ್ಪಗಳಿಂದ ಸಮರ್ಪಿಸಿ। ಇರುಳು ಮಾಡುವೆ ನಿನ್ನ ಪೂಜೆಯನು॥12॥ ಕೇರಿ ಕೇರಿಗಳಲ್ಲಿ ವಿಪ್ರರೀತಿಗಳಲ್ಲಿ। ಮುರಾರಿಯಾ ಆಲಯದಲೀ। ನಲಿವ ದೀಪಾವಳಿಗೆ ಬಾರೆಂದು ಕರೆದನು। ಹರಿ ಬಲಿಯನೂ॥13॥ ದಾನವಾಂತಕ ಹರಿಗೇ ದಿಗ್ದೇವಿ ಸುತಗೇ। ಪ್ರೇಮದಲಿ ದೇವಿಯಾ ಜಠರದಲಿ। ಜನಿಸಿದಗೇ ತಾನೇ ರಾಜ್ಯವನಿತ್ತ ಬಲಿನಾಥಗೇ ॥14॥

ಇಂದಿನ ಶುಭದಿನ ಹಾರೈಸುವೆವು — ರಾಗ: ಕಾನಡ

ಇಂದಿನ ಶುಭದಿನ ಹಾರೈಸುವೆವು। ಎಲ್ಲರ ಮನೆಯಲಿ ಬಂದು। ಜ್ಯೋತಿಯ ಬೆಳಗುತ ದೀಪವು ಹಚ್ಚಿ। ಶುಭವಾಗಲಿ ಎಲ್ಲರಿಗೆಂದು॥1॥ ಇಂದಿರ ಇಂದುಮತಿಯರು ಬಂದು ಚಂದದಿ ಹಾಡಿದರಿಂದು। ಭಾಗ್ಯದಲಕ್ಷ್ಮಿಯು ನಮ್ಮ ಮನೆಗೆ ಬಂದು। ಸೌಭಾಗ್ಯವ ತರಲಿ ಈ ಶುಭದಿನದಂದು॥2॥ ದೀಪಜ್ಯೋತಿಯು ಮನೆಮನ ಬೆಳಗಲಿ। ಎಲ್ಲರ ಹೃದಯದಿ ನಿಂದು। ಅಂಧಕಾರವನು ತೊಲಗಿಸಿ ಜನಗಳ। ಮನದಲಿ ಶಾಂತಿ ಸೌಹಾರ್ದದೆ ತಂದು॥3॥ ದೀಪಂಜ್ಯೋತಿ ಪರಂಜ್ಯೋತಿ ಜ್ಯೋತಿರ್ಲಕ್ಷ್ಮಿ ಎಂದು। ಸಡಗರದಲಿ ನಾವು ಸಾಲು ದೀಪಹಚ್ಚಿ। ಶುಭ ಕೋರುವೆವು ಇಂದು॥4॥

ಗೋವಿಂದಂ ಗೋಕುಲಾನಂದಂ ಗೋಪಾಲಂ(ಶ್ರೀಹರಿನಾಮ ಮಾಲಾಸ್ತೋತ್ರಂ)

ಗೋವಿಂದಂ ಗೋಕುಲಾನಂದಂ ಗೋಪಾಲಂ ಗೋಪಿವಲ್ಲಭಮ್। ಗೋವರ್ಧನೋದ್ಧಾರಿಂ ಧೀರಂ ತಂ ವಂದೇ ಗೋಮತೀ ಪ್ರಿಯಮ್॥1॥ ನಾರಾಯಣಂ ನಿರಾಕಾರಂ ನರವೀರಂ ನರೋತ್ತಮಮ್। ನೃಸಿಂಹಂ ನಾಗನಾಥಂ ಚ ತಂ ವಂದೇ ನರಕಾಂತಕಂ॥2॥ ಪೀತಾಂಬರಂ ಪದ್ಮನಾಭಂ ಪದ್ಮಾಕ್ಷಂ ಪುರುಷೋತ್ತಮಮ್। ಪವಿತ್ರಂ ಪರಮಾನಂದಂ ತಂ ವಂದೇ ಪರಮೇಶ್ವರಂ॥3॥ ರಾಘವಂ ರಾಮಚಂದ್ರಂ ಚ ರಾವಣಾರಂ ರಮಾಪತಿಂ। ರಾಜೀವ ಲೋಚನಂ ರಾಮಂ ತಂ ವಂದೇ ರಘುನಂದನಮ್॥4॥ ವಾಮನಂ ವಿಶ್ವರೂಪಂ ಚ ವಾಸುದೇವಂ ಚ ವಿಠಲಂ। ವಿಶ್ವೇಶ್ವರಾಂ ವಿಭುಂ ವ್ಯಾಸಂ ತಂ ವಂದೇ ವೇದವಲ್ಲಭಂ॥5॥ ದಾಮೋದರಂ ದಿವ್ಯಂ ಸಿಂಹಂ ದಯಾಲುಂ ದೀನನಾಯಕಮ್। ದೈತ್ಯಾರಿಂ ದೇವದೇವೇಶಂ ತಂ ವಂದೇ ದೇವಕೀ ಸುತಮ್॥6॥ ಮುರಾರಿಂ ಮಾಧವಂ ಮತ್ಸ್ಯಂ ಮುಕುಂದಂ ಮುಷ್ಟಿಮರ್ದನಮ್ ಮುಚಿಕೇಶಂ ಮಹಾಬಾಹುಂ ತಂ ವಂದೇ ಮಧುಸೂದನಂ॥7॥ ಕೇಶವಂ ಕಮಲಾಕಾತಂ ಕಾಮೇಶಂ ಕೌಸ್ತುಭಪ್ರಿಯಂ। ಕಾಮೋದರೇಧರಂ ಕೃಷ್ಣಂ ತಂ ವಂದೇ ಕೌರವಾಂತಕಂ॥8॥ ಭೂಧರಂ ಭುವನಾನಂದಂ

ಭೂತೇಶಂ ಭೂತನಾಯಕಂ। ಭಾವನೈಕಂ ಭುಜಂಗೇಶಂ ತಂ ವಂದೇ ಭವನಾಶನಂ॥9॥ ಜನಾರ್ಧನಂ ಜಗನ್ನಾಥಂ ಜಗಜ್ಜಾಂಡ್ಯ ವಿನಾಶನಂ। ಜಾಮದಗ್ನಿಂ ವರಂ। ಜ್ಯೋತಿಸ್ತಂ ವಂದೇ ಜಲಶಾಯಿನಂ॥10॥ ಚತುರ್ಭುಜಂ ಚಿದಾನಂದಂ। ಚಾಣೂರ ಮಲ್ಲಮರ್ಧನಂ। ಚರಾಚರ ಗತಂದೇವಂ ತಂ ವಂದೇ ಚಕ್ರಪಾಣಿ ನಂ॥11॥ ಶ್ರೀಯಃನರಂ ಶ್ರೀಯೋನಾಥಂ ಶ್ರೀಧರಂ ಶ್ರೀವರಪ್ರದಂ ಶ್ರೀವತ್ಸಲಧರಃ ಸೌಮ್ಯಂ ತಂ ವಂದೇ ಶ್ರೀ ಸುರೇಶ್ವರಂ॥12॥ ಯೋಗೀಶ್ವರಂ ಯಜ್ಞಪತಿಂ ಯಶೋದಾನಂದದಾಯಕಂ। ಯಮುನಾ ಜಲಕಲ್ಲೋಲ ತಂ ವಂದೇ ಯದುನಾಯಕಂ॥13॥ ಶಾಲಿಗ್ರಾಮ ಶಿಲಾಶುದ್ಧಂ ಶಂಕಚಕ್ರೋಪ ಶೋಭಿತಮ್। ಸುರಾಸುರಸದಾಸೇವ್ಯಂ ತಂ ವಂದೇ ಸಾಧುವಲ್ಲಭಂ॥14॥ ತ್ರಿವಿಕ್ರಮಂ ತಪೋಮೂರ್ತಿಂ ತ್ರಿವಿಧಾಪಾಘೌಘನಾಶನಂ। ತ್ರಿಸ್ಥಲಂ ತೀರ್ಥರಾಜೇಂದ್ರ ತಂ ವಂದೇ ತುಲಸೀ ಪ್ರಿಯಂ॥15॥ ಅನಂತ ಮಾದಿಪುರುಷಮಚ್ಯುತಂ ಚ ವರಪ್ರದಂ। ಆನಂದಚಂದ ಸದಾನಂದಂ ತಂ ವಂದೇ ಜಾಘನಾಶನಂ॥16॥ ಲೀಲಯಾ ಧೃತಂ ಭೂಭಾರಂ ಲೋಕಸತ್ವೈಕ ವಂದಿತಂ। ಲೋಕೇಶ್ವರಂ ಚ ಶ್ರೀಕಾಂತಂತಂ ವಂದೇ ಲಕ್ಷ್ಮಣಪ್ರಿಯಂ॥17॥ ಹರಿಂ ಚ್ಯಹರಿಣಾಕ್ಷಂಚ ಹರಿನಾಥಂ ಹರಿಪ್ರಿಯಂ। ಹಲಾಯುಧ ಸಹಾಯಂ ಚ ತಂ ವಂದೇ ಹನುಮತ್ ಪತಿಂ॥18॥ ಹರಿನಾಮ ಕೃತಾಮಾಲ ಪವಿತ್ರಾ ಪಾಪನಾಶಿನೀ। ಬಲಿರಾಜೇಂದ್ರೇಣ ಚೋಕ್ತಾಕಂಠೇ ಧಾರ್ಯಾ ಪ್ರಯತ್ನತಃ॥19॥ ಇತಿ ಬಲಿರಾಜೇಂದ್ರೋಕ್ತ ಹರಿನಾಮಮಾಲಾ ಸ್ತೋತ್ರಮ್॥

ಬನ್ನಿ ಓ ಗೆಳತಿಯರೆ **ರಾಗ: ಮಧ್ಯಮಾವತಿ**

ಬನ್ನಿ ಓ ಗೆಳತಿಯರೆ ಆಡೋಣ ಬನ್ನಿ। ನಿತ್ಯ ಬಾಳಿನರಾಗ ಹಾಡೋಣ ಬನ್ನಿ॥ಪ॥ ವೀಣೆ ಇಂಚರದಂತೆ ಖಣಿಯಾಗಿ ಬನ್ನಿ। ಕಿಂಕಿಣಿಯ ಝಣಝಣಕೆ ಕಣವಾಗಿ ಬನ್ನಿ। ಬೆಳಗಿನೊಲು ಬೆಳಬೆಳಗಿ ಹೊಳೆಹರಿದು ಬನ್ನಿ। ಚಿಲುಮೆಯೊಲು ಪುಟಿಪುಟಿದು ನರ್ತಿಸುವಾ ಬನ್ನಿ॥1॥ ದಿವ್ಯ ದೀಪಾವಳಿಗೆ ದೀಪಮಾಲೆಯ ಹಾಕಿ। ರಂಗವಲ್ಲಿಯ ಕಲೆಯ ನವರಂಗ ರಚಿಸಿ। ಮಾಗಿ ಯೋಗಿಯ ರುದ್ರ ತಾಂಡವವ ನಡೆಸಿ। ಶತಶೃಂಗ ಶಿಖರದಲಿ ಶಿವವಾಗೆ ಬನ್ನಿ॥2॥

ಬೆಳಗು ಬಾ ಹಣತೆಯನು **ರಾಗ: ಕಲ್ಯಾಣಿ**

ಬೆಳಗು ಬಾ ಹಣತೆಯನು ನನ್ನೆದೆಯ ಗುಡಿಯಲ್ಲಿ। ದಿವ್ಯ ದೀಪಾವಳಿಯ ಶುಭಘಳಿಗೆಯಲ್ಲಿ॥ಪ॥ ಬೆಳಗು ಬಾ ಓ ಗೆಳತಿ। ನಿನ್ನ ಒಲವಿನ ಪ್ರಣತಿ। ಶತಮಾನಗಳ ತಿಮಿರ। ಮುಸುಕಿದೀ ಮಂದಿರದಲ್ಲಿ। ಎದೆಯಾಳದಲ್ಲಿ ಬೆಳಗು ಬಾ ದೀವಿಗೆಯ। ನನ್ನೆದೆಯ ಗುಡಿಯಲ್ಲಿ। ದಿವ್ಯದೀಪಾವಳಿಯ ಶುಭಲಗ್ನದಲ್ಲಿ॥1॥ ಎದೆಯ ಕಸವನು ಗುಡಿಸಿ। ರಂಗವಲ್ಲಿಯ ನಿರಿಸಿ। ಸಿಂಗರಿಸುನನ್ನೆದೆಯ ನಿನ್ನ ಪ್ರೇಮದಮೃತ ಸಂಪತ್ತಿನಲ್ಲಿ॥ ಬೆಳಗು ಬಾ ಜ್ಯೋತಿಯನು। ಎದೆಯ ಮಂದಿರದಲ್ಲಿ। ಜಗಕೆ ಬೆಳಕಾಗುವೀ ಶುಭಘಳಿಗೆಯಲ್ಲಿ॥2॥ ಇನಿತು ದಿನ ಜಡ ನಾನು। ಬಂದೆ ಚೇತನ ನೀನು। ನಿನ್ನ ಶಕ್ತಿಯ ಬಲದಿ ವ್ಯಕ್ತಿಯಾದೆನು। ನಾನು ಈ ಲೋಕದಲ್ಲಿ॥3॥

ಹೋದ ವರುಷ ಬಂದ ಹಬ್ಬ **ರಾಗ: ಚಕ್ರವಾಕ**

ಹೋದ ವರುಷ ಬಂದ ಹಬ್ಬ। ಹೋದ ವರುಷ ಹೊಳೆದ ಬೆಳಕು। ಮತ್ತೆ ಮರಳಿ ಬಂದಿತು। ಮತ್ತೆ ಮರಳಿ ಹೋಯಿತು॥ಪ॥ ಅಂದು ಕಂಡ ಬೆಳೆಯ ಹಸಿರು।ಅಂದು ಕಂಡ ಇಳೆಯ ಉಸಿರು। ಕಣ್ಣಮುಂದೆ ಮುತ್ತಿ ಬಂದು। ಜನ್ಮ ಕುಸಿದುತಂದ ಬಿಂದು॥1॥ ದೀಪವಿದನು ಹಚ್ಚಲಿಕ್ಕೆ। ಬೆಳಕನಿದನು ಕಾಣಲಿಕ್ಕೆ। ಒಂದು ವರುಷ ಕಾಯಬೇಕೆ। ಒಂದು ವರುಷ ಕಳೆಯಬೇಕೆ॥2॥ ಒಮ್ಮೆ ಹೊಳೆದ ದೀಪನಂದಿ। ಒಮ್ಮೆ ಕಂಡ ಕಿರಣನಲುಗಿ। ಒಮ್ಮೆ ಕಂಡ ನಲಿವು ಹಿಂಗಿ। ಮತ್ತೆ ಬಳಲಿ ಬಾಡಲೇಕೆ॥3॥ ಮನದ ಇಳೆಯ ಹಸಿರಿನಲ್ಲಿ। ಗುಣದ ಬೆಳೆಯ ಸುಳಿಯ ತೆಗೆವ। ಒಳಗೆ ದೀಪ ಹಚ್ಚಿ ನಲಿದು। ಬೆಳಗಿನೊಳಗೆ ಬೆಳಕ ಕಾಣ್ಬ॥4॥

ಬಂದಿತು ಬಂದಿತು ದೀಪಾವಳಿ **ರಾಗ: ಸಾರಂಗ**

ಬಂದಿತು ಬಂದಿತು ದೀಪಾವಳಿ। ತಂದಿತು ಸಂತಸ ದೀಪಾವಳಿ। ಮಕ್ಕಳ ಬೆಡಗಿನ ದೀಪಾವಳಿ। ಮನೆ-ಮನ ಬೆಳಗುವ ದೀಪಾವಳಿ॥ ಬಂದಿತು ಬಂದಿತು ದೀಪಾವಳಿ। ಸುಟ್ಟಿತು ದುಡ್ಡನು ದೀಪಾವಳಿ। ಕಿವಿಗಡಚಿಕ್ಕುವ ದೀಪಾವಳಿ। ತಾತನು

ಬೆಚ್ಚುವ ದೀಪಾವಳಿ।। ಬಂದಿತು ಬಂದಿತು ದೀಪಾವಳಿ। ಮದ್ದಿನ ಗದ್ದಲ ದೀಪಾವಳಿ।। ಸದ್ದಿನ ಸುರಿಮಳೆ ದೀಪಾವಳಿ। ಢಂ ಢಂ ಎಂದಿತು ದೀಪಾವಳಿ। ಬಂದಿತು ಬಂದಿತು ದೀಪಾವಳಿ। ಸಡಗರ ತುಂಬಿತು ದೀಪಾವಳಿ। ಸರಿಸಿತು ಕತ್ತಲೆ ದೀಪಾವಳಿ। ಚೆಲ್ಲಿತು ಬೆಳಕನು ದೀಪಾವಳಿ।।

ಎಲ್ಲೆಲ್ಲಿ ನೋಡಲು ಹರುಷದಿಂದ **ರಾಗ: ಮೋಹನ**

ಎಲ್ಲೆಲ್ಲಿ ನೋಡಲು ಹರುಷದಿಂದ। ಜ್ಯೋತಿಗಳ ಹಚ್ಚಿ ಬೆಳಗಲು। ಬೆಳದಿಂಗಳಾ ನಕ್ಷತ್ರ ಹೊಳಪಲ್ಲಿ। ಕಣ್ಣಿಗಾನಂದದ ದೀಪಾವಳಿ।।1।। ಮನೆ ಮನೆಯ ಅಂಗಳ ಸಾರಿಸಿ। ರಂಗವಲ್ಲಿಯ ನಿಡುತಲೀ। ಮನೆಮನೆಯ ಬಾಗಿಲ ಹಸಿರು ತೋರಣ। ನಗುನಗುತಿರುವ ದೀಪಾವಳಿ।।2।। ಮನೆಯ ಅಳಿಯ ಮಗಳು ತೌರಿಗೆ। ಹಬ್ಬಕ್ಕೆ ಬರುವ ಸಂಭ್ರಮ। ತಂದೆತಾಯಿಅಳಿಯ ಮಗಳನ್ನು। ಸ್ವಾಗತಿಪ ದೀಪಾವಳಿ।।2।। ಸರ್ವರು ಹೊಸ ಉಡುಪು ಧರಿಸಿ ಸಂತೋಷದಿಂದ। ನಲಿಯುತ್ತಾ ದೇವರ ಪೂಜೆಯನು ಮಾಡಿ। ಒಬ್ಬಟ್ಟು ಪೂಜೆಯನು ಮಾಡಿ। ಒಬ್ಬಟ್ಟು ಅರ್ಪಿಸುವ ದೀಪಾವಳಿ।।4।। ಬಂಧು ಬಾಂಧವರೆಲ್ಲ ಕೂಡಿ। ಹಬ್ಬದೂಟವ ಮಾಡುತ। ಬಣ್ಣಬಣ್ಣದ ಪಟಾಕಿ ಹಚ್ಚುವ। ವೈಭವದ ದೀಪಾವಳಿ।।5।।

ಕಾರ್ತೀಕ ಶುದ್ಧ ಪಾಡ್ಯಮಿ **ರಾಗ: ಕುರಂಜಿ**

ಕಾರ್ತೀಕ ಶುದ್ಧ ಪಾಡ್ಯಮಿ। ದೀಪಾವಳಿ ಹಬ್ಬವು। ಬಲೀಂದ್ರನ ಪೂಜೆಯ ಮಾಡುವ ದಿವಸವು।।ಪ।। ಅಳಿಯಂದಿರಿಗೆ ಸುಗ್ಗಿ ಹಬ್ಬ। ಅತ್ತೆ ಮನೆಗೆ ಹೋಗಲು। ಚೆಂದದ ಹೆಂಡತಿ ನೋಡಿ ನಲಿಯುವ। ಹಬ್ಬವು ಬಂದಿತು।।1।। ಬಂದನು ಅತ್ತೆ ಮನೆಗೆ ಅಳಿಯನು। ಸಂತಸದಿಂದಲಿ ತೋರಿದರೆಲ್ಲರೂ। ಸ್ವಾಗತವನು ನಾದಿನಿ ಮೈದುನರೆಲ್ಲರೂ।।2।। ಮಿಂದರು ಎಲ್ಲರು ಬೆಳಗಿನ ಜಾವದಿ। ಉಂಡರು ಕಡುಬು ಪಾಯಸವ। ಹಚ್ಚಿದರೆಲ್ಲರು ಹುಡುಗರು ಸೇರಿ। ಭಾವನು ತಂದ ಪಟಾಕಿಯನೂ।।3।। ನಡೆಯಿತು ರಾತ್ರಿ ಆರತಿ ಅಕ್ಷತೆ। ಅಕ್ಕ ಮತ್ತು ಭಾವನಿಗೆ। ಹಚ್ಚಿದರೆಲ್ಲರೂ ಹುಡುಗರು ಸೇರಿ। ಭಾವನು ತಂದ ಮತಾಪುಗಳಾ।।4।।

ವರುಷಕ್ಕೆ ಬರುವುದು ಅರಸು ದೀಪಾವಳಿ **ರಾಗ: ಮಾಂಡ್**

ವರುಷಕ್ಕೆ ಬರುವುದು ಅರಸು ದೀಪಾವಳಿ ।। ಅರಸೀನವನದ್ದೀ ಮಡಿಯುಟ್ಟು । ಅರಸೀನವನದ್ದೀ ಮಡಿಯುಟ್ಟು ಮಂಡೇಯ ಕಟ್ಟೀ। ಭೂಮಿಗಾರತಿಬೆಳಗ್ಯಾರೇ ।। ಚಿನ್ನದಾ ಬಿಂದಿಗೆಯೊಳಗೆ । ಸಣ್ಣಕ್ಕಿಯ ತುಂಬಿರಿಸಿ । ಉತ್ತಮರ ಮನೆಯಲ್ಲೀ ಬಲೀಂದ್ರನ ಕರೆಸ್ಯಾರೇ ।।2 ಸಲ।। ಶ್ರೀ ಮಹಾ ಭಕ್ತನೆಂದೆನಿಸಿ । ಧರೆಯ ರಕ್ಷಿಪ ದೊರೆ ಎನಿಸಿ ।।2 ಸಲ।। ಶ್ರೀ ರಾಮಾ ಬಾಗಿಲ ಕಾಯ್ದಾ। ಬಲೀಂದ್ರನರಮನೆಗೆ ।।2 ಸಲ।। ಪಟ್ಟೀಯ ಧೋತ್ರವನುಟ್ಟು । ಮುತ್ತಿನಂಚಿನ ಕೊಡೆ ಹಿಡಿದೂ । ಬೆಳ್ಳೀಕುದುರೆಯನೇರಿ ಇಳೆಗೆ ಬಂದನೆ ಬಲೀಂದ್ರ ।।2 ಸಲ।। ಕಟ್ಟಾದೆ ಕಪಿಲೆಯು ಕರೆಯೇ । ಬಿತ್ತಾದೆ ಭೂಮಿಯು ಬೆಳೆಯೇ । ಅವತನ್ನ ರಾಜ್ಯಕ್ಕೆ ಸುಖವ ತಂದನೆ ಬಲೀಂದ್ರ ।।2 ಸಲ।।

ಪಿಂಗಾಕ್ಷವಿಕ್ರಮತುರಂಗಾದಿ

ಪಿಂಗಾಕ್ಷವಿಕ್ರಮತುರಂಗಾದಿ ಸೈನ್ಯ ಚತುರಂಗಾವಲಿಪ್ತದನುಜಾ-ಸಾಂಗಾಧ್ವರಸ್ಥಬಲಿ ಸಾಂಗವಪಾತ ಹೃಷಿತಾಂಗಾಮ ರಾಲಿನುತ ತೇ। ಶೃಂಗಾರಪಾದ ನಖತುಂಗಾಗ್ರಭಿನ್ನಕನಕಾಂಗಾಂಡ ಪಾತಿ ತಟನೀ- ತುಂಗಾತಿಮಂಗಲ ತರಂಗಾಭಿಭೂತ ಭಜಕಾಂಗಾಘ ವಾಮನ ನಮಃ।।1।। ಧಾನ್ಯರ್ಹ ವಾಮನತನೋ ನಾಥಪಾಹಿ ಯಜಮಾನಾಸುರೇಶ ವಸುಧಾ ದಾನಾಯ ಯಾಚನಿಕ ಲೀನಾರ್ಥವಾಗ್ವಶಿತನಾನಾಸದಸ್ಯದನುಜ। ಮೀನಾಂಕನಿರ್ಮನಿಶಾನಾಥಕೋಟಿಲ ಸಮಾನಾತ್ಮ ಮೌಂಜಿಕಗುಣಕೌ-ಪೀನಾಚ್ಛಸೂತ್ರ ಪದಯಾನಾ ತಪತ್ರಕರಕಾನಮ್ಯದಂಡ ವರಭೃತ್।।2।।

ಜಯಮಂಗಳಂ ನಿತ್ಯ ಶುಭ ಮಂಗಳಂ–ಕಲ್ಲೆಲ್ಲ ಕನಕಮಯ(ಬಲೀಂದ್ರಪೂಜೆ) **ರಾಗ: ಸುರಟಿ**

ಜಯಮಂಗಳಂ ನಿತ್ಯ ಶುಭ ಮಂಗಳಂ।।ಪ।। ಕಲ್ಲೆಲ್ಲ ಕನಕಮಯ ಮುಳ್ಳಿಲ್ಲ ರಾಜನಾ। ಹುಲ್ಲು ಸಸಿ ಎಲ್ಲ ಮುತ್ತು ಹವಳ। ಎಲ್ಲೆಲ್ಲಿ ನೋಡಿದರು ಕೆರೆಬಾವಿ ಹಾಲ್ ತುಪ್ಪ। ಬಲ್ಲಿದ ಬಲೀಂದ್ರನಾ ರಾಜ್ಯದಲ್ಲಿ -।।1।। ಗಿಡ್ಡಬ್ರಾಹ್ಮಣನೊಬ್ಬ

ವೇದವಿದ್ಯವ ಕಲಿತು। ಬಿಡದೆ ಬಲೀಂದ್ರನಾ ಮೂರಡಿಯ ಬೇಡೆ।ದಡ್ಡನಂದದಿ ಏನ ಬೇಡಿದೆಯೋ ಬ್ರಾಹ್ಮಣ। ದುಡ್ಡ ಬೇಡಲಿ ನಾನು ಕೊಡುವೆನೆಂದ॥2॥ ಆನೆ ಕುದುರೆ ಬೇಡು ಅರ್ಧ ರಾಜ್ಯವ ಬೇಡು। ಏನ ಬೇಡುವೆ ಬೇಡು ಎಲೆ ಬ್ರಾಹ್ಮಣ। ಆನೆ ಕುದುರೆ ನಮಗೆ ಯಾವಾಗ ಸ್ಥಿರವಿಲ್ಲ। ತುಳಸೀನೆ ಬಿತ್ತಿ ನಿಮ್ ಹರಸುತಿರುವೆ॥3॥ ಕರದಲ್ಲಿ ಗಿಂಡೀಯ ಪಿಡಿದನೇ ಬಲೀಂದ್ರ। ಎರೆದನೇ ಮೂರಡಿಯ ಧಾರೆಗಳನು। ಕಡು ಉಗ್ರನಾಗಿ ಶುಕ್ರನು ಅಡ್ಡ ಬಂದರೆ। ಹಿಡಿದ ದರ್ಭೇ ಕೊನೆಯಲಿರಿದ ಕಣ್ಣ ॥4॥ ಪಾತಾಳಲೋಕದಲಿ ಕಟ್ಟಿ ಗುಡಿ ತೋರಣವ। ಭೂತಳಾಪತಿಯನಲ್ಲಿರಿಸಿ ಬೇಗ। ಕ್ಷಾತಿಯಿಂದಲಿ ಬರುವೋ ದೀವಳೀಗೆ ಪಾಡ್ಯದಲಿ। ಪ್ರೀತಿಯಿಂದಲಿ ಬರುವ ಬಲೀಂದ್ರನು॥5॥

❖ ❖ ❖

47. ಧನ್ವಂತರಿ ಜಯಂತಿ

ಆಯುವೃದ್ಧಿಯಾಗೋದು (ಧನ್ವಂತರಿ ಸ್ತೋತ್ರ ಸುಳಾದಿ)

ಆಯುವೃದ್ಧಿಯಾಗೋದು ಶ್ರೇಯಸ್ಸು ಬರುವದು। ಕಾಯ ನಿರ್ಮಲಿನಾ ಕಾರಣವಾಗುಹದೋ। ಮಾಯಾ ಹಿಂದಾಗುವದು ನಾನಾ ರೋಗದ ಬೀಜ ಬೇಯಿಸಿ ಕಳೆವದು ವೇಗದಿಂದ। ನಾಯಿ ಮೊದಲಾದ ಕುತ್ಸಿತ ದೇಹ ನಿ। ಕಾಯವಾ ತೆತ್ತು ದುಷ್ಕರ್ಮದಿಂದ। ಕ್ರೀಯಮಾಣ ಸಚಿಚಿತ ಭರಿತವಾಗಿದ್ದ ದುಃಖ। ಹೇಯಸಾಗರದೊಳು ಬಿದ್ದು ಬಳಲಿ। ನೋಯಿಸಿಕೊಂಡು ನೆಲೆಗಾಣದೆ ಒಮ್ಮೆ ತನ್ನ ಬಾಯಲಿ ವೈದ್ಯಮೂರ್ತಿ ಶ್ರೀಧನ್ವಂತ್ರಿ। ರಾಯಾ ರಾಜೌಷಧಿ ನಿಯಾಮಕ ಕರ್ತ। ಶ್ರೀಯರಸನೆಂದು ತುತಿಸಲಾಗಿ। ತಾಯಿ ಒದಗಿ ಬಂದು ಬಾಲನ್ನ ಸಾಕಿದಂತೆ। ನೋಯಗೊಡದೆ ನಮ್ಮನ್ನು ಪಾಲಿಪಾ। ಧ್ಯೇಯಾ ದೇವಾದಿಗಳಿಗೆ ಧರ್ಮಜ ಗುಣಸಾಂದ್ರ। ಶ್ರೇಯಸ್ಸು ಕೊಡುವನು ಭಜಕರಿಗೆ। ಮಾಯಾಮಂತ್ರದಿಂದ ಜಗವೆಲ್ಲ ವ್ಯಾಪಿಸಿದ ನ್ಯಾಯವಂತನಾಗಿ ಚೇಷ್ಟೆಮಾಳ್ಪಾ। ವಾಯುವಂದಿತ ನಿತ್ಯ ವಿಜಯವಿಠ್ಠಲರೇಯಾ। ಪ್ರೀಯನು ಕಾಣೋ ನಮಗೆ ಅನಾದಿ ರೋಗ ಕಳೆವ॥1॥। ಧನ್ವಂತ್ರಿ ಶ್ರೀಧನ್ವಂತ್ರಿ ಎಂದು। ಸನ್ನುತಿಸಿ ಸತತ ಭಿನ್ನ ಜ್ಞಾನದಿಂದ। ನಿನ್ನವ ನಿನ್ನವನೊ ಘನ್ನತಿಯಲಿ ನೆನೆವ। ಮನುಜ ಭುವನದೊಳು ಧನ್ಯನು ಧನ್ಯನೆನ್ನಿ। ಚೆನ್ನ ಮೂರುತಿ ಸುಪ್ರಸನ್ನ ವಿಜಯವಿಠ್ಠಲನ್ನ। ಸತ್ಯರೆಂದು ಬಣ್ಣಿಸು ಬಹುವಿಧದಿ॥2॥ಶಶಿಕುಲೋದ್ಭವ ದೀರ್ಘತಮ ನಂದನದೇವಾ। ಶಶಿವರ್ಣ ಪ್ರಕಾಶ ಪ್ರಭುವೆ ವಿಭುವೆ। ಶಶಿಮಂಡಲ ಸಂಸ್ಥಿತ ಕಲಶ ಕಲಶಪಾಣಿ। ಬಿಸಜಲೋಚನ ಅಶ್ವಿನೇಯ ವಂದ್ಯಾ। ಶಶಿಗರ್ಭ ಭೂರುಹ ಲತೆ ಪೊದೆ ತಾಪ ಓಡಿಸುವ ಔಷಧಿ ಶ್ರೀತುಲಸಿ ಜನಕ। ಅಸುರ ನಿರ್ಜರ ತತಿನೆರೆದು ಗಿರಿಯ ತಂದು। ಮಿಸುಕದಲೆ ಮಹೋದಧಿ ಮರ್ದಿಸಲಾಗಿ। ನಸುನಗುತ ಪುಟ್ಟಿದೆ ಪೀಯೂಷ ಘಟ ಧರಿಸಿ। ಅಸಮ ದೈವನೆ ನಿನ್ನ ಮಹಿಮೆಗೆ ನಮೋ। ಬಿಸಜ ಸಂಭವ ರುದ್ರ ಮೊದಲಾದ ದೇವತಾ। ಋಷಿನಿಕರ ನಿನ್ನ ಕೊಂಡಾಡುವರೋ। ದಶದಿಶದೊಳು ಮೆರೆವ ವಿಜಯವಿಠ್ಠಲಭಿಷ್ಕಾ। ಅಸು ಇಂದ್ರಿಯಂಗಳ ರೋಗನಿವಾರಣ॥3॥ ಶರಣು ಶರಣು ಧನ್ವಂತರಿ ತಮೋ ಗುಣನಾಶಾ। ಶರಣು ಆರ್ತಜನ ಪರಿಪಾಲಕ ದೇವಾ। ತರುವೆ ಭವ ತಾಪಹರಣ ದಿತಿಸುತ। ಹರಣ ಮೋಹಕ ಲೀಲಾ ಪರಮಪೂರ್ಣ ಬ್ರಹ್ಮ। ಬ್ರಹ್ಮ ಉದ್ಧಾರಕ ಉರುಪರಾಕ್ರಮ। ಉಪುಪರಾಕ್ರಮ ಉರಗಶಾಯಿ। ವರಕಿರೀಟ ಮಹಾಮಣಿ ಕುಂಡಲ ಕರ್ಣ। ಮಿರುಗುವ ಹಸ್ತ ಕಂಕಣ ಹಾರಪದಕ ತಾಂ-। ಬರಕಾಂಚಿ ಪೀತಾಂಬರ ಚರಣಭೂಷಾ ಸಿರಿವತ್ಸಲಾಂಛನ ವಿಜಯವಿಠಲರೇಯಾ। ತರುಣಗಾತರ ಜ್ಞಾನಮುದ್ರಾಂಕಿತ ಹಸ್ತ॥4॥ ಏಳುವಾಗಲಿ ಮತ್ತೆ ತಿರುಗಿ ತಿರುಗುತಲಿ। ಬೀಳುವಾಗಲಿ ನಿಂತು ಕುಳಿತಿರುವಾಗಲಿ। ಹೇಳುವಾಗಲಿ ಮಾತು ಕೇಳುವಾಗಲಿ ಕರೆದು। ಪೇಳುವಾಗಲಿ ಪೋಗಿ ಸತ್ಕರ್ಮಮಾಡುವಾಗ। ಬಾಳುವಾಗಲಿ ಬೋಜನ ನಾನಾ ಷಡ್ರಸ ಸಂ। ಮ್ಮೇಳನವಾಗಲಿ ಮೇಲು ಪುತ್ರಾದಿ ಒಡೆಯೊಡನೆ। ಖೇಳವಾಗಿ ಮನುಜ ಮರ್ಯಾದೆ ನಿನ್ನಯ ನಾಲಿಗೆ ಕೊನೆಯಲ್ಲಿ ಧನ್ವಂತರಿ ಎಂದು ಒಮ್ಮೆ। ಕಾಲ ಅಕಾಲದಲ್ಲಿ ಸ್ಮರಿಸಿದರೆ ಅವರಿಗೆ ವ್ಯಾಳ್ಯೆ ವ್ಯಾಳೆಗೆ ಬಾಹ ಭವಬೀಜ ಪರಿಹಾರ। ನೀಲಮೇಘಶ್ಯಾಮ ವಿಜಯವಿಠ್ಠಲರೇಯ। ವಾಲಗ ಕೊಡುವನು ಮುಕ್ತರ ಸಂಗದಲಿ॥5॥ ಧಂ ಧನ್ವಂತರಿ ಎಂದು ಪ್ರಣವಪೂರ್ವಕದಿಂದ। ವಂದಿಸಿ ನೆನೆಯಲು ವಿಜಯವಿಠ್ಠಲ ಒಲಿವ॥6॥

ಆವ ರೋಗವೋ ಎನಗೆ ರಾಗ: ಯದುಕುಲಕಾಂಭೋಜಿ-ಮಿಶ್ರಝಂಪೆತಾಳ

ಆವ ರೋಗವೋ ಎನಗೆ ದೇವ ಧನ್ವಂತ್ರಿ। ಸಾವಧಾನದಿ ಎನ್ನ ಕೈಪಿಡಿದು ನೋಡಯ್ಯ॥ಪ॥ ಹರಿಮೂರ್ತಿಗಳು ಎನ್ನ ಕಂಗಳಿಗೆ ಕಾಣಿಸವು। ಹರಿಯ ಕೀರ್ತನೆಯು ಕೇಳಿಸದು ಕಿವಿಗೆ। ಹರಿಮಂತ್ರ ಸ್ತೋತ್ರ ಬಾರದು ಎನ್ನ ನಾಲಿಗೆಗೆ। ಹರಿಪ್ರಸಾದ ಜಿಹ್ವೆಗೆ ಸವಿಯಾಗದಯ್ಯ॥1॥ ಹರಿಪಾದ ಸೇವೆಗೆನ್ನ ಹಸ್ತಗಳು ಚಲಿಸವು। ಗುರುಹಿರಿಯರಂಘ್ರಿಗೆ ಶಿರಬಾಗದು। ಹರಿಯ ನಿರ್ಮಾಲ್ಯ ವಾಘ್ರಾಣಿಸದು ನಾಸಿಕವು। ಹರಿಯಾತ್ರೆಗಳಿಗೆನ್ನ ಕಾಲೇಳವಯ್ಯಾ॥2॥ ಅನಾಥ ಬಂಧು ಗೋಪಾಲ ವಿಠಲರೇಯ। ಎನ್ನ ಭಾಗದ ವೈದ್ಯ ನೀನೆಯಾದೆ। ಅನಾದಿ ಕಾಲದ ಭವರೋಗ ಕಳೆಯಯ್ಯ। ನಾನೆಂದಿಗೂ ಮರೆಯೇ ನೀ ಮಾಡಿದುಪಕಾರ॥3॥

ಧನ್ವಂತ್ರಿದೇವ ನೀನಿವನ ಕರುಣದಿ ರಾಗ: ಅಮೃತವರ್ಷಿಣಿ - ಆದಿತಾಳ

ಧನ್ವಂತ್ರಿ ದೇವ ನೀನಿವನ ಕರುಣದಿ ಕಾಪಾಡೋ ಹರಿಯೇ। ಅನ್ಯವಾರ್ತೆಯ ಮನಕೆ ತಾರದೆ ನೀ ರಕ್ಷಿಸೋ ಹರಿಯೆ॥ಪ॥ ಮನದಲ್ಲಿ ನೀ ನಿಂತು ಸ್ಥಿಮಿತವ ತಾರಯ್ಯ। ಮನದಭಿಮಾನಿ ರುದ್ರನಾ ತಾತ। ಮನದ ಕಲ್ಮ ಷಗಳ ಕಿತ್ತುತ್ತ ನೀ ಬಂದು ನೆನೆಯುವಂಥ ಬುದ್ಧಿ ನಿರುತ ನೀಡಯ್ಯ॥1॥ ದೇವ ನಿಕರಕೆ ನೀನು ಅಮೃತವನುಣಿಸಿದೆಯೋ ಕಾವ ಕರುಣಾಶಾಲಿ ಕಾಯಯ್ಯ ದೊರೆಯೇ। ಅವನಿಯೊಳು ಇರುವಂಥ ಅನ್ಯದೇವರ ಬಿಟ್ಟು ಶರ್ವವಂದ್ಯನೆ ನೀನು ಒಲಿದು ಬಾರಯ್ಯ॥2॥ ಮಾಧವನೆ ನೀನೆಮ್ಮ ಮನಪಂಕಗಳ ಕಿತ್ತು ಸಾಧನೆಯ ಹಾದಿಯನು ತೋರಬೇಕಯ್ಯ।ವ್ಯಾಧಿಗಳ ಪರಿಹರಿಸಿ ಮೋದಮನವನಿತ್ತು ಸಾಧುಗುಣ ಕರುಣಿಸಯ್ಯ ವರಾಹ ಹರಿ ವಿಠಲಾ॥3॥

ಮನಸ್ಸಿಗೆ ಬಂದ ಧನ್ವಂತರಿ

ಮನಸ್ಸಿಗೆ ಬಂದ ಧನ್ವಂತರಿ ವೈದ್ಯನೆ ದೇವ। ಮನಸಿನ ರೋಗವ ಪರಿಹರಿಸೋ ತಂದೆ॥ಪ॥ ಧನಲೇಶಕೇಳದ ಸುರಜನರನು ಪೊರೆಯುವೆನೀ। ಮನಕೆ ಬಂದರೆ ತನುವಿನ ರೋಗ ಓಡುವುವು। ನೆನಹ ಮಾರ್ಗಕೆ ಬೇಗ ತಡಿಯದೆ ಈ ಮನದ। ಕುನರ ಸೂಲ್ದವುಳ್ಳ ವಾತವನು ಪರಿಹರಿಸೊ॥1॥ ನಾಮವ ನುಡಿವಲ್ಲಿ ಅಶುಚಿ ಇರುವುದು ನೋಡು। ಭಾಮೆಯರ ಕಂಡರೆ ತಲ್ಲಣ ವಾಹುದೋ। ಶ್ರೀಮನೋಹರ ಸ್ಮ ರಣೆ ಹಾರಿಹೋಗುತಲಿಹುದು। ಈ ಮಹಾದೋಷದ ಪಿತ್ಥವ ಕಳೆಯೋ॥2॥ ಹಿರಿಯರನು ನೋಡಿದರೆ ಗರುಗುರು ಎನ್ನುತಿದೆಮನ। ಪರಿಪರಿಯ ವಿಷಯದಾ ನಂಜಿನಿಂದಾ। ಪರಿಹರಿಸೋ ಈ ಶ್ಲೇಷ ಮೊರೆಹೊಕ್ಕೆ ನಾ ನಿನಗಯ್ಯ। ಸರಿಪಡಿಸೊ ಶ್ರೀವಾಸದೇವ ವಿಠಲ ರೇಯ॥3॥

ಎನ್ನ ಭಿನ್ನಪ ಕೇಳೋ ಧನ್ವಂತ್ರಿ

ಎನ್ನ ಭಿನ್ನಪ ಕೇಳೋ ಧನ್ವಂತ್ರಿ ದಯಮಾಡೋ ಸಣ್ಣವನು ಇವ ಕೇವಲ॥ಪ॥ ಬನ್ನ ಬಡಿಸುವ ರೋಗವನ್ನು ಮೋಚನ ಮಾಡಿ। ಚೆನ್ನಾಗಿ ಪಾಲಿಸುವುದೋ ಕರುಣಿ॥ಅ.ಪ॥ ಆರೋಗ್ಯ ಆಯುಷ್ಯ ಐಶ್ವರ್ಯವೆಂಬ ಈ। ಮೂರು ವಿಧ ವಸ್ತುಗಳು ನಾರಾಯಣನ ಭಜಕರಾದವರ ಸಾಧನಕೆ ಪೂರಣವಾಗಿಪ್ಪವೋ॥ ಘೋರ ವ್ಯಭಿಚಾರ ಪರನಿಂದೆ ಪರ ವಿತ್ತಾಪಹಾರಮಾಡಿದ ದೋಷದಿ। ದರಿದ್ರರಾಗುವರು ಮೂರು ವಿಧದಿಂದಲೇ ಕಾರಣನು ನೀನೇ ದುಷ್ಕರ್ಮ ಪರಿಹರಿಸೋ।ಸ್ವಾಮಿ॥1॥ ವಸುಮತಿಯ ಮೇಲಿನ್ನು ಅಸುರ ಜನರೇ ಬಹಳ। ವಶವಲ್ಲ ಕಲಿಯ ಬಾಧೇ। ಬಿಸಿಲಿಂದ ಪೀಡಿತವಾದ ಸಸಿಗಳಂತೆ। ಶಿಶುಗಳು ನಾ ವಿಪ್ಪೆವೋ॥ ಅಸುರಾರಿ ನಿನ್ನ ಕರುಣಾಮೃತದ ಮಳೆಗರೆದು। ಕುಶಲದಲಿ ಪಾಲಿಸುವದು। ಕೆಸರಿಂದ ಕೆಸರು ತೊಳೆದಂತೆ ಕರ್ಮದ ಪಥವು। ಅಸುನಾಥ ಹರಿಯೆ ಸಲಹೋ। ಸ್ವಾಮಿ॥2॥ ಅನ್ಯರನು ಭಜಿಸದೆ ನಿನ್ನನ್ನೆ ಸ್ಮ ರಿಸುತ್ತ। ನಿನ್ನ ಚಿನ್ಹೆಗಳನ್ನೆ ಧರಿಸಿ। ನಿನ್ನ ನಾಮೋಚ್ಚರಿಸಿ ನಿನ್ನವರವ ನೆನಿಸಿ। ನಿನ್ನಿಂದ ಉಪಜೀವಿಸಿ। ಅನ್ನ ಆರೋಗ್ಯವು ಅಲ್ಪವು ಆಗೆ ಅನ್ಯರಿಗೆ ಇನ್ನು ಅಲ್ಪರಿಯ ಬೇಕೇ?॥ ನಿನ್ನ ಸಂಕಲ್ಪ ಭಕುತರನು ಪೋಷಿಪೆನೆಂದು। ಘನ್ನ ಬಿರುದನ್ನು ಉಳುಹೋ (ಸಲಹೊ) ಸ್ವಾಮಿ॥3॥ ಆದಿ ವ್ಯಾದಿಗಳು ಉನ್ಮಾದ ವಿಭ್ರಮ ನಾನಾ। ಬಾಧೆ ಗೌಷಧವು ನೀನೆ। ಈದಾವ ನಿನ್ನ ಕರಕಮಲದಿಂ ಸುಧೆಗರೆದು। ಸಾಧುಗಳು ಪಾಲಿಸುವ ನೀನೇ। ಮೋದ ಬಡಿಸುವಿ ನಿನ್ನ ಸಾಧಿಸುವವರಿಗೆ ಶು-। ಭೋಧ ಯಂಗಳ ನೀಡಿ॥ ಆದರಿಸಿ ಅವರಿಗೆ ತವ ಪಾದ ಧ್ಯಾನವಿತ್ತು।

ಸಾಧುಗಳೊಳಗಿರಿಸಿ ಮೋದ ಕೊಡು ಸರ್ವದಾ।।4।। ನಿನ್ನವರಲಿ ಇವಗೆ ಇನ್ನು ರತಿಯನು ಕೊಡೋ। ನಿನ್ನವನೆಂದು ಅರಿದು। ನಿನ್ನ ಪ್ರಾರ್ಥಿಸಿದೆ ನಾ ನನ್ನರಿಗೆ ಅಲ್ಪರಿಯೆ। ಎನ್ನ ಪಾಲಿಸುವ ದೊರೆಯೇ। ಎನ್ನ ಮಾತಲ್ಲವಿದು ಎನ್ನ ಹಿರಿಯರ ಮಾತು। ಮನ್ನಿಸಬೇಕು ಕರುಣಿ। ಅನಂತಗುಣ ಪೂರ್ಣ ಗೋಪಾಲ ವಿಠ್ಠಲ। ಇನ್ನಿದನೆ ಪಾಲಿಸುವದೋ ಪ್ರಭುವೆ।।5।।

ಧನ್ವಂತರೇಽಂ ಗರುಚಿ

ಧನ್ವಂತರೇಽಂ ಗರುಚಿ ಧನ್ವಂತರೇ ಽ ರಿತರು ಧನ್ವಂಸ್ತರೀಭವ। ಸುಧಾಭಾನ್ವಂತರಾವಸಥ ಮನ್ವಂತರಾಧಿಕೃತ ತನ್ವಂತರೌಷಧನಿಧೇ। ಧನ್ವಂತರಂಗಶುಗುಧನ್ವಂತಮಾಜಿಷು ವಿತನ್ವನ್ ಮಮಾಬ್ಧಿತನಯಾ ಸನ್ವಂತ ಕಾತ್ಮ ಹೃದತನ್ವಂತ ರಾವಯವತನ್ವಂತರಾರ್ತಿ ಜಲಧೌ।।

❖ ❖ ❖

48. ಕಾಲಭೈರವ ಜಯಂತಿ

ಕೇಳುತಿದೆ ಪರಮ ಪಾವನ ನಿತ್ಯಮಂತ್ರ

ಕೇಳುತಿದೆ ಪರಮ ಪಾವನ ನಿತ್ಯಮಂತ್ರ। ಪುನೀತ ಪಾದ ಸ್ಮರಣ। ಓಂಕಾರ ಮಂತ್ರ। ಕಾಲಗರ್ಭವ ಸೀಳಿ। ಮೊಳಗುತಿದೆ ಮಂತ್ರ। ಕಾಲಭೈರವ ಶಿವನ ಪುಣ್ಯತಮ ಮಂತ್ರ।।1।। ಪಾರ್ವತಿಯ ಮೋಕ್ಷಗೊಳಿಸಿದ ಸಿದ್ಧಿಮಂತ್ರ। ನಂದಿಕೇಶನ ಜಿಹ್ವೆಯಲ್ಲಿ ಮೆರೆವ ಮಂತ್ರ। ಷಣ್ಮುಖನ ಸಿದ್ಧಿ ಗಣಪನ ಪರಮ ಮಂತ್ರ। ಕಾಲಭೈರವ ಶಿವನ ಪುಣ್ಯತಮ ಮಂತ್ರ।।2।। ದಿಕ್ ತಟವ ನಡುಗಿಸುತ ಕೇಳುತಿದೆ ಮಂತ್ರ। ಸಂಕಟವ ಕಳೆದು ಪೊರೆಯುವ ಸಿದ್ಧಿಮಂತ್ರ। ಶ್ರೇಷ್ಟತಮ ಪುಣ್ಯತಮ ಭವ್ಯತಮ ಮಂತ್ರ। ಕಾಲಭೈರವ ಶಿವನ ಪುಣ್ಯತಮ ಮಂತ್ರ।।3।। ರಘುರಾಮ ಸಿದ್ಧಿ ಪಡೆದಾ ಪರಮಮಂತ್ರ। ನಿರ್ಮಾಯ ನಿರ್ಮೋಹ ನಿರ್ಮಲ ನಿತ್ಯಮಂತ್ರ। ಅಘವ ಕಳೆಯುವ ಪೊರೆವ ತಾರಕದ ಮಂತ್ರ। ಕಾಲಭೈರವ ಶಿವನ ಪುಣ್ಯತಮ ಮಂತ್ರ।।4।। ಅನಂಗನನು ದೃಷ್ಟಿಯಲಿ ಮರ್ಧಿಸಿದ ಮಂತ್ರ। ಅರಿಯದಿಹ ಭಕ್ತರಿಗೆ ಸುರಧೇನು ಮಂತ್ರ। ಅರಿತು ನಡೆಯುವವರಿಗೆ ಕಲ್ಪತರು ಮಂತ್ರ। ಶಾರದಾ ತನಯನ ಹೃದಯ ಮಣಿಮಂತ್ರ।।5।।

ದೇವರಾಜ ಸೇವ್ಯಮಾನ ಪಾವನಾಂಘ್ರಿ (ಕಾಲಭೈರವಾಷ್ಟಕಂ)

ದೇವರಾಜ ಸೇವ್ಯಮಾನ ಪಾವನಾಂಘ್ರಿ ಪಂಕಜಂ। ವ್ಯಾಳಯಜ್ಞ ಸೂತ್ರ ಮಿಂದುಶೇಖರಂ ಕೃಪಾಕರಂ। ನಾರದಾದಿ ಯೋಗಿಬೃಂದ ವಂದಿತಂ ದಿಗಂಬರಂ। ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ।। ಭಾನುಕೋಟಿ ಭಾಸ್ವರಂ ಭವಾಬ್ಧಿ ತಾರಕಂ ಪರಂ।। ನೀಲಕಂಠ ಮೀಪ್ಸಿತಾರ್ಥ ದಾಯಕಂ ತ್ರಿಲೋಚನಂ। ಕಾಲಕಾಲ ಮಂಬುಜಾಕ್ಷ ಮಕ್ಷಶೂಲ ಮಕ್ಷರಂ। ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ।। ಶೂಲಕಂಠ ಪಾಶದಂಡ ಪಾಣಿಮಾದಿ ಕಾರಣಂ। ಶ್ಯಾಮಕಾಯ ಮಾದಿದೇವ ಮಕ್ಷರಂ ನಿರಾಮಯಂ। ಭೀಮವಿಕ್ರಮಂ ಪ್ರಭುಂ ವಿಚಿತ್ರ ತಾಂಡವಪ್ರಿಯಂ। ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ।। ಭುಕ್ತಿಮುಕ್ತಿದಾಯಕಂ ಪ್ರಶಸ್ತ ಚಾರು ವಿಗ್ರಹಂ। ಭಕ್ತ ವತ್ಸಲಂ ಸ್ಥಿತಂ। ಸಮಸ್ತ ಲೋಕ ವಿಗ್ರಹಂ। ನಿಕ್ವಣನ್ಮನೋಜ್ಞ ಹೇಮಕಿಂಕಿಣೀ ಲಸತ್ಕಟಿಂ। ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ।। ರತ್ನ ಪಾದುಕಾ ಪ್ರಭಾಭಿರಾಮ ಪಾದಯುಗ್ಮಕಂ। ನಿತ್ಯಮದ್ವಿತೀಯ ಮಿಷ್ಟದೈವತಂ ನಿರಂಜನಂ। ಮೃತ್ಯು ದರ್ಪನಾಶಕಂ ಕರಾಳದಂಷ್ಟ್ರ ಭೀಷ್ಣಣಂ। ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ।। ಅಟ್ಟಹಾಸ ಭಿನ್ನ ಪದ್ಮ ಜಾಂಡ ಕೋಶ ಸಂತತಿಂ। ದೃಷ್ಟಿ ಪಾತ ನಷ್ಟಪಾಪ ಜಾಲಮುಗ್ರ ನಾಶನಂ। ಅಷ್ಟಸಿದ್ಧಿದಾಯಕಂ ಕಪಾಲ ಮಾಲಿಕಾಧರಂ। ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ।। ಭೂತಸಂಘ ನಾಯಕಂ ವಿಶಾಲಕೀರ್ತಿ ದಾಯಕಂ। ಕಾಶಿ ವಾಸಿಲೋಕ ಪುಣ್ಯಪಾಪ ಶೋಧಕಂ ವಿಭುಂ।ನೀತಿಮಾರ್ಗ ಕೋವಿಧಂ ಪುರಾತನಂ ಜಗತ್ ಪ್ರಭು। ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ।।

ಕಾಲಭೈರವಾಷ್ಟ ಕಂಪಠಂತಿ ಯೇ ಮನೋಹರಂ। ಜ್ಞಾನಮುಕ್ತಿಸಾಧನಂ ವಿಚಿತ್ರ ಪುಣ್ಯವರ್ಧನಂ। ಶೋಕಮೋಹ ದೈನ್ಯ ಲೋಭ ಕೋಪತಾಪ ನಾಶನ ತೇ ಪ್ರಯಾಂ॥ ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ॥

❖ ❖ ❖

49. ಕಾರ್ತೀಕ ಸೋಮವಾರ ವ್ರತ

ಹಾಲು ಮೊಸರು ಬೆಣ್ಣೆ ತುಪ್ಪ (ಅಭಿಷೇಕ) ರಾಗ: ಆನಂದಭೈರವಿ

ಹಾಲು ಮೊಸರು ಬೆಣ್ಣೆ ತುಪ್ಪ। ಸಕ್ಕರೆಯು ಜೇನುತುಪ್ಪ। ಚೂತದಾಳಿಂಬೆ ವೃಕ್ಷಫಲ ರಸಂಗಳೂ. ಖರ್ಜೂರದ್ರಾಕ್ಷಿ ಏಲಕ್ಕಿ ಕದಳಿ। ಪಂಚಾಮೃತಗಳಿಂದ ದೇವರಿಗಭಿಷೇಕವಮಾಡಿ ನೋಡಬೇಕು॥ ದೇವಕಾಶಿವಿಶ್ವೇಶ್ವರನಾ। ಧನ್ವಂತ್ರಿದೇವ ನೀನಿವನ ಕರುಣದಿ ರಾಗ: ಅಮೃತವರ್ಷಿಣಿ - ಆದಿತಾಳ

ಧನ್ವಂತ್ರಿ ದೇವ ನೀನಿವನ ಕರುಣದಿ ಕಾಪಾಡೋ ಹರಿಯೇ। ಅನ್ಯವಾರ್ತೆಯ ಮನಕೆ ತಾರದೆ ನೀ ರಕ್ಷಿಸೋ ಹರಿಯೆ॥ಪ॥ ಮನದಲ್ಲಿ ನೀ ನಿಂತು ಸ್ಥಿಮಿತವ ತಾರಯ್ಯ। ಮನದಭಿಮಾನಿ ರುದ್ರನಾ ತಾತ। ಮನದ ಕಲ್ಮಷಗಳ ಕಿತ್ತುತ್ತ ನೀ ಬಂದು ನೆನೆಯುವಂಥ ಬುದ್ಧಿ ನಿರುತ ನೀಡಯ್ಯ॥1॥ ದೇವ ನಿಕರಕೆ ನೀನು ಅಮೃತವನುಣಿಸಿದೆಯೋ ಕಾವ ಕರುಣಾಶಾಲಿ ಕಾಯಯ್ಯ ದೊರೆಯೇ। ಅವನಿಯೊಳು ಇರುವಂಥ ಅನ್ಯದೇವರ ಬಿಟ್ಟು ಶರ್ವವಂದ್ಯನೆ ನೀನು ಒಲಿದು ಬಾರಯ್ಯ॥2॥ ಮಾಧವನೆ ನೀನೆಮ್ಮ ಮನಪಂಕಗಳ ಕಿತ್ತು ಸಾಧನೆಯ ಹಾದಿಯನು ತೋರಬೇಕಯ್ಯ।ವ್ಯಾಧಿಗಳ ಪರಿಹರಿಸಿ ಮೋದಮನವನಿತ್ತು ಸಾಧುಗುಣ ಕರುಣಿಸಯ್ಯ ವರಾಹ ಹರಿ ವಿಠಲಾ॥3॥ಸೋಮವಾರಾದಭಿಷೇಕವನು। ಅನ್ನಪೂರ್ಣ ಅರಿಶಿನ ಸೇವೆ। ನೋಡುವ ಬನ್ನಿ॥1॥ ತಾಳಮದ್ದಲ ಮೇಳ ಮುರಳಿ। ನಾರೇರ ಮೇಳಗಳಿಂದ। ಹೊಳೆವೋ ಶಂಖ ಧ್ವನಿಗಳಿಂದ। ಛತ್ರಿಗಳಿಂದ। ಚಲುವಚಾಮರಗಳಿಂದ। ಭಕ್ತ ಜನರ ಭಜನೆಯಿಂದ। ಹರಹರಾ ಶಿವಶಿವಾ ಎಂದು। ಪೂಜೆಮಾಡಿ ನೋಡಬೇಕು॥2॥ ಸಹಸ್ರ ಬಿಲ್ವೆ ತುಂಬೆಹೂವು। ಪದ್ಮ ಪುಷ್ಪ ಪಾರಿಜಾತ। ಮರುಗ ಮಲ್ಲಿಗೆ ಜಾಜಿ। ಸುರಗಿ ಸೇವಂತಿಗೆ। ಪರಿಪರಿ ಪುಷ್ಪಗಳಿಂದ। ಧೂಪದೀಪ ನೈವೇದ್ಯ। ನೀಲಾಂಜನ ಮಂತ್ರ ಪುಷ್ಪದಿಂದ। ಮಾಡುವ ಪೂಜೆ ನೋಡಬೇಕು॥3॥ ಹೂವಿನ ಪಲ್ಲಕ್ಕಿಯಲ್ಲಿ। ಪಾರ್ವತಿ ಸಮೇತನಾಗಿ। ಶೃಂಗಾರದಿಂದ ಶಿವನು ಸವಾರಿ ಹೊರಟನು। ಅಲ್ಲಲ್ಲಿಗೆ ಫಲಪುಷ್ಪಗಳು। ಭಕ್ತ ಜನರ ಭಜನೆಗಳು। ಹರಹರಾ ಶಿವಶಿವಾ ಎಂದು। ಪೂಜೆಮಾಡಿ ನೋಡಬೇಕು॥4॥ ಬಾಲಗಂಗೆ ಎಂಬರಾದಿ ಕಿರೀಟರತ್ನ ಕುಂಡಲಾದಿ। ನೀಲ ಪಚ್ಚೆ ಬಾವುಲಿಯು ಹಾರಪದಕವು। ಕೋಟಿಸೂರ್ಯರಂದದಿ। ನಂದಿ ವಾಹನವೇರಿ ಬರುವೋ। ಸಾಂಬಮೂರ್ತಿಯಾ ನೋಡಬನ್ನಿ॥5॥ ಪಂಚಲಿಂಗ ಸ್ತೋತ್ರವನ್ನು। ಹೇಳಿಕೇಳ್ವ ಜನರಿಗೆ। ಪಂಚ ಮಹಾಪಾತಕವು ಪರಿಹಾರವು। ಸಚ್ಚಿದಾನಂದ ಮೂರ್ತಿ ಹೃದಯದಲ್ಲಿ ನೆಲೆಸಿದರೆ। ಸಾಂಬಮೂರ್ತಿಯ ಕಟಾಕ್ಷದಿಂದ ಸೇರ್‍ವರು ಕೈಲಾಸಪುರವ॥6॥

ಕುಣಿಯುತ ನಲಿಯುತ ಬಾ ಶಂಕರ ರಾಗ: ಕಲ್ಯಾಣಿ

ಕುಣಿಯುತ ನಲಿಯುತ ಬಾ ಶಂಕರ। ಮಣಿಯುವೆ ನಿನ್ನಡಿಗನುದಿನ ಪುರಹರ॥ಪ॥ ಢಮ ಢಮಢಮರೆಂದು ಢಮರುಗ ಧ್ವನಿಸಲು। ಠಣ ಠಣ ಠಣ ರೆಂದು ಗಂಟೆಯು ಬಾರಿಸೆ। ಝಣತಕ್ಕ ತಕ್ಕಝಣ ತಾಕಿಟ ತದಿಕಿಟ। ಝಣ ರೆಂದು ನಂದಿ ಮೃದಂಗವ ಬಾರಿಸೆ॥1॥ ಹರ ಹರ ಹರ ಎಂದು ಗಣಗಳು ಸ್ತುತಿಸಲು। ಪೊರೆ ಎಂದು ಅಹಿವಿಧು ಗಂಗೆಯರ್ ನಮಿಸೆ। ಸರಿಗಮ ಪದನಿಸ ಸ್ವರಗಳ ಪಾಡುತ। ತುಂಬುರು ನಾರದ ಗಾನವ ಮಾಡಲು॥2॥ ವರ ಕಮಲೇಶನ ಚರಿತೆಯ ಜಗದೊಳು। ಪರಿ ಪರಿ ಭಾವದಿ ನರ್ತಿಸಿ ತೋರುತ। ಪೊರೆಯುತ ಭಕುತರ್ಗೆ ವರವೀಯುತಲಿ। ಗಿರಿಜಾಲಿಂಗಿತ ನಾಟ್ಯಾಚಾರ್ಯ॥3॥

ಕಂಡೆ ಕರುಣಾನಿಧಿಯ ಗಂಗೆಯ ರಾಗ: ನಾದನಾಮಕ್ರಿಯೆ-ಆದಿತಾಳ

ಕಂಡೆ ಕರುಣಾನಿಧಿಯ। ಗಂಗೆಯ ಮಂಡೆಯೊಳಿಟ್ಟ ದೊರೆಯ, ಶಿವನ॥ಪ॥ ರುಂಡಮಾಲೆ ಸಿರಿಯ। ನೊಸಲೊಳು।

ಕೆಂಡಗಣ್ಣಿನ ಬಗೆಯ ಹರನ॥ಅ.ಪ॥ ಕಪ್ಪುಗೊರಳ ಹರನ। ಕಂದರ್ಪಪಿತನ। ಸಖನ ಮುಪ್ಪುರ ಗೆಲಿದವನ। ಮುನಿನುತ ಸರ್ಪಭೂಷಣ ಶಿವನ, ಹರನ॥1॥ ಭಸಿತ ಭೂಷಿತ ಶಿವನ। ಭಕ್ತರ ವಶದೊಳಗಿರುತಿಹನ। ಪಶುಪತಿಯೆನಿಸುವನ। ವಸುಧೆಯೊಳ್ ಶಶಿಶೇಖರ ಶಿವನ, ಹರನ॥2॥ ಗಜ ಚರ್ಮಾಂಬರನ। ಗೌರೀವರ ತ್ರಿಜಗದೀಶ್ವರನ। ತ್ರಿಜಗನ್ಮೋಹನನ। ತ್ರಿಲೋಚನ ತ್ರಿಪುರಾಂತಕ ಶಿವನ, ಹರನ॥3॥ ಕಾಮಿತ ಫಲವೀವನ। ಭಕ್ತರ ಪ್ರೇಮದಿ ಸಲಹುವನ। ರಾಮನಾಮಸ್ಮರನ। ರತಿಪತಿ ಕಾಮನ ಸಂಹರನ ಶಿವನ॥4॥ ಧರೆಗೆ ದಕ್ಷಿಣಕಾಶಿ। ಎನಿಸುವ ಪುರಪಂಪಾವಾಸಿ। ತಾರಕ ಉಪದೇಶಿ। ಪುರಂದರವಿಠಲ ಭಕ್ತರ ಪೋಷಿ॥5॥

ಕಂಡು ಧನ್ಯನಾದೆನೋ ಕೆಂಡಗಣ್ಣಿನ ಶಿವನ — ರಾಗ: ಬೇಹಾಗ್

ಕಂಡು ಧನ್ಯನಾದೆನೋ ಕೆಂಡಗಣ್ಣಿನ ಶಿವನ॥ಪ॥ ಕಂಡು ಧನ್ಯನಾದೆನೋ ರುಂಡಮಾಲಧರನ ಪಾದ। ಪುಂಡರೀಕ ಯುಗಳ ಮುದದಿ ಕಂಗಳಿಂದ ಶೋಭಿಸುವನ॥ಅ.ಪ॥ ಹಸ್ತಿಚರ್ಮವನ್ನೆ ತಂದು। ಅರ್ಥಿಯಿಂದ ಧರಿಸಿಕೊಂಡು। ಮತ್ತೆ ಶಿರದಿ ಗಂಗೆಯನ್ನು। ಹೊತ್ತುಕೊಂಡು ಅಲೆಯುವವನ॥1॥ ಉರಗವನ್ನು ಹಿಡಿದು ತಂದು। ಕೊರಳಹಾರ ಮಾಡಿಕೊಂಡು। ಉರುಳು ಬೂದಿ ಸವರಿಕೊಂಡು। ತಿರಿದುಕೊಂಡು ತಿನ್ನುವವನ॥2॥ ಈರಗೆರೆಯ ವಾಸನಾದ। ಧೀರ ಪದುಮನಾಭಗೆ। ಚಾರುಮಿತ್ರ ಚೆಲುವನೆನಿಪ। ಮಾರಹರನ ಗೌರಿವರನ॥3॥

ದೇವ ಶಂಕರಾ ಮಹದೇವ ಶಂಕರಾ — ರಾಗ: ಶಂಕರಾಭರಣ

ದೇವ ಶಂಕರಾ ಮಹದೇವ ಶಂಕರಾ। ಪಾಹಿಶಂಕರಾ ಪರಮೇಶಾ ಶಂಕರಾ। ಪಂಪ ವಿರೂಪಾಕ್ಷ ನೀಲಕಂಠ ಶಂಕರಾ। ಪಶುಪತಿ ಪಾಲಾಕ್ಷ ಈಶ ದೇವ ಶಂಕರಾ। ಪನ್ನಗಾ ಭೂಷಣ ಮಹದೇವ ಶಂಕರ। ಪರಮ ಕೃಪಾ ಸಾಗರ। ಮಹೇಶ ಶಂಕರ॥1॥ ದೀನ ಪಾಲ ಗಾನಲೋಲ ದೇವ ಶಂಕರ। ಸುಗುಣ ಶೀಲ ಭಕ್ತಪಾಲ ಈಶ ಶಂಕರ। ಕಾಮೇಶ್ವರ ಮಹೇಶ್ವರ ದೇವ ಶಂಕರ। ಭೈರವ ಶಿವ ಗಂಗಾಧರ ಜಗದೀಶ್ವರ॥2॥ ಜ್ಞಾನಭಕ್ತಿ ವೈರಾಗ್ಯ ನೀಡೋ ಶಂಕರ। ಜನನ ಮರಣ ಭಯವ ಹರಿಸೋ ಶಂಕರ। ನಿರ್ದಯನಾಗದೆ ಎಮ್ಮ ಪೊರೆಯೊ ಶಂಕರ। ಶಾರದೆ ಸನ್ನುತ ಹರ ಮಹದೇವ ಶಂಕರಾ ದೇವಶಂಕರಾ॥3॥

ಅದು ಬೆಟ್ಟ ಇದು ಬೆಟ್ಟವೋ — ರಾಗ: ಭೀಮ್‌ಫಲಾಸ್

ಅದು ಬೆಟ್ಟ ಇದು ಬೆಟ್ಟವೋ ನಂಜುಂಡ। ನಂದ್ಯಾಲಗಿರಿ ಬೆಟ್ಟವೋ ನಂಜುಂಡ। ನಂದ್ಯಾಲ ಗಿರಿಬೆಟ್ಟವೋ॥ ನಂದ್ಯಾಲ ಗಿರಿಬೆಟ್ಟಕೇ ನಂಜುಂಡ ದಾಸ್ವಾಳ್ದ ಗಿಡ ಹುಟ್ಟಿತು॥ ದಾಸ್ವಾಳ್ದ ಹೂವ ತಂದು ನಂಜುಂಡ ದ್ಯಾವರ್‍ಗೆ ಪೂಜೆಮಾಡೊ ॥1॥ ಹೂಬಾಡಿ ಹೋಯಿತಯ್ಯ ನಂಜುಂಡ ಎದ್ದು ಬಾರಯ್ಯ ಮನೆಗೆ। ಕರ್ನಾಟಕ ಸೀಮೆಯವನೇ ನಂಜುಂಡ ಕರ್ಪೂರವೀಳ್ಯದವನೇ॥2॥ ನಿನ ಕರುಣೆ ತಪ್ಪಿದ ಮೇಲೆ ನಂಜುಂಡ ಪರದೇಶಿ ನಾನಾದೆನು। ಪರದೇಶಿ ಆದಮೇಲೆ ನಂಜುಂಡ । ಪರಪಂಚ ನನಗ್ಯಾತಕೋ ನಂಜುಂಡ ನನಚಿಂತೆ ನಿನಗ್ಯಾತಕೋ॥3॥ ಸ್ವಾತಿಯ ಮಳೆಹೊಯ್ದು ನಂಜುಂಡ ಸಂಪಂಗಿ ಕೆರೆ ತುಂಬಿತೊ। ಸಂಪಂಗಿ ಕೆರೆಯ ಕೆಳಗೆ । ನಂಜುಂಡ ಕೆಂಬತ್ತಿ ನೆಲ್ಲ ಬಿತ್ತಿ॥4॥ ಸಾಲ್ದಿಡಿದು ಕಬ್ಬನೆಟ್ಟು ನಂಜುಂಡ ಮುಂದುಡಿದು ನೀರಕೊಟ್ಟು। ಜಲನೋಡಿ ಬಾವಿ ತೆಗೆಯೋ। ನಂಜುಂಡ। ಕುಲನೋಡಿ ಹೆಣ್ಣು ತಾರೋ॥5॥ ಮೂಡಲ ಸೀಮೆಯವನೇ। ನಂಜುಂಡ ಮುತ್ತಿನ ಹಾರದವನೇ॥ ಬಡಗಲಾ ಸೀಮೆಯವನೇ। ನಂಜುಂಡ ಬಯಲಾದ ರೂಪದವನೇ॥6॥ ಸಾಲು ತೆಂಗಿನಮರವೋ। ನಂಜುಂಡ ಮೇಲೆ ನಂಜಾನ ಗುಡಿಯು॥ ಹದಿನಾಲ್ಕು ಪರದಕ್ಷಿಣಾ। ನಂಜುಂಡ ಹದಿನಾಲ್ಕು ಕಿರುದಕ್ಷಿಣಾ॥7॥

ಏಕಂ ಬ್ರಹ್ಮದ್ವಿತೀಯಂ ಚ (ಸೋಮಸುಂದರಾಷ್ಟಕಂ)

ಏಕಂ ಬ್ರಹ್ಮ ದ್ವಿತೀಯಂ ಚ ಪರಿಪೂರ್ಣಂ ಪರಾಪರಂ। ಇತಿಯೋ ಗೀಯತೇ ವೇದೈಸ್ತಂ ವಂದೇ ಸೋಮಸುಂದರಂ॥

ಜ್ಞಾತೃಜ್ಞಾನಜ್ಞೇಯರೂಪಂ ವಿಶ್ವವ್ಯಾಪ್ಯಂ ವ್ಯವಸ್ಥಿತಂ। ಯಂ ಸರ್ವರಪ್ಯದೃಶ್ಯೋಯಸ್ತಂ ವಂದೇ ಸೋಮಸುಂದರಂ॥ ಅಶ್ವಮೇಧಾದಿ ಯಜ್ಞೈಶ್ಚ ಯಸ್ಸ ಮಾರಾಧ್ಯತೇ ದ್ವಿಜೈಃ। ದದಾದಿ ಚ ಫಲಂ ತೇಷಾಂ ತಂ ವಂದೇ ಸೋಮಸುಂದರಂ॥ ಯಂ ವಿದಿತ್ವಾ ಬುಧಾಸ್ಸರ್ವೇ ಕರ್ಮ ಬಂಧ ವಿವರ್ಜಿತಾಃ। ಲಭಂತೇ ಪರಮಾಂ ಮುಕ್ತಿಂ ತಂ ವಂದೇ ಸೋಮಸುಂದರಂ॥ ದೇವದೇವಂ ಯಮಾರಾಧ್ಯ ಮೃಕಂಡು ತನಯೋ ಮುನಿಃ। ನಿತ್ಯತ್ವ ಮಗಮತ್ಸದ್ಯ ಸ್ತಂ ವಂದೇ ಸೋಮಸುಂದರಂ॥ ನಿಜ ನೇತ್ರಾಂಬುಜ ಕೃತಂ ಪೂಜಯಾ ಪರಿತೋಷ್ಯಯಂ। ಶ್ರೀಪತಿರ್ ಲಭತೇ ಚಕ್ರಂ ತಂ ವಂದೇ ಸೋಮಸುಂದರಂ॥ ಯೇನ ಸರ್ವಂ ಜಗತ್ ಸೃಷ್ಟಂ ರಕ್ಷಿತಂ ಸಂಹೃತಂ ಕ್ರಮಾತ್। ಸತ್ಯಂ ವಿಜ್ಞಾನ ಮಾನಂದಂ ತಂ ವಂದೇ ಸೋಮಸುಂದರಂ॥ ಯಸ್ಮಾತ್ಪರಂ ಚಾಪರಂ ಚ ಕಿಂಚಿದ್ವಸ್ತು ನ ವಿದ್ಯತೇ। ಈಶ್ವರಂ ಸರ್ವಭೂತಾನಾಂ ತಂ ವಂದೇ ಸೋಮಸುಂದರಂ॥ ಯಸ್ಮೈ ವೇದಾಶ್ಚ ಚತ್ವಾರೋ ನಮಸ್ಯಂತ ವಪುರ್ಧರಾಃ। ಈಶಾನಂ ಸರ್ವವಿದ್ಯಾನಾಂ ತಂ ವಂದೇ ಸೋಮಸುಂದರಂ॥ ಯಸ್ಯ ಪ್ರಣಾಮ ಮಾತ್ರೇಣ ಸಂತಿ ಸರ್ವಾಶ್ಚ ಸಂಪದಃ। ಸರ್ವಸಿದ್ಧಿಪ್ರದಂ ಶಂಭುಂ ತಂ ವಂದೇ ಸೋಮಸುಂದರಂ॥ ಯಸ್ಯ ದರ್ಶನ ಮಾತ್ರೇಣ ಬ್ರಹ್ಮಹತ್ಯಾದಿ ಪಾತಕಂ। ಉತ್ತಮಾಂಗಂ ಚ ಚರಣಂ ಬ್ರಹ್ಮಾಣಾ ವಿಷ್ಣುನಾಪಿ ಚ ಸದೃಶ್ಯತೇ ಯಸ್ಯ ಯತ್ನಸ್ತಂ ವಂದೇ ಸೋಮಸುಂದರಂ॥

ವಾರಣಾಸ್ಯನ ಪಾದ ಕಮಲಕೆ ಮಣಿದು (ಕಾರ್ತೀಕ ಸೋಮವಾರ ಚರಿತ್ರೆ)

ವಾರಣಾಸ್ಯನ ಪಾದ ಕಮಲಕೆ ಮಣಿದು ಶಾರದಾಂಬೆಯ ದಿವ್ಯಚರಣವನೆನೆದೂ। ಮಾರಹರನ ಶಶಿವಾಸರ ಧಾರುಣಿಯೊಳು ನಾನು ಪೊಗಳುವೆನೂ॥1॥ ಧರಣಿಗುತ್ತಮವಾದ ನೈಮಿಷಾರಣ್ಯದಿ ವರಸೂತ ಶೌನಕಾದ್ಯರಿಗೆ ಸಂತಸದಿ। ಅರುಹತಲಿರೆ ಬಹ್ವೋತ್ತರ ಕಾಂಡವ ಹರುಷಗೊಂಡಿತು ಮೌನಿವೃಂದತಾನು॥2॥ಋಷಿ ಕುಲ ತಿಲಕ ಕೇಳಂಬಿಕೆ ಶಶಿವಾಸರದ ಪುಣ್ಯ ವ್ರತದ ಸಂಗತಿಯ। ಕುಶಲದೊಳೆಮಗದನರುಹುಯೆಂದೆನಲ್ ಮುನಿಗಣಕೆ ಸಂತಸದಿ ನುಡಿದರು॥3॥ ಋಷಿ ದ್ವಿಜೋತ್ತಮರೆಲ್ಲ ಕೇಳಿ ಚಂದದಲಿ ಧಾತ್ರಿಗುತ್ತಮವಾದ ಆರ್ಯದೇಶದಲಿ। ಚಿತ್ರವರ್ಮ ಕನೆಂದೆನುವ ನೃಪವರ ಪೃಥ್ವಿಯ ಪಾಲಿಸುತಲಿರುತಿರಲು॥4॥ ಪುಣ್ಯವಂತರು ಮಕ್ಕಳಾದರೂ ನೃಪಗೇ ಎಣ್ಣೆಸಲಳವಲ್ಲ ಸೌಭಾಗ್ಯಮತಿಗೆ। ಹೆಣ್ಣು ಸಂತತಿಯೊಂದು ದೊರೆಯಲಿಲ್ಲೆನುತಲೆ ಮುಕ್ಕಣ್ಣನ ಪದಯುಗವನು ಭಜಿಸುವ॥5॥ ಸ್ಮರನರಗಿಣಿಯಂತೆ ಪೋಲುವ ಸುತೆಯಾ ಹರನ ಪ್ರಸಾದವೆಂದನುತಲೆ ಪಡೆದ। ಕರೆಸಿ ಜೋಯಿಸರನ್ನು ಮನ್ನಿಸಿ ಕೇಳಲು ಧರಣೀ ಪಾಲಕನು ನೋಡಿದರು॥6॥ ಲಾಲಿಸಿ ಕೇಳಯ್ಯ, ನೃಪಶಿರೋಮಣಿಯೆ ಜಾಲವಲ್ಲಿದು ನಿನ್ನ ಸುತೆಗಿನ್ಯಾರೆಣೆಯೊ। ಶ್ರೀಲತಾಂಗಿಯು ಸರ್ವಸುಖದ ಸೌಭಾಗ್ಯದಿ ಪಾರ್ವತಿಯಂತೆಯೆ ಎಸೆಯುವಳು॥7॥ ಅದರೊಳಗೋರ್ವ ಭೂರಸನೆಂದ ನೃಪನಿಗೆ ಸದಮಳಮತಿ ಕೇಳು ನಿನ್ನಯ ಸುತೆಗೆ। ಹದಿನಾಲ್ಕು ವರುಷದ ಸಮಯದೊಳಪ್ಪುದು ವಿಧವತ್ವವೆಂದು ನುಡಿದನು॥8॥ ಎಂದ ಮಾತನು ಕೇಳಿ ನೃಪ ತನ್ನ ಮನದಿ ನೊಂದು ಜೋಯಿಸರ ಬೀಳ್ಕೊಂಡ ಜವದಿ। ಇಂದುವಿನಂದದಿ ದಿನದಿನ ಮೆರೆಯುತ್ತ ಆನಂದದಿ ಬೆಳೆದಳು ಲಲಿತಾಂಗಿ॥9॥ ಹರುಷದಿ ಸಖಿಯರ ಕೂಡಿ ಸರಸವಾಡಿ ಸರಸಿಜಾಂಬಕಿಯಾಡುತಿರಲು ವಿಸ್ಮಯದಿ। ಎರಡೇಳು ವರುಷದೊಳೊದಗುವ ಕಷ್ಟವು ಚರಿತಳೆ ಕೇಳ್ದುತಾ ನಳಿನಾಕ್ಷಿ॥10॥ ಎಳವಾಳೆ ಮುರಿದಿಳೆಗುರುಳು ವಂದದಲಿ ಲಲನೆ ಹಮ್ಮೈಸಿ ಚಿಂತಿಸುವ ವೇಳ್ಯದಲಿ। ಘಳಿಲನೆ ಮುನಿ ಯಜ್ಞವಲ್ಕ್ಯನ ಮಡದಿಯು ಲಲನೆಯು ಬಳಿಗೈದಿ ವಹಿಲದಲಿ॥11॥ ಕರೆತಂದು ಭಕ್ತಿಯಿಂ ವರಪೀಠವೇರಿಸಿ ಪರಿಪರಿ ಮನ್ನಣೆಗೈಯುತಲಿ। ತರುಣಿ ಪೇಳ್ದಳು ನಿನ್ನ ದರುಶನದಿಂದಲಿ ಹರುಷವೆ ಬಂದುದು ನಮಗೆಂದು॥12॥ ತಾಯೆ ಬಿನ್ನಹ ಘೋರ ಭವದ ಪಾಪವನು ಆಯಾಸವಿಲ್ಲದೆ ಗೆಲುವ ಅಂದವನು। ನೀಯೆನಗಪ್ಪಣೆ ಕರುಣೆಪುದೆನೆ ಮುನಿಜಾಯೆ ಸಂತಸದಿ ನಡುದಳು॥13॥ ಕೋಮಲಾಂಗಿಯೆ ಕೇಳೆ ಬಹುವಿಧ ಭಕ್ತಿಯಿಂ ಕಾಮ ವೈರಿಯ ಪದ ಸ್ಮರಿಸಿ ಪ್ರೇಮದಲಿ। ಸೋಮವಾರದ ಪುಮ್ಯ ವ್ರತವನು ಮಾಡಲು ಕಾಮಿತಾರ್ಥಗಳು ದೊರೆತಾವು॥14॥ ಎಂದು ಸೀಮಂತಿನಿಗುಸುರಿ ರಾಗದಲಿ ಚಂದದಿ ಮುನಿವಧು ತೆರಳೆ ಪ್ರೇಮದಲಿ। ಇಂದುಧರನ ಪುಮ್ಯ ವ್ರತವನು ತೊಡಗಿದಳಂದುಭಕ್ತಿಯಲಿ ತರಳಾಕ್ಷೀ॥15॥

ತರಳೆಯ ಮದುವೆಯನೆಸಗಬೇಕೆಂದು ಧರಣಿ ಪಾಲಕನಾದ ಚಂದ್ರಾಂಗಗಂದು। ವರಶುಭಲಗ್ನದೊಳಂಬುಜ ನೇತ್ರೆಯು ಪರಿಣಯವನೆಗೈದ ರೊಲವಿಂದಲಿ॥16॥ ಸುತೆಯ ಮೇಲಣ ಪ್ರೀತಿಯಿಂದ ಭೂವರನು ಜತೆಯಾಗಿ ಮನೆಯೊಳು ಸತಿಪತಿಯರನು। ಅತಿ ಪ್ರೀತಿಯಿಂದಿಟ್ಟು ಕೊಂಡಿರೆ ಕೆಲದಿನ ಸತಿಕಾಂತನುಡಿಯ ಸ್ಮ ರಿಸುತ್ತ ಭಕ್ತೀಲಿ॥17॥ ಇರಲು ಚಂದ್ರಾಂಗದ ಜಲಕೇಳಿಗಿಳಿದಂದು ಪರಿಜನರನು ಕೂಡಿ ಹರುಷದಿ ಬಂದು। ತರುಣಿನಂದನೆಯಳ ಸೊಬಗನು ಕಂಡುರೆ ಭರದಿ ಜಲಕ್ರೀಡೆಗಿಳಿದನು॥18॥ ತಡಿಗೇರ್ದ ಬಳಿಕೊಂದು ನಾವೆಯ ಕರೆಸಿ ಒಡನೆ ನೀರಲಿ ಆಟವಾಡುತಲಿರಲು। ನಡು ನೀರಿಗೈದಲು ಭಯದಿಂದ ಬೀಸಿತು ಸುಳಿಗಾಳಿ ಒಡನಂದು ಬಿರುಸಿನಲಿ॥19॥ ಘುಳುಘುಳಿಸಿ ಮೇಲಕೆ ನಾವೆಯು ತಲೆಕೆಳಗಾಗಿಯೆ ಮುಳುಗಿದುದು। ಕಳವಳದಲಿ ಹಾಹಾಯೆನುತಲೆ ಬಾಯ್ಬಿಟ್ಟು ಅಳುತಿರೆ ನೃಪತಿ ಆತಂಕದಿ ಬೆಸಗೊಂಡ॥20॥ ಏನಿದೇನೀ ಪರಿ ಚಿಂತೆಯು ನಿಗೆಂದು ಹಾನಿಯೇನಿದು ಹೇಳಿ ಎನ್ನೊಡನಿಂದು। ಅನನ ಕಂದಿಹುದೇನೆನಲಾಗ ಭೂನಾಥನೊಳ್ ಪೇಳ್ದರು ಚರರು ಬೇಗ॥21॥ ಧರಣಿಪ ಕೇಳಿ ನಿಮ್ಮ ಳಿಯನು ಕೂಡಿ ಹರುಷದಿ ಕಾಳಿಂದಿ ನದಿಯೊಳೋಲಾಡಿ। ಇರಲೊಂದು ನಾವೆಯನೇರಿ ಚಂದ್ರಾಂಗದ ತೆರಳಲು ನಾವೆಯು ಸುಳಿಯೊಳು ಮುಳುಗಿತ್ತು॥22॥ ಆ ರಭಸಕೆ ನಾವೆ ಬುಗುರಿಯಂದದಲಿ ಭೋರನೆ ಮುಳುಗಿತ್ತು ಜಲದ ಮಧ್ಯದಲಿ। ಧಾರುಮಿ ಪತಿ ಕೇಳ್ದು ಮೈಮರೆದನು ಮಾರವೈರಿಯನು ಸ್ಮ ರಿಸುತ್ತಲಿ॥23॥ ಚೇತರಿಸುತಲೆದ್ದು ಮನದಿ ಚಿಂತಿಸುತ ಭೂತೇಶ ಕರುಣವ ತೊರೆದನೆಂದೆನುತ। ಕಾತರಿಸಲು ಸೀಮಂತಿನಿ ಮಣಿ ನಿಜಪ್ರೀತನ ಮರಣವ ತಿಳಿದು ಬೇಗ॥24॥ ಹರತ್ರಿಯಂಬಕ ಗಂಗಾಧರ ಮಹದೇವ ಉರಗಭೂಷಣ ಶರಣ ಸಂಜೀವ। ಕರುಣಿ ಎನ್ನನು ತೊರೆದೆಯ ಹಾ ಎಂದು ಒರಲಿ ಸುಯ್ದಳಂಬುಜಾಕ್ಷೀ॥25॥ ಕಂತುಮರ್ದನ ಚೆಲ್ವ ಕರುಣಾಸಾಗರನೆ ಚಿಂತಿತ ವರದ ನಿಗಮಗೋಚರನೆ। ಅಂತಕಾಂತಕ ನಿನ್ನ ತಂತ್ರಗಳಲೆಲ್ಲಿ ನಿಶ್ಚಿಂತ ಸದ್ಗುಣ ಸಾಂದ್ರ ಪಾಲಿಪುದೆನ್ನ॥26॥ ಕಡು ಧೈರ್ಯವನು ತಾಳ್ದು ಮೃಡನನು ಬಿಡದೆ ಧ್ಯಾನಿಸುತ್ತಿದ್ದಳವಳು ಕಂಗೆಡದೇ। ಮೃಡನು ತಾ ಬಳಿಕಿತ್ತ ನಂಬಿದ ಭಕುತೆಗೆ ಬಿಡದೆ ಧೈರ್ಯವ ಮಾಡೆ ತೋರಿದ ಲೀಲೆಯ॥27॥ ಸರಸಿಯ ಒಳಗಿದ್ದ ನಾವೆಯ ಸಹಿತಾಗ ಉರಗ ಕನ್ನಿಕೆಯರು ಮತ್ತಲ್ಲಿ ಗೈತರಲು। ಹರುಷದಿ ಕೊಂಡೊಯ್ದು ಪಾತಾಳ ಲೋಕಕೆ ಮರೆವ ತಕ್ಷಕನ ಭವನದ ಪೀಠಕೆ॥28॥ ಬಾಲಕನಿವನನು ಕಂಡು ಪ್ರೀತಿಯಲಿ ವ್ಯಾಲಾಧಿಪತಿ ಕೇಳ್ದ ನೊಂಪು ಮಾತಿನಲಿ। ಭೂಲೋಕದಿಂದಿತ್ತ ಬರಲೇನೆಂಬುದ ಪೇಳು ಅಳುಕದೆ ತನ್ನೊಡನೆ ನಿಜವನರುಹು॥29॥ ಎನಲೆಂದ ತನ್ನ ವೃಂತಾಂತವನಂದಿಲಿ ಘನಕೃಪಾಂಬುಧಿ ತನ್ನ ಕಳುಹಬೇಕೆಂದು। ಎನುತ ಕರವ ಮುಗಿಯುತ್ತ ಪೇಳ್ದುದ ಕೇಳಿ ವ್ಯಾಲಕುಲಾಧಿಪ ಬಾಲನ ತೆಗೆದಪ್ಪಿ॥30॥ ಕಾಮಗಾಮಿಯನಿತ್ತು ತೇಜಾಯುಸಹಿತಾ ಕಾಮಿತಾರ್ಥವನೀವ ಮಣಿಯನ್ನು ಕೊಡುತ। ಪ್ರೇಮದಿ ಭುಜಗರ ಕೂಡಿಸಿ ಕಳುಹಿದ ಭೂಮಿಪ ಸುತ ಚಂದ್ರಾಂಗದನನು ವಹಿಲದಿ॥31॥ ಮಾನಿನಿ ಮಣಿಯು ತಾ ಶಶಿವಾಸರದೊಳು ಸ್ನಾನಕೆಂದೆನುತ ಕಾಳಿಂದಿಗೈತರಲು। ಸಾನುರಾಗದಿ ಚಂದ್ರಾಂಗದನೈತಂದು ಸೀಮಂತಿನೀ ಮಣಿಯನ್ನುತಾ ನುಡಿಸಿದ॥32॥ ನಿನ್ನಯ ದೃಢವ್ರತಕಿದು ಫಲವೆನಿಸಿತು ನಾನಿನ್ನ ಸೇರೆ ಉಳಿದುಬಂದಿಹೆನು। ಬನ್ನವ ಪಡದಲೆ ಮುನ್ನಿನ ತೆರದಿಂದೆ ಉರಗ ಕುಲಾಧಿಪನಾ ದಯದಿಂದಲೆ॥33॥ ಎಂದಡೆಂದಳು ನಾರಿ ದುಃಖವನ್ನೆಲ್ಲ ಇಂದುಶೇಖರ ತಾ ಕಳೆದಿಹನಲ್ಲಾ। ಚಂದದಿ ಶಶಿವಾಸರದೊಳು ಪೂಜಿಸೆ ಕುಂದದ ಫಲವೀವ ಗಂಗಾಧರ ದೇವ॥34॥ ಚರರನಟ್ಟಲು ಬಂದ ಭೂಮೀಶನೊಡನೆ ಬರಲು ಸೂಚಿಸೆ ಕೇಳ್ದು ಕರೆತಂದು ಮನ್ನಿಸಿ। ಹರುಷದಿ ಬಿಗಿದಪ್ಪಿ ಪೇಳಿದನೊಲವಿಲಿ ಹರನಕಟಾಕ್ಷದಿ ದೊರಕಿದೆ ನಮಗೆಂದು॥35॥ ನಡೆದ ವೃತ್ತಾಂತವ ತಿಳಿಯುತ್ತ ಮನದಿ ಮೃಡನ ಕಾರುಣ್ಯವಿದೆನುತ ಸಂಭ್ರಮದಿ। ಪೊಡವಿಪಾಲಕ ಮನ್ನಿಸಲಾಗ ನೃಪಸುತ ನಡೆತಂದನು ತನ್ನರಮಣಿಯ ಭವನಕೆ॥36॥ ಬರುವ ಕಾಣುತ್ತ ಸೀಮಂತಿನಿ ಮಣಿಯು ವರನನ್ನು ಹರುಷದಿ ನಮಿಸಿ ನಿಂದಿರಲು। ಹರನ ಕಾರುಣ್ಯವಿದೆನುತಲೆ ನಿಜಪತಿ ಚರಣಕೆ ಪರಿಪರಿ ಭಕ್ತೀಲಿ ವಂದಿಸೆ॥37॥ ಉರಗರಾಜನು ಕೊಟ್ಟದಿವ್ಯರತ್ನವನು ವರಸತಿ ಸೀಮಂತಿನಿಗಿತ್ತು ಮತ್ತವನು। ಹರುಷದಿ ಮಾತುಳಂಗರುಹಿ ಸರಾಗದಿ ಭರದಿಂದ ನಿಜಪುರಕೈಯ್ದಿದ ಸತಿಯುತ॥38॥ ಮಂಗಲಂ ಜಯ ಗಂಗಾಧಾರ ಚಂದ್ರಶೇಖರ ಮಂಗಲಂ ಕಲಾಂತಕಗೆ। ಮಂಗಲಂ ಭವದೂರ ಭಕ್ತಿ ಸಿಂಧೂರಗೆ ಮಂಗಲಂ ಗಿರಿಜೇಶಗೆ॥39॥

ಧವಳಗಂಗೆಯ ಗಂಗಾಧರ **ರಾಗ: ಮೋಹನ-ಆದಿತಾಳ**

ಧವಳಗಂಗೆಯ ಗಂಗಾಧರ ಮಹಾಲಿಂಗ। ಮಾಧವನ ತೋರಿಸಯ್ಯ ಗುರುಕುಲೋತ್ತುಂಗ॥ಪ॥ ಅರ್ಚಿಸಿದವರಿಗಭೀಷ್ಟವ ಕೊಡುವ। ಹೆಚ್ಚಿನ ಅಘಗಳ ಬೇಗನೆ ತರಿವ। ದುಶ್ಚರಿತರನ್ನೆಲ್ಲ ದೂರದಲ್ಲಿಡುವೆ। ನಮ್ಮಚ್ಯುತಗಲ್ಲದ ಅಸುರರ ಬಡಿವೆ॥1॥ ಮಾರನ ಗೆದ್ದ ಮನೋಹರಮೂರ್ತಿ। ಸಾಧುಸಜ್ಜನರಿಗೆ ಸುರಚಕ್ರವರ್ತಿ। ಧಾರಿಣಿಯೊಳಗೆ ತುಂಬಿದೆ ನಿನ್ನ ಕೀರ್ತಿ। ಹರಿಯ ತೋರಿಸಯ್ಯ ನಿನಗೆ ಶರಣಾರ್ಥಿ॥2॥ ಚೆನ್ನ ಪ್ರಸನ್ನ ಶ್ರೀಹಯವದನನ್ನ। ಅನುದಿನ ನೆನೆವಂತೆ ಮಾಡೋ ನೀ ಎನ್ನ। ಅನ್ಯರನರಿಯೆನೋ ಗುರುವೆಂಬೆ ನಿನ್ನ। ಇನ್ನಾದರೂ ಹರಿಯ ತೋರೋ ಮುಕ್ಕಣ್ಣ॥3॥

ಪಾಲಿಸು ಪರಮೇಶ ಪ್ರಸಾದವ **ರಾಗ: ಮೋಹನ**

ಪಾಲಿಸು ಪರಮೇಶ ಪ್ರಸಾದವ ಪಾಲಿಸು। ಪಾಲಿಸು ಪಾರ್ವತೀಶಾ॥ಪ॥ ಸುರಜಾಲ ವಂದಿತ ಸರುವೇಶಾ। ಸೋಮಶೇಖರ ಶಿವ ಸಜ್ಜನ ಪರಿಪಾಲ। ಚಂದ್ರಶೇಖರ ಶಿವ ಮಂದಾರ ಕುಸುಮವಾ॥1॥ ಕರದಿ ಕಪಾಲ ತ್ರಿಶೂಲ ಉಟ್ಟ ಗಜಚರ್ಮ। ರುಂಡಮಾಲಾ ಧರಿಸಿರುವೋ ಶಿರದ ಮೇಲೆ। ಚಂದ್ರಶೇಖರ ಶಿವ ಮಂದಾರ ಕುಸುಮವಾ॥2॥ ವರ ಕೈಲಾಸ ಮಂದಿರದೀ ಗಿರಿನಂದನೆ ಸಹಿತ ಕುಳ್ಳಿರಲು। ಇಂದ್ರಜಿತಗೆ ಪಾಶುಪತವ ಪಾಲಿಸಿದಂತ। ಚಂದ್ರಶೇಖರ ಶಿವ ಮಂದಾರ ಕುಸುಮಾವ॥3॥

ಶಿವಶಂಕರ ಪಾರ್ವತಿನೀ (ಆರತಿ) **ರಾಗ: ಅಭೇರಿ-ಆದಿತಾಳ**

ಶಿವಶಂಕರ ಪಾರ್ವತಿನೀ ಆರಾಧಿಂಚುಟಕು। ಕರ್ಪೂರಾರತಲು ಪಟ್ಟಿ ಪಾಡುಚುನ್ನಾಮು। ದೇವಕನ್ನಿಕಲು ವಚ್ಚಿ ಪನ್ನೀರು ಗಂಧಮುತೊ। ಆರತಲು ನೀಕು ಚೇಯುಚುನ್ನಾರು॥ಪ॥ ಪದಿಹಾರು ಸೋಮವಾರಮುಲು ವ್ರತಮುಲನಾಚರಿಂಚಿ। ಪಂಡ್ಲು ಪೂವುಲಕೋನು ಪೂಜಲು ಚೇಯುಚು। ಕೋರಿನ ವರಮುಲಿಚ್ಚೆ ಗಂಗಾಧರನುಕಿ। ಪಂಚಾರತುಲು ಪಟ್ಟಿ ಪ್ರಾರ್ಥಿಂಚುಚುನ್ನಾರು॥1॥ ಕೈಲಾಸವಾಸುನುಕಿ ಗೌರಿ ಶಂಕರುನಿಕಿ। ಬಿಲ್ವಪತ್ರಮುಲತೊ ಅರ್ಚನ ಚೇಯುಚು। ಅಜ್ಞಾನಮು ತೊಲಗಿಂಚಿ ಜ್ಞಾನವಿಪ್ಪಾಲನಿ। ವಂದನಮುಲತೋ ಕುಕ್ಕೆಸ್ವಾಮಿ ಪಿತುನಿ ವೇಡುಚುನ್ನಾಮು॥2॥

ಮಂಗಳಾರುತಿ ಬೆಳಗುವೆ (ಆರತಿ) **ರಾಗ: ಸುರುಟಿ**

ಮಂಗಳಾರುತಿ ಬೆಳಗುವೆ ಶಿವಶಂಭು ಶಂಕರ ದೇವಗೆ। ಪಂಚಮುಖ ಪರಮೇಶ ಪಾರ್ವತಿ। ನಾಥ ವರಗಿರೀಶಗೆ॥ಪ॥ ಕಾಲ ಕಾಲ ಸುನೀಲಕಂಠಗೆ। ಸಾಧುಜನ ಪರಿಪಾಲಗೆ। ಪರಮಮಂಗಳ ಮೂರುತಿಗೆ। ಮಾಣಿಕ್ಯದಾರುತಿ ಬೆಳಗುವೆ॥1॥ ಭಕುತ ಜನರ ದುರಿತಗಳ। ಪರಿಹರಿಪ ಕರುಣಾ ಮೂರ್ತಿಗೆ। ಕಾಮಿತಾರ್ಥವ ನೀವ ದೇವಗೆ। ಸಾನುರಾಗದಿ ಶಿವನಿಗೆ॥2॥ ಚಿನ್ನದಾ ಹರಿವಾಣದೊಳಗೆ। ರತ್ನ ದೀಪವ ಬೆಳಗಿಸಿ। ಚಿತ್ತಜಾರಿ ಸರ್ವೋತ್ತಮಗೆ। ಭಕ್ತಿಯಿಂದಲಿ ಬೆಳಗುವೆ॥3॥ ಸೋಮವಾರದ ವ್ರತವ ಗೈದು। ಸಾನುರಾಗದಿ ಶಿವನಿಗೆ। ಸೋಮಶೇಖರ ಗೌರಿ ರಮಣಗೆ। ಮೋದದಿಂದಲಿ ಬೆಳಗುವೆ॥4॥

ಜಯ ಜಯ ಸೋಮೇಶ್ವರ (ಆರತಿ) **ರಾಗ: ಸುರುಟಿ**

ಜಯ ಜಯ ಸೋಮೇಶ್ವರ ಶ್ರೀ ಶಂಕರಾ ಜಯವೆಂದಾರತಿ ಬೆಳಗುವೆ ಸಲಹೋ ಶ್ರೀ ಕರಾ॥ಪ॥ ಶಿರಮಾಲೆಯ ಧರಿಸಿರುವ ಕೊರಳ ಚಂದವೇ। ಶಿರದೊಳಗಿನ ಗಂಗಾಜಲ ಶಿರವ ಶೋಭೆಯೇ॥1॥ ಪಾರ್ವತಿ ಪತಿ ಎನಿಸಿಹೆ ನೀ ಗಂಗೆ ಧರಿಸಿಹೇ ಗಂಗಾಧರನೆಂಬ ನಾಮ ಜಗದೋಳ್ ಮೆರೆಸಿಹೇ॥2॥ ಸುತ ಷಣ್ಮುಖನಿರುವಾಗಲು ಲಿಂಗಮೂರುತಿ ಗಜವದನನ ಪಡೆದಳು ತಾ ಸತಿಯು ಪಾರ್ವತಿ॥3॥

ಪನ್ನಗ ಭೂಷಣ ಪಾರ್ವತಿ ರಮಣ (ಮಂಗಳ) **ರಾಗ: ಸುರುಟಿ-ಏಕತಾಳ**

ಪನ್ನಗ ಭೂಷಣ ಪಾರ್ವತಿ ರಮಣ। ಪತಿತೋದ್ಧರಣಗೆ ಮಂಗಳ। ಅಂಬುಜ ಚರಣ ಶಂಭು ತ್ರಿಲೋಚನ। ಶಾರದೇನುತಗೆ ಮಂಗಳ। ಮಂಗಳ ಜಯ ಮಂಗಳ॥

ಜಯಮಂಗಲಂ ನಿತ್ಯ - ಜಯ ಪರಬ್ರಹ್ಮ **ರಾಗ: ಆರಭಿ**

ಜಯಮಂಗಲಂ ನಿತ್ಯ ಶುಭಮಂಗಲಂ। ಜಯ ಪರಬ್ರಹ್ಮ ಜಯ ಜಯ ವಿಶ್ವಕರ್ಮ।।ಪ।। ಜಯ ಪ್ರಭಾಕರ ನೇತ್ರ ಭಸ್ಮ ಭೂಷಿತಗಾತ್ರ। ಜಯ ಸುರೇಶಾದ್ಯ ಸುರಗಣ ವಂದಿತಾ। ಜಯತು ಜಗಮಾನ್ಯ ಜಾಹ್ನವಿನಮಿತ। ನರವಿನುತ ಜಯ ಜಟಾಜೂಟ ಚಂದ್ರಪ್ರಕಾಶ ।।1।। ಜಯತು ಭಾಗೀರಥಿನಾಥ ಶ್ರೀ ಗುರುನಾಥ। ಜಯತು ದಾಕ್ಷಾಯಣಿಗೆ ಪ್ರೇಮಾಶ್ರಿತ ಜಯತು। ಕೃಷ್ಣಾಮೃತ ಸ್ವಾದ ಸ್ವೀಕೃತ ಶಾಂತ ಜಯತು। ಶ್ರೀಕಾಂತ ಸಂಪೂಜ್ಯ ರಾಮೇಶ।।2।। ಜಯ ಮಲ್ಲಿಕಾರ್ಜುನಾಚಾರ್ಯ ಸತ್ಕುಲಜಿತ। ಜಯ ಶಿಲ್ಪಶಾಸ್ತ್ರ ಪ್ರವೀಣ ಮೂರ್ತೇ। ಜಯತು ಮನುವಂಶ ಮಾರ್ತಾಂಡ ಜ್ಯೋತಿಃ। ಜಯತುಷಃ ಕಾಲೇಶ ಪ್ರತಿಭಾಂಕುರೇಶ।।3।।

❖ ❖ ❖

50. ಉತ್ಥಾನ ದ್ವಾದಶಿ (ತುಳಸಿ ಪೂಜೆ)

ನಮಃ ತುಳಸಿ ಕಲ್ಯಾಣಿ (ಪ್ರಾತಃ ಶ್ಲೋಕ)

ನಮಃ ತುಳಸಿ ಕಲ್ಯಾಣಿ ನಮೋ ವಿಷ್ಣುಪ್ರಿಯೇ ಶುಭೇ। ನಮೋ ಮೋಕ್ಷ ಪ್ರದೇ ದೇವಿ ನಮಃ ಸಂಪತ್ ಪ್ರದಾಯಿನಿ।। ಯನ್ಮೂಲೇ ಸರ್ವ ತೀರ್ಥಾನಿ। ಯನ್ಮಧ್ಯೇ ಸರ್ವದೇವತಾ। ಯದಗ್ರೇ ಸರ್ವವೇದಶ್ಚ ತುಳಸಿ ತ್ವಾಂ ನಮಾಮ್ಯಹಂ।।

ಪಾಪಾನಿಯಾನಿ ರವಿಸೂನು (ಪ್ರದಕ್ಷಿಣಾ ಸ್ತೋತ್ರ)

ಪಾಪಾನಿಯಾನಿ ರವಿಸೂನು ಪಟಸ್ಥಿ ತಾನಿ। ಗೋಬ್ರಹ್ಮಬಾಲ ಪಿತೃಮಾತೃ ವಧಾದಿಕಾನಿ।। ನಶ್ಯಂತಿತಾನಿ ತುಲಸೀವನದರ್ಶನೇನ। ಗೋಕೋಟದಾನ ಸದೃಶಂ ಫಲಯಾಶುಚಸ್ಯಾತ್।।

ಏಳಮ್ಮ ತುಳಸೀ ಕೋಮಲವಾಣಿ **ರಾಗ: ಕಲ್ಯಾಣಿ**

ಏಳಮ್ಮ ತುಳಸೀ ಕೋಮಲವಾಣಿ। ನೀಲವರ್ಣನ ರಾಣಿ ನಿತ್ಯ ಕಲ್ಯಾಣಿ।।ಪ।। ಉಟ್ಟ ಪೀತಾಂಬರ ಹೃದಯದಿ ಕೌಸ್ತುಭ। ಇಟ್ಟ ದ್ವಾದಶನಾಮ ನೊಸಲಲ್ಲಿ ತಿಲಕ। ತೊಟ್ಟ ಮುತ್ತಿನ ಅಂಗಿ ತೋಳ ಬಾಪುರಿಯಿಂದ। ಲಕ್ಷುಮಿರಮಣ ನಿನ್ನಪ್ಪಿದನಲ್ಲೆ ತುಳಸೀ।।1।। ಬಲದಕೈಯ್ಯಲ್ಲಿ ಚಕ್ರ ಎಡದ ಕೈಯಲ್ಲಿ ಶಂಖ। ಕೊರಳೊಳಗ್ಹಾಕಿದ್ದ ಶ್ರೀವತ್ಸ ಲಾಂಛನ। ಉರುಗಶಯನನ ಮೇಲೆ ಮಲಗಿದ್ದ ಪರಮಾತ್ಮ। ಕೊರಳೊಳು ಧರಿಸಿಕೊಂಡಿಹನಲ್ಲೆ ತುಳಸೀ।।2।।

ವೃಂದಾವನೀ ದೇವಿ ವಂದಿಸುವೆ **ರಾಗ: ಆನಂದಭೈರವಿ**

ವೃಂದಾವನೀ ದೇವಿ ವಂದಿಸುವೆ ಶ್ರೀ ತುಳಸಿ। ಮಂದಿರಳೆ ನಿನ್ನ ಪದಕೇ। ವಂದಾರು ಜನತತಿಗೆ। ಮಂದಾರಳೆನಿಸಿರುವೆ। ಸಂದೇಹವಿಲ್ಲಿಇದಕೆ।।1।। ಅಂದು ಧನ್ವಂತರಿಯು। ತಂದಿರುವ ಪೀಯೂಷ। ದಿಂದ ಪೂರಿತ ಕಲಶದೀ। ಇಂದಿರಾ ಪತಿಯ। ಆನಂದ ಭಾಷ್ಪೋದಕದ। ಬಿಂದು ಬೀಳಲು ಜನಿಸಿದಿ।।2।। ಶ್ರೀತುಳಸಿ ನಿನ್ನನು ನಿ। ಕೇತನದಿ ಪೂಜಿಪರ। ಪಾತಕವ ಪರಿಹರಿಸು। ಶ್ರೀತರುಣಿ ತತಿಗೆ ಬಲು। ಪ್ರೀತಿ ವಿಷಯಳೆನಿನ್ನ। ನಾಸ್ತುತಿಸಲೆಂತು ಜನನಿ।।3।। ಸರ್ವತೀರ್ಥಗಳೆಲ್ಲ। ತರುಮೂಲದಲ್ಲಿಹವು। ಸರ್ವವಿಭುದರು ಮಧ್ಯದಿ। ಸರ್ವವೇದಗಳೆಲ್ಲ। ತರು ಅಗ್ರ ಭಾಗದಲಿ। ಇರುತಿರಲು ಬಿಡದೆನಿರುತ।।4।। ತುಳಸಿ ನಿಮ್ಮಯ ಲಕ್ಷ। ದಳಗಳಿಂದಲಿ ಲಕ್ಷ್ಮಿ। ನಿಲಯನಂಘ್ರಿಗಳರ್ಚಿಸೆ। ಕಲುಷ ವರ್ಜಿತನಾಗಿ। ಬಲುಬೇಗ ಶ್ರೀಹರಿಯ। ಒಲುಮೆ ಪಡೆವನು ಜಗದೊಳು।।5।। ತುಳಸಿದೇವಿಯೆ ನಿನಗೆ। ಜಲವೆರೆದು ಕುಂಕುಮವ। ತಿಲಕವಿಡುತಲಿ ನಿತ್ಯದೀ। ಲಲನೆಯರು ಪೂಜಿಸಲು। ಒಲಿದಿತ್ತು ಸೌಭಾಗ್ಯ। ಸಲಹುವಿಯೆ ಕರುಣದಿಂದ।।6।। ಮಾಧವನ ಪ್ರಿಯತುಳಸಿ। ಸಾದರದಿ ನಿನ್ನೊಳಗೆ। ಶ್ರೀದೇವಿ ನಿಂದಿರುವಳು। ಪೋದಮುನಿ ಶಾಸ್ತ್ರವನು। ಬೋಧಿಸುವ ಬುಧಜನರ। ಪಾದ ಸೇವೆಯ ಕರುಣಿಸು।।7।। ಮಿತ್ರನುದಯದಲೆದ್ದು। ಚಿತ್ತ ನಿರ್ಮಲನಾಗಿ। ಭಕ್ತಿಯಲಿ ಶ್ರೀತುಳಸಿಯ। ಮೃತ್ತಿಕೆಯ ಧರಿಸುವ। ಮಹಾತ್ಮರನು ಕಂಡು ಯಮ। ಭೃತ್ಯರಂಜುವರು ಭಯದಿ।।8।।

ಇಂತು ಶ್ರೀತುಳಸಿ ಶ್ರೀಮಂತಿನಿಯ ಸ್ತೋತ್ರವ ನಿರಂತರದಿ ಭಜಿಸುವವರ। ಚಿಂತಿತಪ್ರದನಾಗಿ। ನಿಂತು ಕಾರ್ಪರ್ತೆರದಿ ಸಿರಿ। ಕಾಂತ ನರಹರಿಪೊರೆವನು ॥9॥

ತುಳಸೀ ರಂಗನಾ ತೋರಿಸೇ **ರಾಗ: ತೋಡಿ**

ತುಳಸೀ ರಂಗನಾ ತೋರಿಸೇ। ಸರಸೀಜನಯನೇ॥ಪ॥ ತುಳಸಿ ರಂಗನ ತೋರಿ ಹರುಷವ ಪಾಲಿಸು। ನಿರುತದಿ ನಿನ್ನಂಘ್ರಿ ಕಮಲ ಭಜಿಸುವೇ॥ಅ.ಪ॥ ಬಂಧನ ಬಿಡಿಸುವಳೇ ಶ್ರೀ ಹರಿಯ। ಆನಂದ ಭಾಷ್ಪದಿ ಜನಿಸಿದಳೆ॥ ನೊಂದೆನೇ ಬಹು ವಿಧ ಬಂಧನ ದೇಹದಿ। ಮುಂದು ಗಾಣದೆ ನಿನಗೊಂದಿಸಿ ಬೇಡುವೆ। ಇಂದಿರೇಶನ ಪಾದ ದ್ವಂದ್ವ ಕಮಲದಲಿ। ಪೊಂದಿಸು ಮನವ ಆನಂದ ಪಾಲಿಸು॥1॥ ಕಾಲಲಂದುಗೆ ಗೆಜ್ಜೆಯು। ಉಡಿಯಲ್ಲಿ ಪೀತಾಂಬರ। ಮೆರುಗೂ ಹೊಳೆವು। ಘೋರ ಹರಡಿ ವಂಕಿ। ಕೀಲು ಕಂಕಣವಿಟ್ಟು। ವಾರೆ ನೋಟದಿ ಹರಿ ಸೇರಿ ಸೇವಿಸುವಂತೆ। ನೀರಜಾಕ್ಷಿ ನಮ್ಮ ಮಾರಪಿತನ ಪದ। ತೋರಿಸಿ ಎನ್ನನು ಪಾರುಗಾಣಿಸೇ॥2॥ ಪಾಲುಗಲ್ಲದ ಬೆಳಕಾ ಕಸ್ತೂರಿ ತಿಲಕ। ನೀಲಕುಂತಳ ಶೋಭಿಪಾ। ಲೋಲನಯನೆ ಫಣಿ ವೇಣಿ ಶೋಭನ ಶ್ರೇಣಿ। ಮಾಣದೆ ಕೊಡು ಮತಿ ಕಂಠಿ ಕಟ್ಟಾಣಿ। ವನಿತಾ ಮಣಿ ಭೂಮಿಯೊಳಗೆ ಇನ್ನ್ಯಾರು ನಿನಗೆ ಸರಿ। ಬಾಲಕೃಷ್ಣನ ಪದ ತೋರಿಸಿ ಪಾಲೀಸೇ॥3॥

ತುಳಸೀದೇವಿ ಬಾರೆ ಎಂದು **ರಾಗ: ಸಿಂಧುಭೈರವಿ**

ತುಳಸೀದೇವಿ ಬಾರೆ ಎಂದು ಕರೆವೆ ನಾ ಮಂದಿರಕೆ ॥ಪ॥ ಬೇರು ಬಹಳ ಗಾತ್ರವೇ ನಿನ್ನದಳಗಳು ವಿಚಿತ್ರವೇ। ಮೃತ್ತಿಕೆ ಪವಿತ್ರವೇ ನಿನ್ನ ಪೂಜಿಸುವವರು ಭಕ್ತರೆ॥1॥ ಅಮೃತ ಕಲಶದೊಳಗೆ ನೀನು ಜನಿಸಿದಿ ಅವತರಿಸಿದಿ। ಹಸಿರು ಪೀತಾಂಬರವನ್ನುಟ್ಟು ಶಶಿಮುಖಿ ಬೇಗ ಬಾರೆಲೆ॥2॥ ಗೆಜ್ಜೆ ಪಾಡಗ ಇಟ್ಟೀಯೆ ನಿನ್ನ ಹೆಜ್ಜೆ ಮುಂದಕ್ಕಿಟ್ಟೀಯೆ। ಮಜ್ಜಿಗೆ ಕಡಗೋಲ ಪಿಡಿದ ಉಡುಪಿ ಕೃಷ್ಣನ ಮಡದಿಯೆ॥3॥

ಕುಸುಮದಳಾಕ್ಷಿಯೆ ಬಿಸರುಹ **ರಾಗ: ಕಾಪಿ**

ಕುಸುಮದಳಾಕ್ಷಿಯೆ ಬಿಸರುಹ ನೇತ್ರೆಯೆ। ಅಸುರ ಹರನ ಪ್ರಿಯೆ ಬಾ ತುಳಸಿ ॥ ಪ ॥ ವಸುದೇವ ಕಂದನ ವಾಸುಕಿಶಯನನ ಕುಶಲದಿ ಕರೆತಾ ನೀ ಒಲಿಸಿ ॥ಅ.ಪ.॥ ಶಂಖ ಚಕ್ರಧರ ಶ್ರೀಗೋವಿಂದನ। ಬಿಂಕದಿ ಮಡದಿಯೆ ಶ್ರೀ ತುಳಸಿ । ಶಂಕರ ಪ್ರಮುಖಾದ್ಯಮರರು ನಿನ್ನ । ಪದ ಪಂಕೇರುಹಗಳ ನಂಬಿಹರಮ್ಮ ॥1॥ ನಾರದ ಸನ್ನುತೆ ನಾರಾಯಣಪ್ರಿಯೆ । ಕಾರುಣ್ಯನಿಧಿಯೆ ಕಮಲಾಕ್ಷಿ । ಸಾರ ಸೌಭಾಗ್ಯವ ಕರುಣಿಸು ತಾಯೆ । ಘೋರ ಭವಾಂಬುಧಿ ದಾಟಿಸಿ ಕಾಯೆ ॥2॥ ಬೃಂದಾವನವೆ ಮಂದಿರ ನಿನಗೆ । ನಿಂದುರಾಜಿಸು ಎನ್ನ ಅಂಗಳದಿ । ಕಂದರ್ಪ ಜನಕ ಶ್ರೀ ನಾಗೇಶ ಶಯನನ । ಪೊಂದಿ ಕೊಂಡಿರುವಂತೆ ಸುಂದರಿ ತುಳಸಿ ॥3॥

ನಡೆದು ಬಾರೆ ತುಳಸಿದೇವಿ **ರಾಗ: ಹಿಂದೂಸ್ಥಾನಿಕಾಪಿ**

ನಡೆದು ಬಾರೆ ತುಳಸಿದೇವಿ ನಡಮುಡಿಯಾನ್ಹಾಸುವೇ। ನಡೆಮುಡಿಯನ್ಹಾಸಿ ನಿಮ್ಮನು ಬಿಡದೆ ಬಾರೆಂದು ಪೂಜಿಪೆ॥ಪ॥ ಅರಿಶಿನ ಕುಂಕುಮ ಹಳದಿ ಹರುಷದಿಂದಲಿ ತಂದೆವೇ। ಹರುಷದಿಂದಲಿ ತಂದು ನಾವು ಸರಸಿ ಬಾರೆಂದು ಪೂಜಿಪೆ॥1॥ ಮಲ್ಲೆ ಮಲ್ಲಿಗೆ ಜಾಜಿ ಸಂಪಿಗೆ ಎಲ್ಲ ಕುಸುಮವ ತಂದೆವೆ। ಎಲ್ಲ ಕುಸುಮವ ತಂದು ನಾವು ಫುಲ್ಲನಾಭನ ಮುಡಿಗೆ ಮುಡಿಸುತ॥2॥ ಕಂದರೂ ಸಹಿತಾಲಿ ನಿಮ್ಮಯ ಮಂದಿರಕ್ಕೆ ಬಂದೆವೇ। ಮಂದಿರಕ್ಕೆ ಬಂದು ನಾವು ನಿಂದು ವರಗಳ ಬೇಡುವೆನೆ॥3॥

ನೆಟ್ಟು ನೀರೆರೆದು ನಿಮ್ಮ **ರಾಗ: ಆನಂದಭೈರವಿ**

ನೆಟ್ಟು ನೀರೆರೆದು ನಿಮ್ಮ ಮುಟ್ಟಿ ಪೂಜಿಸೆ। ಕಷ್ಟ ಕರ್ಮಗಳನು ಕಳೆದು ಕೊಟ್ಟು ರಕ್ಷಿಸೇ॥ಪ॥ ಬಾರೇ ಬೇಗ ತುಳಸಿ ದೇವಿ ಭಜಿಪೆ ನಿನ್ನನು॥ಅ.ಪ.॥ ಮಾರನೈಯ್ಯನರಸಿ ನಿಮ್ಮ ಬೇಡಿಕೊಂಬೆನೆ। ವಾರಿಜಾಕ್ಷಿ ಒಂದು ವರವ ಒಲಿದು ಪಾಲಿಸೇ॥1॥ ಹೆತ್ತತಾಯಿ ತಂದೆ ನೀನೇ ಆಪದ್ಬಾಂದವಳೇ ನೀ। ರಕ್ಷಿಸೇ ಈ ಸಮಯದಿ ಲಕ್ಷ್ಮೀರಮಣನರಸಿ॥2॥

ಪೂಜೆ ಮಾಡೋಣ ಬನ್ನಿ **ರಾಗ : ಜುಂಜೋಟಿ-ಆದಿತಾಳ**

ಪೂಜೆ ಮಾಡೋಣ ಬನ್ನಿ ಶ್ರೀ ತುಳಸಿಗೆ ಪರಿಪರಿ॥ಪ॥ ಕಾಮಕ್ರೋಧ ಬಿಟ್ಟು ಠಾಣಾ ದೀವಿಗೆ ಹಚ್ಚಿ। ಅಚ್ಚುತನಾರಾಣಿ ಶ್ರೀತುಳಸಿಗೆ॥1॥ ಹಣ್ಣು ತೆಂಗಿನಕಾಯಿ ಗೊನೆಯ ಬಾಳೆಹಣ್ಣು। ಅನ್ನ ಬಡಿಸಿದ ಪರಮಾನ್ನ ಸ್ವಾಮಿಗೆ॥2॥ ಪರಿಪರಿ ನೈವೇದ್ಯಕ್ಕೆ ಅಷ್ಟಭೋಗದ ಅಡಿಗೆ। ಕರ್ಪೂರ ವೀಳ್ಯವು। ಅಚ್ಚುತನಾ ರಾಣಿ ಶ್ರೀತುಳಸಿಗೆ॥3॥

ಬಗೆ ಬಗೆ ಪೂಜಿಸೋಣ ಬನ್ನಿ **ರಾಗ: ಜುಂಜೋಟಿ**

ಬಗೆ ಬಗೆ ಪೂಜಿಸೋಣ ಬನ್ನಿ। ಮಿಗೆ ಹರುಷದಿ ಸಾಧನಗಳ ತನ್ನಿ॥ಪ॥ ಅಷ್ಟಗಂಧಾ ಬುಕ್ಕಿಟ್ಟುಗಳಿಂದ। ಮುಟ್ಟಿ ಪೂಜಿಸುವೆ ಶ್ರೀಕೃಷ್ಣ ತುಳಸಿಯ॥1॥ ಅಗರು ಚಂದನ ಆ ಪರಿಮಳವು। ಖಗವಾಹನನ ನಗೆ ಮೊಗದರಸಿಯ॥2॥ ನರಸಿಂಹ ವಿಠಲನ ಅರಸಿಗೆ ಇಂದು। ಪರಿಪರಿ ಪಂಚಾಮೃತಗಳ ತನ್ನಿ॥3॥

ಬೃಂದಾವನದೊಳು ನಿಂದ **ರಾಗ: ಕಲ್ಯಾಣಿ**

ಬೃಂದಾವನದೊಳು ನಿಂದ ಶ್ರೀ ತುಳಸಿಗೆ। ಚಂದದಿ ಪೂಜೆಯ ಮಾಡುವೆನು। ಆನಂದದಿ ಪೂಜೆಯ ಮಾಡುವೆನು॥ಪ॥ ಅರಿಸಿನ ಕುಂಕುಮ ಅಕ್ಷತೆ ಗಂಧ ಪರಿಪರಿ ಪುಷ್ಪದ ಮಾಲೆಗಳ। ಹರುಷದಿ ತಂದು ಅರ್ಪಿಸಿ ದೇವಿಗೆ ಪರಮಾನಂದದಿ ಪೂಜಿಸುವೆ॥1॥ ಅರಳು ಮಲ್ಲಿಗೆ ಜಾಜಿ ಸುರಗಿ ಸೇವಂತಿಗೆ ಪರಿಪರಿ ಪುಷ್ಪದ ಮಾಲೆಗಳ। ಪರಮಾತ್ಮಗೆ ಶ್ರೀ ತುಳಸಿಗೆ ಬೇಗನೆ ಪರಮಾನಂದದಿ ಪೂಜಿಸುವೆ॥2॥ ತ್ರೇತಾಯುಗದೊಳು ಸೀತಮ್ಮ ದ್ವಾಪರ ಯುಗದೊಳು ರುಕ್ಮಿಣಿದೇವಿ। ಕಲಿಯುಗದೊಳು ಪದ್ಮಾವತಿಯ ಪರಮಾನಂದದಿ ಪೂಜಿಸುವೆ॥3॥

ಶ್ರೀ ತುಳಸಿ ಮಾತೆ ದಾಮೋದರ **ರಾಗ: ಯಮುನ್‌ಕಲ್ಯಾಣಿ-ಆದಿತಾಳ**

ಶ್ರೀ ತುಳಸಿ ಮಾತೆ ದಾಮೋದರ ಪ್ರೀತೆ। ಪಾಪರಹಿತೆ ಪಾತಿವ್ರತ್ಯ ಪ್ರದಾತೆ॥ಪ॥ ಶುದ್ಧಭಾವದಿ ನಿನಗೆ ಉದಕವ ನೆರೆಯುವೆ। ಶ್ರದ್ಧೆಯೊಳೊಂದು ಪ್ರದಕ್ಷಿಣೆಗೈಯ್ಯುವೆ। ಬುದ್ಧಿಯೊಳ್ ನಲಿದಾಡೆ ಸಕಲ ಸಂಪದವೀವೆ। ಮುದ್ದು ಕೃಷ್ಣನ ಪ್ರೀತೆ ಮೋಕ್ಷಪ್ರದಾತೆ॥1॥ ನೀನೊಲಿಯಲು ಹರಿ ಒಲಿಯುವನಂತೆ। ನೀನಿಲ್ಲದ ಪೂಜೆಯ ಹರಿಯೊಲ್ಲನಂತೆ। ಮಾನಿನಿಯರಿಗೆ ನೀ ಮಾಣಿಕ್ಯದಂತೆ। ಜ್ಞಾನಭಕ್ತಿಯಿತ್ತು ಪೊರೆಯೆ ಪುನೀತೆ॥2॥ ನಿನ್ನ ಪಾದದಿ ದಿವಿಜರ ವಾಸವಂತೆ। ನಿನ್ನ ಮೃತ್ತಿಕೆ ಪೂಜೆ ಪಾವನವಂತೆ। ನಿನ್ನೊಳ್ ಇರುವ ಹರಿ ಧನ್ವಂತರಿಯಂತೆ। ಘಮಮೂಲ ನಾರಾಯಣ ಪ್ರೀತೆ॥3॥

ಸಖಿ ನೀನು ಬಾರೇ **ರಾಗ: ಸುರುಟಿ**

ಸಖಿ ನೀನು ಬಾರೇ। ಕುಸುಮವ ತಾರೇ। ತುಳಸಿ ಪೂಜೆಗೆ॥ಪ॥ ಪೂಜೆಗಳ್ ಮಾಡೋಣ। ಪುಷ್ಪಗಳ್ ಮುಡಿಸೋಣ। ಆರತಿ ಎತ್ತೋಣ॥ಅ.ಪ॥ ಒಂದೊಂದು ದಳದಲ್ಲಿ ಒಂದೊಂದು
ಮೂರುತಿ। ಚಂದದಿಂದಲಿ। ಇರುತಿದ್ದ ಶ್ರೀ ಕೃಷ್ಣಮೂರುತಿ ರಾಣಿಗೆ। ಎತ್ತುವೆ ಆರುತಿ॥1॥ ವಿಠಲರಾಯನ ಪಟ್ಟದ ರಾಣಿ। ಶ್ರೇಷ್ಠ ಎನ್ನುವೆ। ತಟ್ಟೆಯಲಿ ತಂದಾರತಿ ಮಾಡಲು ಕೊಟ್ಟಳೇ ಮುಕ್ತಿ॥2॥

ಸ್ವೀಕರಿಸೆನ್ನಯ ಪೂಜೆಯ ತುಳಸೀ **ರಾಗ: ಸಿಂಧುಭೈರವಿ**

ಸ್ವೀಕರಿಸೆನ್ನಯ ಪೂಜೆಯ ತುಳಸೀ। ಲೋಕೋತ್ತರನರಸಿ॥ಪ॥ ಈ ಕರಗಳು। ಧನ್ಯಗಳಾಗಲಿ। ಮನ ವ್ಯಾಕುಲ ಪರಿಹರಿಸಮ್ಮಾ॥ಅ.ಪ॥ ಮಲ್ಲಿಗೆ ಸಂಪಿಗೆ ಜಾಜಿ ಸೇವಂತಿಗೆ। ಫುಲ್ಲ ಕುಸುಮಗಳಿರಲು। ಒಲ್ಲನು ಹರಿ ನೀ ನಿಲ್ಲದ ಪೂಜೆಯ। ಬಲ್ಲರಿದನು ಜ್ಞಾನಿಗಳು॥1॥ ವಂದಿಸಿ ನಿನ್ನಯ ಚರಣಗಳನು। ಫಲ ಗಂಧಪುಷ್ಪಗಳನರ್ಪಿಸುವೆ। ಬೃಂದಾವನಲೋಲನ ವಲ್ಲಭೆ। ಮೃದು। ಮಂದಹಾಸವನು ಬೀರೆ ಮಾತೇ॥2॥ ನೀನಿದ್ದೆಡೆ ಹರಿ ತಾನಿರುವನು। ಅನುಮಾನ ವಿಲ್ಲೆನೆಗೆ। ದಾನ ಧರ್ಮಗಳ ಫಲಕೆ ಕಾರಣಳು। ನೀನಾಗಿರುವೆ ಪ್ರಸನ್ನ ವದನೆ॥3॥

ಎಲ್ಲಿ ವೃಂದಾವನ ಹುಟ್ಟಿದಾ ಬಳಿಯಲ್ಲಿ **ರಾಗ: ಆರಭಿ**

ಎಲ್ಲಿ ವೃಂದಾವನ ಹುಟ್ಟಿದಾ ಬಳಿಯಲ್ಲಿ ಅಲ್ಲಿ ಶ್ರೀಕೃಷ್ಣನು ನೆಲೆಸಿರ್ಪನು। ತನ್ನ ರಾಣಿಯ ಸೇವೆ ಮಾಡಿದಾ ಜನರಿಗೆ। ಧನ್ಯಾರ್ಥವಾಗಿದ್ದ ಶ್ರೀಕೃಷ್ಣನು॥1॥ ದೃಷ್ಟಿಸೀ ನೋಡಿದಾ ನರರ ಪಾಪಗಳೆಲ್ಲ। ಬಿಟ್ಟು ಹೋಗುವುದೊಂದು ಕ್ಷಣಮಾತ್ರದಿ। ಪ್ರದಕ್ಷಿಣೆ ಮಾಡಿದವರಿಗೆ। ವಿಷ್ಣು ಸಾಯುಜ್ಯ ತಪ್ಪದು ಮುಂದಕೆ॥2॥ ಧಾರೇನು ಎರೆವಾಗ ದಾನವನು ಕೊಡುವಾಗ। ದೇಶಿ ಶ್ರೀ ತುಳಸಿಯಾ ದಳವಿಲ್ಲದೆ। ಮಾಡಿದಾ ದಾನವೂ ನಿಶ್ಫಲವಾಗುವುದು। ಬೂದೀಲಿ ಹೋಮ ವನು ಮಾಡಿದಂತೆ॥3॥ ಜಯ ಮಂಗಳ ನಿತ್ಯ ಶುಭಮಂಗಳ॥

ಜಯ ಜಯಾ ಜಯ ಜನನೀ **ರಾಗ: ಆರಭಿ**

ಜಯ ಜಯಾ ಜಯಜನನೀ ತುಳಸಿಯೇ॥ಪ॥ ಜಯ ಕೃಪಾಂಗಿ ಜಯ ಶುಭಾಂಗೀ। ಜಯತು ಸಂತೃಪ್ತೆಗೇ॥ಅ.ಪ.॥ ಹರಿಯ ವಲ್ಲಭೇ ಹರಿಕರು ಪ್ರಭೇ। ಹರದಿತುಳಸಿ ಹರಿಯ ಪ್ರಿಯಳೇ। ಹರಿಸು ಸಂಪ್ರೀತೇ॥1॥ ಮಾರಜನನಿಯೇ ಭೂರಿಕರುಣೆಯೇ। ಸಾರ ಸಾರಿದೇನೆ ಚರಣಕಮಲ। ವಾರಿಜಾಕ್ಷಿಯೇ॥2॥ ಸೃಷ್ಟಿಗುನ್ನತಳೇ ಶ್ರೇಷ್ಠವಾಹನಳೇ ನಾರಿ। ಮುಟ್ಟಿ ಭಜಿಪೆ ಕಷ್ಟ ಹರಿಸು ಕೃಷ್ಣನಿಳೆಯೊಳು॥3॥ ॥ಮಂಗಳ ಜಯ ಮಂಗಳ ಜಯ ಜಯಾ॥

ಶ್ರೀ ತುಳಸಿಯ ಪೂಜಿಪೆ ಬನ್ನಿ

ಶ್ರೀ ತುಳಸಿಯ ಪೂಜಿಪೆ ಬನ್ನಿ ಸಖಿಯರೇ ಸಖಿಯರೇ॥ಪ॥ ಮುತ್ತಿನ ಮಂಟಪವನ್ನೇ ಶೃಂಗರಿಸಿ ರತ್ನ ಸಿಂಹಾಸನವಿರಿಸಿ। ಚಿತ್ತಜನಯ್ಯನ ಮಡದಿಯಳಾದ ಮುದ್ದು ಶ್ರೀ ತುಳಸೀಗೇ ॥1॥ ಸಖಿಯರೆ ನಾವೆಲ್ಲ ಸಹಿತದಿ ಕೂಡಿ ಸಂಪಿಗೆ ಹೂವನು ತರುವಾ ॥ ಭಾಮೆ ಶ್ರೀ ತುಳಸಿಗೆ ಪೂಜೆಯನು। ಬೇಗದಲಿ ಮಾಡುವೆ ಬಾರೆ ॥2॥ ಸಾಲು ಸಾಲಾಗಿಹ ವಾದ್ಯಪ್ರಸನ್ನ ಪರಿಪರಿ ಭಕ್ಷ್ಯಂಗಳ ಸಹಿತಾ । ಭಾಮೆ ಶ್ರೀ ತುಳಸಿಗೆ ನೈವೇದ್ಯವನು ಬೇಗದಲಿ ಮಾಡುವೆನು ಬಾರೇ ॥3॥

ರಾಮ ಎಂಬ ನಾಮವ ನೆನೆದು **ರಾಗ: ಸಿಂಧೂಭೈರವಿ**

ರಾಮ ಎಂಬ ನಾಮವ ನೆನೆದು। ನಾಲ್ಗೇಲಿ ರುಚಿ ಅಮೃತಸುರಿದು। ಅಚ್ಯುತ ನಾಮ ಭಕ್ತಿಗಳಿಂದ। ಅನಂತ ನಾಭನಗುಣ ಕಥೆಕೇಳಿ। ಕುಸುಮನಾಭನ ಅಂಗಳದೊಳಗೆ। ವೃಂದಾವನದ ಮುಂದೆ। ಗೋಮಯ ತಂದು ಸಾರಿಸಿ। ಮುತ್ತಿನ ಚೌಕವಕಟ್ಟಿ। ಪಂಚಣಿಗೆ ರಂಗೋಲಿರಚಿಸಿ। ಸಕಲ ಗಂಗೆ ತೀರ್ಥವ ಮಿಂದು। ಗಂಗೆ ಉದುಕವ ಚೆಂದದಿತಂದು। ಚಂದದಿ ಕೃಷ್ಣನ ಸ್ಥಳ ಶೃಂಗರಿಸಿ। ಅಚ್ಚ ಆಕಳತುಪ್ಪವ ತಂದು ಪಟ್ಟಾವಲಿ ಬತ್ತಿಮಾಡಿ। ನಂದಾದೀವಿಗೆ ಚಂದದಲ್ಲಚ್ಚಿ। ಠಾಣಾದೀವಿಗೆ ಬೇಗದೊಲ್ಲಚ್ಚಿ। ಆಕ್ಷೀರಾಘೃತ ಸಕ್ಕರೆಮಧು ಚಂದ್ರಕಸ್ತೂರಿ ಪನ್ನೀರು ತಂದಿಟ್ಟು। ಪಂಕಜನಾಭ ನಿಗಭಿಷೇಕವಮಾಡಿ। ಆನಂದ ಜಲ್ಮದಪಾಪವಕಳೆದು। ಆನಂದಾಚ್ಯುತಗಿಟ್ಟು। ಆಜ್ವಾನ್ನವ ಕೇಶವಗಿಟ್ಟು ಅಂಗುಲಿಭರಣವಗೋಂವಿಂದಗಿಟ್ಟು। ಅಂಗೈಲಿ ಹೊಳೆವೋ। ಮುಂಗೈಲಿ ಮೆರೆವೋ। ಚಂದ್ರಸೂರ್ಯಗಿಂತ ಹೆಚ್ಚಾಗಿ ಹೊಳೆವೊ। ಕ್ಯಾವಿಗೆ ಮಲ್ಲಿಗೆ ಸಾಸಿರದವನ ಶಾವಂತಿಗೆ ಕುಂದಾರವನು ಶ್ರೀ ನಾರಾಯಣನ ಪೂಜೆಯು ಚೆಂದ। ಮುತ್ತಿನರಿವಾಣವ ಬೆಳಗಿತಂದಿಟ್ಟು। ಶ್ಯಾಲ್ಯಾನ ಶಾಕ್ಕುಗಳ ಬಡಿಸಿ। ಗೋವಿಂದಾ ನಿನಗರ್ಪಿತವೆಂದು। ಗೋವರ್ಧನನಿನಗರ್ಪಿತವೆಂದು। ಮಾನಸ ಪೂಜೆಯ ದ್ಯಾನಿಸಿಕೊಳ್ಳಿ। ಶ್ರೀನಾರಾಯಣ ನಮ್ಮ ಹೃದಯದಲಿ। ಶ್ರೀರಾಮ್ ಜಯರಾಮ॥

ಶ್ರೀತುಳಸಿ ಜಯತುಳಸಿ **ರಾಗ: ಕಾಂಬೋಧಿ-ಏಕತಾಳ**

ಶ್ರೀತುಳಸಿ ಜಯತುಳಸಿ ಜಯಜಯ ತುಳಸಿ। ಶ್ರೀಕೃಷ್ಣ ತುಳಸಿ ವರ ಶ್ರೀರಾಮ ತುಳಸಿ॥ಪ॥ ಗಂಗೆ ಗೋದಾವರಿ ತುಂಗ ಭದ್ರಾ ಯಮುನೆ। ಮಂಗಳ ತರಂಗಿಣಿಯೆ ಶ್ರೀ ಕೃಷ್ಣವೇಣಿ। ರಂಗನಾಥನ ಸಮೇತ ದಿವ್ಯ ಕಾವೇರಿಯೆ। ಮಂಗಳೆಯೆ ನಿನ್ನಲ್ಲಿ ವಾಸವಾಗಿಹರು॥1॥ ನೀನಿರುವ ಕಡೆಗಳಲಿ ರೋಗಗಳ ಭಯವಿಲ್ಲ। ನೀನಿರುವ ಕಡೆಗಳಲಿ

ಭೂತಗಳ ಭಯವಿಲ್ಲ। ನೀನಿರುವ ಕಡೆಗಳಲಿ ಯಮನ ಭಯವೂ ಇಲ್ಲ। ನೀನಿರುವ ಕಡೆಗಳಲಿ ಪಾಪ ಭಯವಿಲ್ಲ॥2॥ ಕಂಚಿ ಕಾಶಿ ಮಧುರೆ ನೈಮಿಷ್ಯ ಹರಿದ್ವಾರ। ಭೂಸುರದ ಗೋಕರ್ಣ ದ್ವಾರಕಾವತಿಯು। ಶ್ರೀಶೈಲ ಹಿಮವಂತ ದಿವ್ಯ ಸುಕ್ಷೇತ್ರಗಳು। ಭಾಸವಾಗಿಹವಮ್ಮ ನಿನ್ನ ಚರಣದಲಿ॥3॥ ನಿನ್ನ ಪಾದವೆ ಚತುರ್ಮುಖನ ಪಾದವುದೇವಿ। ನಿನ್ನ ಪೂಜೆಯೆ ಸಕಲ ದೇವತಾಪೂಜೆ। ನಿನ್ನ ಬೃಂದಾವನವೆ ವೈಕುಂಠ ಕೈಲಾಸ। ನಿನ್ನ ತೀರ್ಥವೆ ಸಕಲ ಪುಣ್ಯ ತೀರ್ಥ॥4॥ ಗಂಧ ಪುಷ್ಪವು ಧೂಪದೀಪ ನೈವೇದ್ಯದಿಂ। ಮಂಗಳೆಯೆ ನಿನ್ನ ಪೂಜೆಗೈಯುವೆನು। ಇಂದಿರೆಯೆ ಸೌಭಾಗ್ಯ ಸಂಪದವ ಎನಗಿತ್ತು। ಮುಂದೆ ಪಾಲಿಸೆ ಎನ್ನ ಮುರಹರನ ರಾಣಿ॥5॥ ಮುನ್ನೂರ ಅರವತ್ತುಗಾವುದ ನೀ ಪೋಗಿ। ತಮ್ಮ ತನುವನೆ ತೊಳೆದು ಭಂಗಪಟ್ಟು। ಹೊನ್ನು ಹಣವು ಕಾಸುಮುಟ್ಟಿಸದೆ ಲೋಕದೊಳು। ಚೆನ್ನಾಗಿ ಮುಕ್ತಿಯನು ಪಡೆಯುವವರು ಕೇಳೊ॥6॥ ದಾನವನು ಕೊಡುವಾಗ ಧಾರೆಯನು ಎರೆವಾಗ। ದೇವಿ ಶ್ರೀತುಳಸಿಯ ದಳವಿಲ್ಲದೆ। ಮಾಡಿದ ದಾನವ ನಿಷ್ಫಲವಾಗುವುದು। ನೀರಿನಲಿ ಮಾಡಿದ ಹೋಮದಂತಹುದು॥7॥

ತುಳಸೀಮಾತೇ ದುಃಖರಹಿತೇ **ರಾಗ: ಕಲ್ಯಾಣಿ**

ತುಳಸೀಮಾತೇ ದುಃಖರಹಿತೇ। ಹೇ ಸುಜಾತ ಹೇಲಲಿತ॥ಪ॥ ಅರಿಸಿನ ಕುಂಕುಮ ಬೆರೆಸಿ ಪರಿಮಳಗಂಧ। ಅರಳಿದ ಪುಷ್ಪಗಳಿಂದ ತುಳಸಿಗಾನಂದದಿಂದ॥1॥ ಸರ್ವಾಭರಣದಿಂ ಅಲಂಕೃತಳಾದೆ ದೇವಿ। ಸರ್ವರಿಗೂ ಸಹಕಾರಿ ಯಾದೆಯಮ್ಮ॥2॥ ನಿರುತ ನಿನ್ನನೂ ಚರಣ ಸೇವಿಪಂತೆ। ಅನುದಿನವೂ ನೀ ಪರಮ ಪ್ರೀತೇ ಭಾಗ್ಯದಾತೇ॥3॥

ಅಂಬಾ ಶ್ರೀ ತುಳಸಿ ಅರುಳ್ ಸೈವಾಯ್ (ತಮಿಳು) **ರಾಗ: ಸಿಂಹೇಂದ್ರಮಧ್ಯಮ**

ಅಂಬಾ ಶ್ರೀ ತುಳಸಿ ಅರುಳ್‌ಸೈವಾಯ್। ಅಮ್ಮಾ ಉನ್ ಪದಮೇ ತಾರಕಮೇ ಸೈತಿರುವೇ॥ಪ॥ ನಂಬಿ ಉನ್ನೈ ಪೂಜಿತ್ತಾಲ್ ತುನ್ಬಮೆಲ್ಲಾಂ ತೀರುಮೇ। ಅಮ್ಮಾ ನೀಯೇ ಶರಣಂ ದೇವಿ॥ಅ.ಪ.॥ ಪೆಣ್‌ಗಳುಕ್ಕೇ ಉನ್ನಾಲ್ ಪೆರುಮೈಯನ್ರೋ ಪೇರ್ ಅರುಳ್ ತಾಯೆ। ಪೇದೆ ಎನಕ್ಕು ಸೌಭಾಗ್ಯಂ ನೀಯೇ ಆದಿಕಾರಿಣಿ ದೇವಿ॥ಚರಣ॥

ಉನದುಪುಗಳ್ ಪಾಡುವೇನ್(ತಮಿಳು) **ರಾಗ: ಮೋಹನ**

ಉನದುಪುಗಳ್ ಪಾಡುವೇನ್ ಶ್ರೀ ತುಳಸಿ ದೇವಿ। ಎನ್ ಉಳ್ಳಂ ಕನಿಂದೇನ್ ನಾನ್॥ಪ॥ ಮಾನವರ್ ವಣಂಗುಂ ಉಯರ್ ದೈವಮೇ। ಉನ್ ದರಿಸನಂ ಆನಂದಮೇ ದೇವಿ॥ಅ.ಪ॥ ನಾರಾಯಣನ್ ಮಾದೇವನ್ ತನ್ ಮೇನಿಯಿಲ್ ತಾಂಗುಂ। ಕಾರಣಂ ಸೊಲ್ ಕಾಮಧೇನುವೆ। ವಂದಕಾರದುಪೋಲ್ ಇನ್ಬಂಮಾರಿ ಪೇಯುಂ। ಉನ್ ಕರುಣೈ ವಡಿವೇ ತನ್ನಿಗರೆ ಪುನಿತ ವರದ ಅಡಿಮೈ ನಾನ್॥ಚರಣ॥

ಎಲ್ಲಿ ಶ್ರೀತುಳಸಿಯ ವನವು **ರಾಗ: ಭೌಳಿ**

ಎಲ್ಲಿ ಶ್ರೀತುಳಸಿಯ ವನವು। ಅಲ್ಲೊಪ್ಪುವವರು ಸಿರಿ ನಾರಾಯಣರು॥ಪ॥ ಗಂಗೆ ಯಮುನೆ ಗೋದಾವರಿ ಕಾವೇರಿ ಕಂಗೊಳಿಸುವ ಮಣಿಕರ್ಣಿಕೆಯು। ತುಂಗ ಭದ್ರೆ ಕೃಷ್ಣವೇಣಿ ತೀರ್ಥಗಳೆಲ್ಲ। ಸಂಗಡಿಸುತ ವೃಕ್ಷ ಮೂಲದಲ್ಲಿರುವುವು॥1॥ ಸರಸಿಜಭವ ಸುರಪ ಪಾವಕ। ಚಂದಿರ ಸೂರ್ಯ ಮೊದಲಾದವರು। ಸಿರಿ ರಮಣನ ಆಜ್ಞೆಯಲಿ ಅಲುಗದಂತೆ। ತರುಮಧ್ಯದೊಳು ನಿತ್ಯ ನೆಲಸಿಪ್ಪರು॥2॥ ಋಗ್ವೇದ ಯಜುರ್ವೇದ ಸಾಮ ಅಥರ್ವಣ। ಅಗ್ಗಳಿಸಿದ ವೇದ ಘೋಷಗಳು। ಅಗ್ರ ಭಾಗದಲಿವೆ ಬೆಟ್ಟದೊಡೆಯನಲ್ಲಿ। ಶೀಘ್ರದಿ ಒಲಿವ ಶ್ರೀ ಪುರಂದರ ವಿಠಲ॥3॥

ನಂಬಿದೆ ನಿನ್ನ ಚರಣ ಕಮಲ **ರಾಗ: ಸೌರಾಷ್ಟ್ರ**

ನಂಬಿದೆ ನಿನ್ನ ಚರಣ ಕಮಲ ತುಳಸಿದೇವಿ॥ಪ॥ ಅಂಬುಜಾಕ್ಷ ಪಾದಾಂಬುಜ ಪ್ರಿಯಳೆ ತುಳಸಿದೇವಿ॥ಅ.ಪ॥ ಮಂದಮತಿಯು ನಿನ್ನ ಭಜಿಸಲರಿಯೆ ತುಳಸೀದೇವಿ। ಕುಂದುಗಳೆಣಿಸದೆ ಕಾಯೆ ಕರುಣದಿ ತುಳಸಿದೇವಿ॥1॥

ಇಂದಿರೇಶನ ಶುಭ ಕಂಧರ ನಿಲಯಳೆ ತುಳಸಿದೇವಿ। ಕುಂದರಧನೆ ಪೂರ್ಣೇಂದು ವದನೆ ಸಿರಿ ತುಳಸಿದೇವಿ॥2॥ ಸ್ಮರಣೆ ಮಾತ್ರದಿ ಪಾಪ ಪರಿಹರಿಸುವಿ ತುಳಸಿದೇವಿ। ಪಾಮರಳನು ಉದ್ದರಿಸೇ ಕರುಣದೀ ತುಳಸಿದೇವಿ॥3॥ ಕಾಮಿತದಾಯಕಿ ಕಂಜನಯನೆ ತುಳಸಿದೇವಿ। ನಮ್ಮ ಕಾಮನಯ್ಯನ ಪಾದ ತಾವರೆ ಮಧುಪಳೆತುಳಸಿದೇವಿ॥4॥ ಹರಿಯ ನೇತ್ರ ಬಿಂದುಗಳಿಂದುದಿಸಿದೆ ತುಳಸಿದೇವಿ। ಹಲವು ಜೀವರ ಪೊರೆದೆ ಕರುಣದಿ ತುಳಸಿದೇವಿ॥5॥ ದುರಿತಗಳನ್ನು ದೂರಮಾಡಿಸಿದೀ ತುಳಸಿದೇವಿ। ಹರಿಪಾದಾಂಬುಜದಲ್ಲಿ ಮನವ ನಿಲ್ಲಿಸು ತುಳಸಿದೇವಿ॥6॥ ಪಲ್ಲವಾದರಿ ಫುಲ್ಲನಯನೆ ಸಿರಿ ತುಳಸಿದೇವಿ। ಚೆಲ್ಲುವಿ ಕರುಣವ ಸಜ್ಜನರಲ್ಲಿ ಸಿರಿ ತುಳಸಿ ದೇವಿ॥7॥ ಸೊಲ್ಲ ಲಾಲಿಪದೊಂದು ಕಿಂಕರಳೆಂದು ತುಳಸಿದೇವಿ। ನಮ್ಮ ಗೊಲ್ಲರ ಒಡೆಯನ ಭಕುತಿಯ ಪಾಲಿಸು ತುಳಸಿದೇವಿ॥8॥ ಮುಟ್ಟಿ ನಿನ್ನಯ ಪಾದ ಭಜಿಸುವ ಜನರಿಗೆ ತುಳಸೀದೇವಿ। ಕಷ್ಟವ ಕಳೆದು ಅಭೀಷ್ಟವ ಕೊಡುವೆ ತುಳಸಿದೇವಿ॥9॥ ಭ್ರಷ್ಟಳೆನುತ ಎನ್ನ ದೂರ ನೋಡದೆ ತುಳಸಿದೇವಿ ಕೃಷ್ಣವೇಣಿ ಬಾಲಕೃಷ್ಣನ ಪ್ರಿಯಳೆ ತುಳಸಿದೇವಿ॥10॥

ಏನು ಧನ್ಯಳೋ ತುಳಸಿ — ರಾಗ: ತೋಡಿ

ಏನು ಧನ್ಯಳೋ ತುಳಸಿ ಎಂಥ ಮಾನ್ಯಳೊ। ಸಾರಸಾಕ್ಷಿ ಹರಿಯ ಕೊರಳ ಹಾರವಾಗಿ ಮೆರೆಯುತಿಹಳು॥ಪ॥ ಅರುಣ ಉದಯದಲ್ಲಿ ಎದ್ದು ತುಳಸಿ ಗಿಡಕೆ ನೀರನೆರೆದು। ಹಣೆಗೆ ಕುಂಕುಮ ಧರಿಸಿದರೆ ದುರಿತ ಪರಿಹಾರವು॥1॥ ಚಂದದಿಂದ ತುಳಸಿ ಬೃಂದಾವನ ಮಾಡಿ ಬೆಳೆಸಿ। ಇಂದಿರೇಶಗರ್ಪಿಸಿದರೆ ಚಂದದಿಂದ ಒಲಿವ ನಮಗೆ॥2॥ ಎಳೆಯ ತುಳಸಿ ದಳವ ತಂದು ಥಳಥಳಿಸುವ ಮಾಲೆ ಮಾಡಿ। ನಳಿನನಾಭಗರ್ಪಿಸಿದರೆ ಸುಲಭದಿಂದ ಒಲಿವ ನಮಗೆ॥3॥ ಹರಿಯ ವಕ್ಷಸ್ಥಳ ಧರಿಸಿದವಳು ತವಕದಲಿ ವರಪುರಂದರ। ವಿಠಲನಿಗೆ ಒಲಿವ ನಲಿವ ಚೆಲುವ ತುಳಸಿ॥4॥

ಏಳುತ್ತಲೇ ಎದ್ದು ಕರಗಳನೇ

ಏಳುತ್ತಲೇ ಎದ್ದು ಕರಗಳನೇ ಮುಗಿದು ಮೂರ್ ಲೋಕಮಾತೆಗೆ। ನಮೋ ನಮೋ ಎನುತ ಬೃಂದಾವನದ ಸೇವೆಯಮಾಡೀ॥ಪ॥ ಸುತ್ತಲು ಸಾರಿಸಿ ಸುಣ್ಣವನ್ನೇ ತುಂಬಿ ಅಚ್ಚ ವರ್ಣದ ಪಂಚ ರಂಗೋಲಿಯನಿಕ್ಕಿ ಮೇಲೆ ಪ್ರೋಕ್ಷಿಸಿ ಪನ್ನೀರ ನೆರೆದರೆ ಏಳೇಳು ಜನ್ಮದ ಪಾಪವೆಲ್ಲ ಹಿಂಗುವುದು ಕೃಷ್ಣಾ॥1॥ ಹರಿಹರಿ ಮನವೇ ಹರಿಪಾದದೆಡೆಗಾಗಿ ಸುಳಿಸುಳಿ ಮನವೇ ಬೃಂದಾವನದೆಡೆಗಾಗಿ ಧಾತು ಮೃತ್ತಿಕೆಯನೆತಂದು ಆಕೆಗೆ ನೆಲೆಮಾಡಿ ಲೇಪಿಸಿದವರಿಗೆ ಬರುವುದು ವೈಕುಂಠ ಪದವಿ ದೂರಾ॥2॥ ಹೋಗಲಿ ಬೇಡ। ದೇಹ ದಂಡಿಸಬೇಡ ಮಾಡೋ ಕೆಲಸದ ಕೂಡೆ ಬಂದ ತುಳಸೀ ಸೇವೆ। ಅತ್ತೆ ಮಾವಂದಿರ ಸೇವೆ ಮಾಡಿದಫಲ। ಪತಿಯ ಸೇವೆ ಮಾಡಿದ ಫಲ ತೀರ್ಥಯಾತ್ರೆ ಮಾಡಿದಫಲ॥3॥ಕೊಡುವಳು ಶ್ರೀ ತುಳಸಾದೇವಿ।ದಳ ಸಂಪನ್ನೆ ನಾನಿನ್ನ ಚರಣದೊಳಿರುವೆ ನೀಯೆನ್ನ ಹೃದಯದೊಳಿರು।ತುಳಸೀ ಮಂತ್ರಂ॥4॥

ದೇವಿ ತುಳಸಿ ಜಯದಾತೆ

ದೇವಿ ತುಳಸಿ ಜಯದಾತೆ ಪೂತೇ। ದಿವಿಜಕೀರ್ತೇ ಭುವನಮಾತೇ ದೇವಿ ತುಳಸಿ ಜಯದಾತೆ ॥ಅ.ಪ.॥ ದಯಾಸಾಗರೇ ತ್ರಯೀಮಂದಿರೇ। ವಿಭವ ವಿತರಣೆ ವಿಶಾಲಕರುಣೇ ॥1॥ ಶುಭಾನಂದತೇ ಪ್ರಭಾಸನ್ನುತೇ ವಿಭವ ವಿತರಣೆ ವಿಶಾಲ ಕರುಣೇ ॥2॥

ಅಮ್ಮ ರಾವಮ್ಮ ತುಲಸಮ್ಮ — ರಾಗ: ಕಲ್ಯಾಣಿ–ತ್ರಿಶ್ರರೂಪಕತಾಳ

ಅಮ್ಮ ರಾವಮ್ಮ ತುಲಸಮ್ಮ ನನು ಪಾಲಿಂಪವಮ್ಮ। ಸತತಮು ಪದಮುಲೇ ನಮ್ಮಿನಾನಮ್ಮ॥ಪ॥ ನೆಮ್ಮತಿನಿ ನೀವಿಹಪರಮ್ಮು ಲೊಸಗುದು ವನುಚು ಕಮ್ಮವಿಲ್ತುನಿ ತಂಡ್ರಿ ಗಲನ್ನೈನ ಬಾಯಡಟ॥ಅ.ಪ.॥ ನೀ ಮೃದುತನುವುನುಗನ ನೀ ಪರಿಮಳ ಮುನುಗನಿ ನೀ ಮಹಾತ್ಯ ಮುನುಗನಿ ನೀರಜಾಕ್ಷಿ ತಾಮರಸ ನೇತ್ರುಡು ತ್ಯಾಗರಾಜುನಿಮಿತ್ರು ಪ್ರೇಮತೋ ಶಿರಮುನನು ಬೆಟ್ಟುಕೊನ್ನಾಡಟ॥ಚರಣ॥

ತುಳಸೀ ದಳಮುಲಚೇ **ರಾಗ: ಮಾಯಾಮಾಳವಗೌಳ-ರೂಪಕತಾಳ**

ತುಳಸೀ ದಳಮುಲಚೇ ಸಂತೋಷಮುಗಾ ಪೂಜಿಂತು॥ಪ॥ ಪಲುಮಾರು ಚಿರಕಾಲಮು ಪರಮಾತ್ಮುನಿ ಬಾದಮುಲಕು॥ಅ॥ ಸರಸೀರುಹ ಪುನ್ನಾಗ ಚಂಪಕಪಾಟಲ ಕುರುವ ಕರವೀರ ಮಲ್ಲಿಕಾಸುಗಂಧರಾಜ ಸುಮಮುಲೇ। ಧರನಿವಿಯೊಕ ಪರಿಯಾಯಮು। ಧರ್ಮಾತ್ಮುನಿ ಸಾಕೇತ ಪುರವಾಸುನಿ ಶ್ರೀ ರಾಮುನಿ ವರ ತ್ಯಾಗರಾಜನುತುನಿ ॥ಚರಣ॥

ವೃಂದಾವನದೇವಿ ನಮೋ ನಮೋ

ವೃಂದಾವನದೇವಿ ನಮೋ ನಮೋ। ಚೆಲ್ವ। ಮಂದರಧರನ ಮನಃಪ್ರಿಯಳೆ ॥ಪ॥ ನಿನ್ನ ಸೇವಿಸಿ ಉದಕವನೆರೆಯಲು। ಮುನ್ನ ಮಾಡಿದ ಪಾಪ ಹೋಗುವುದು॥ ಎನ್ನ ಇಪ್ಪತ್ತೊಂದು ಕುಲದವರಿಗೆಲ್ಲ। ಉನ್ನತ ವೈಕುಂಠ ಪದವೀವಳೆ॥1॥ ಒಂದೊಂದು ದಳದಲ್ಲಿ ಒಂದೊಂದು ಮೂರುತಿ। ಸಂದಣಿಸಿವೆ ಬಹು ಗುಪಿತದಲಿ। ಬಂದು ಕುಂಕುಮ ಶಂಖ ಚಕ್ರ ಧರಿಸಿದರೆ। ತಂದೆ ನಾರಾಯಣ ಕರೆದೊಯ್ಯುವ ॥2॥ ಹರಿಗೆ ಸಮರ್ಪಿಸಿದ ತುಳಸಿ ನಿರ್ಮಾಲ್ಯವ। ಕೊರಳೊಳು ಧರಿಸಿ ಕರ್ಣದೊಳಿಟ್ಟರೆ। ದುರಿತರಾಶಿಗಳೆಲ್ಲ ಅಂಜಿ ಓಡುತಲಿವೆ। ಹರಿಯು ತನ್ನವರೆಂದು ಕೈಪಿಡಿವ ॥3॥ ಹತ್ತು ಪ್ರದಕ್ಷಿಣೆ ಹತ್ತು ವಂದನೆ ಮಾಡೆ। ಉತ್ತಮ ವೈಕುಂಠಪದವೀವಳೆ॥ ಭಕ್ತಿಯಿಂದಲೆ ಬಂದು ಕೈ ಮುಗಿದವರನ್ನು। ಕರ್ತು ನಾರಾಯಣ ಕರೆದೊಯ್ವನು ॥4॥ ಆವಾವ ಪರಿಯಲ್ಲಿ ಸೇವೆಯ ಮಾಡಲು। ಪಾವನ ವೈಕುಂಠ ಪದವೀವಳೆ॥ ದೇವ ಶ್ರೀ ಪುರಂದರವಿಠಲರಾಯನ। ದೇವಿ ನಿನ್ನ ಮುಟ್ಟಿ ತ್ರಾಹಿಯೆಂಬೆ ॥5॥

ನಮೋ ತುಳಸಿಮಾತಾ ಸುಜಾತ **ರಾಗ: ಮೋಹನ**

ನಮೋ ತುಳಸಿಮಾತಾ ಸುಜಾತ। ನಮೋ ಜಗನ್ಮಾತಾ॥ಪ॥ ಅನುಪಮ ಶುಭಗುಣ ಜಗವಿಖ್ಯಾತೆ। ಆಶ್ರಿತ ಮುನಿಜನ ಪೋಷಿತ ಮಾತಾ।ಶ್ರೀಬೃಂದಾವನ ತುಳಸಿಮಾತಾ। ಶ್ರಿತಜನ ಪಾಲಿತ ಸುಂದರ ಮಾತಾ॥1॥ ಪಾಹಿ ಪಾಹಿಮಾಂ ಪಾವನ ಮಾತಾ। ದೇಹಿ ದೇಹಿತಂ ನಿರುಪಮ ಮಾತಾ। ನಿರುಪಮ ಶುಭಗುಣ ಜಗವಿಖ್ಯಾತಾ। ನಮೋಸ್ತುತೆ ಶ್ರೀ ತುಳಸೀ ಮಾತಾ॥2॥

ಜಯ ತುಳಸಿ ಶ್ರೀ ತುಳಸಿ **ರಾಗ: ದರ್ಬಾರ್**

ಜಯ ತುಳಸಿ ಶ್ರೀ ತುಳಸಿ ನಿನಗೆ ವಂದನೇ। ಜಲಜನಾಭನಾ ಅರಸೀ ನಿನಗೆ ವಂದನೆ॥ಪ॥ ನಿರ್ಮಲ ಮನದಲ್ಲಿ ನಿಶ್ಚಲ ಭಕ್ತಿಯಲಿ। ಮಾಧವನಾ ಪ್ರೀತಿಯನು ಗಳಿಸಿದೆ ಅಂದು। ಶ್ರೀಕೃಷ್ಣ ತುಳಸಿ ಎಂಬ ನಾಮವ ಗಳಿಸಿ। ಹರಿಯೊಳಗೆ ಒಂದಾಗಿ ಸಾಯುಜ್ಯ ಪಡೆದು॥1॥ ಪ್ರತಿ ಮನೆಯ ಅಂಗಳವು ಆಲಯ ನಿನಗೆ। ಪ್ರತಿ ಗೃಹದ ಸುಮಂಗಲಿಯು ಭಕ್ತಳು ನಿನಗೆ। ಅರಿಶಿನ ಕುಂಕುಮದ ಸೌಭಾಗ್ಯವ ತಾರೆ। ಆರೋಗ್ಯದ ಕಲ್ಪತರು ನೀನಾಗು ಬಾರೇ॥2॥ ಉತ್ಥಾನ ದ್ವಾದಶಿಯ ಪುಣ್ಯದ ದಿನದ। ಚಂದನ ಧೂಪಾದಿಗಳ ನೀಡುವೆ ನಿನಗೆ। ನೀ ನಗುವ ಮನೆಯೊಳಗೆ ಹಾಲಿನ ಹೊಳೆಯು। ನೀ ಒಲಿಯೆ ಮನ ನಲಿಯೆ ಸುಖದಾ ಮಳೆಯು॥3॥

ನಮೋ ನಮೋ ಶ್ರೀ ತುಲಸೀ **ರಾಗ: ಆರಭಿ**

ನಮೋ ನಮೋ ಶ್ರೀ ತುಲಸೀ। ಪಾಹಿ ಪಾಹಿ ಕುಮತಿಯ ಪರಿಹರಿಸೀ ನೀ॥ಪ॥ ಅಮಿತ ಮಹಿಮೆ ಸದ್ಗುಣ ಗುಣಪೂರ್ಣೆ। ಕಮಲೇಕ್ಷಣ ಮಧುಸೂಧನನರಸೀ॥ಅ.ಪ॥ ಅಂದಿನ ಕಾಲದಲೀ ಹರಿಪದ। ವಂದಿಸಿ ಭಕುತಿಯಲೀ। ಅಂದದಿ ವರ ಪಡೆದಿಂದಿಗು ಸರ್ವರ ಮಂದಿರದೊಳಗಿಹೆ ಪೂಜೆಯ ಕೊಳುತಲಿ॥1॥ ಧನವಂತರಿ ನಯನಾದಿಂದಿಳಿ।ದೊಗಜೆ ಜಲಂಧರನಾ ಲಲನೆಯ ಉದ್ಧರಿಸಿದ ಪಾವನ ತರೆ। ಎನಗಸದಳ ವರ್ಣಿಸೆ ನಿನ್ನ ಗುಣಾ॥2॥ ನಾ ನಂಬಿದೆ ನಿನ್ನ ದೇವತ ಮಾನಿನಿ ಮಣಿ ಯೆನ್ನಾ। ಹೀನತೆ ಎಣಿಸದೆ ಕರುಣಿಸಿ ಸರ್ವದ ಪ್ರಾಣೇಶ ವಿಠಲನ ಧ್ಯಾನದೊಳಿರಿಸೆ॥3॥

ಕಟ್ಟೆ ಕಟ್ಟಿ ನೀರ್ಹುಯ್ದು ತುಳಸೀ ಸುತ್ತ **ರಾಗ: ಆನಂದಭೈರವಿ**

ಕಟ್ಟೆ ಕಟ್ಟಿ ನೀರ್ಹುಯ್ದು ತುಳಸೀ ಸುತ್ತ ಪ್ರದಕ್ಷಿಣೆಮಾಡಿ। ಅರ್ಥಿಯಿಂದಲಿ ಒಲಿವೋಳು ಶ್ರೀ ತುಳಸಾದೇವಿ।।ಪ।। ಕಾನನದಲ್ಲಿರುವ ತುಳಸೀಗೆ। ನಾನಾ ಪಾರಿಜಾತಗಳು। ಶ್ರೀಕೃಷ್ಣನಿದ್ದ ಬಳಿಗೆ ಬರುವೋಳು। ಕೃಷ್ಣನರಸಿ ತಾನು ಎಲ್ಲುಂಟು ಎನಬೇಡ। ಎಲ್ತರಲಿ ಎನಬೇಡ ಕಲ್ಲುಪುಡಿಮಾಡಿ। ಒಂದು ಪದ್ಮವೇ ಸಾಕು। ಅಂಗಡಿಗೆ ಹೋಗ್ಬೇಡ ಬಹಳಾ ಪ್ರಯಾಸಬೇಡ।।1।। ಕೆಲಸದಲ್ಲಿ ಕೆಲಸ ಇಂಥ ತುಳಸಿಸೇವೆ। ಇಂಥ ತುಳಸಿ ಇರುವ ಸ್ಥಳದಲ್ಲಿ ಪುಣ್ಯ ಹೆಚ್ಚುವುದು। ಪಾಪಕಳೆಯುವುದು ಪುತ್ರಸಂತಾನ ಹೆಚ್ಚುವುದು। ಹಿತ್ತಲಲ್ಲಿರುವೋಳೆ ಮುತ್ತಿನ ಮುಡಿಯೋಳೇ। ಅನಂತನಂತಪಾದಕ್ಕೆ ನಮಸ್ಕಾರ।।2।।

ಶ್ರೀತುಳಸಿಯ ಪೂಜಿಸೆ ಬನ್ನಿ **ರಾಗ: ಆನಂದಭೈರವಿ**

ಶ್ರೀತುಳಸಿಯ ಪೂಜಿಸೆ ಬನ್ನಿ। ಸಖಿಯರೇ ಸಖಿಯರೇ।।ಪ।। ಮುತ್ತಿನ ಮಂಟಪವನೇ ಶೃಂಗರಿಸಿ। ರತ್ನ ಸಿಂಹಾಸನವಿರಿಸಿ। ಚಿತ್ತಜನಯ್ಯನ ಮಡದಿಯಳಾದ। ಮುದ್ದು ಶ್ರೀತುಳಸಿಗೇ।।1।। ಸಖಿಯರೆ ನಾವೆಲ್ಲ ಸಹಿತದಿ ಕೂಡಿ। ಸಂಪಿಗೆ ಹೂವನುತರುವಾ। ಭಾಮೆ ಶ್ರೀತುಳಸಿಗೆ ಪೂಜೆಯನೂ। ಬೇಗದಲಿ ಮಾಡುವೆ ಬಾರೆ।।2।। ಸಾಲು ಸಾಲಾಗಿಹ ವಾದ್ಯ ಪ್ರಸನ್ನ। ಪರಿಪರಿ ಭಕ್ಷಗಳ್ ಸಹಿತಾ। ಭಾಮೆ ಶ್ರೀತುಳಸಿಗೆ ನೇವೇದ್ಯವನು। ಸಡಗರದಲಿ ಮಾಡುವೆನು ಬಾರೆ।।3।।

ಶಕ್ತಿ ಗಣನಾಥನಾ ಭಕ್ತೀಲಿ ಬಲಗೊಂಡು (ತುಳಸೀ ಕಥೆ) **ರಾಗ: ಮೋಹನ**

ಶಕ್ತಿ ಗಣನಾಥನಾ ಭಕ್ತೀಲಿ ಬಲಗೊಂಡು। ನಿತ್ಯ ಶಾರದೆಯ ಪಾದಗಳಿಗೆರಗಿ ಮತ್ತೆ ಗುರುಹಿರಿಯರಾ। ಚರಣವನು ಭಜಿಸಿನಾ। ಪ್ರಾರ್ಥನೆಯ ಮಾಡಿ ಪೇಳುವೆ ಕಥೆಗಳಾ।।1।। ಶಕ್ತಿಸಾಹಸದಿಂದ ಭಕ್ತಿಪೂರ್ವಕದಿಂದ। ನಿತ್ಯವಾಗಿರುವಂಥ ಪುಣ್ಯ ಕಥೆಯೂ। ಭಕ್ತರೆಲ್ಲರೂ ಕೇಳಿ। ಬಹಳ ಸಂತೋಷದಲಿ। ಮುಕ್ತಿಕೊಡುವನು ನಮ್ಮ ಮುರವೈರಿಯೂ।।2।। ಅಜ್ಞಾನದಿಂದ ನಾ ಆಚರಿಸಿ ಹೇಳುವೆನೂ। ಸುಜ್ಞಾನಿಗಳು ಕೇಳಿ ಸುಜನರೆಲ್ಲಾ। ಪದ್ಮನಾಭನ ಪಾದ ಪದ್ಮವನು ಭಜಿಸಿನಾ। ಸುಜ್ಞಾನಿಗಳು ಕೇಳಿ ಪ್ರಜ್ಞೆಯಿಂದಾ।।3।। ದ್ವಾರಕಾಪುರದೊಳಗೆ ನಾರಿ ರುಕ್ಮಿಣಿ ಸತ್ಯ। ಭಾಮೇರುಸಹಿತ ವೋಲಗದಲಿರಲೂ। ಕಾಲವನರಿತು ವೃಂದಾವನ ದೇವಿತಾ। ದಾದೇರ ನಟ್ಟಿದಳು। ಹರಿಯ ಬಳಿಗೇ।।4।। ಬಂದದಾದೇರು ವಂದನೆಯ ಮಾಡಿ। ಮುಂದೆ ಕರಗಳ ಮುಗಿದು ನಿಂದರಾಗಾ। ಇಂದು ಬೃಂದಾವನೇ। ನಿಮ್ಮ ಕರೆತಾರೆಂದೂ। ನಮ್ಮನಟ್ಟಿದಳು ನಿಮ್ಮ ಬಳಿಗೇ।।5।। ದಾದೇರ ನುಡಿಕೇಳಿ। ದಾನವಾಂತಕ ಕೃಷ್ಣ। ದೇವಲೋಕದಲ್ಲಿರುವ ದೇವ ಮುನಿಯೂ। ತಾನು ಮನದಲಿ ನೆನೆದು ಮನದ ಸಂತಾಪವನೂ ತೀರಿಸುವೆನೆನುತ ಮುನಿ ಬಂದನಾಗ।।9।। ನಾರದನ ನುಡಿಕೇಳಿ। ನಾರಾಯಣನು ನಗುತ। ಹೇಳಿದನೆ ತನ್ನ ಮನಸಿನ ಭೋಗವೂ। ಭೂಲೋಕದೊಳಗಿರುವ। ಭೂಸುರಾರೆನ್ನನೂ। ಬೇಗ ಬಾರೆಂದು ಮನದಲ್ಲಿ ನೆನೆದರೂ।।7।। ಮಾಸದೊಳಗುತ್ತಮಾ। ಚಾತ್ರ ಮಾಸದೊಳಗೆ। ಮಾಸನಾಮವು ತಿಳಿದು ಮನುಜರೆಲ್ಲಾ। ಸಾಸಿರ ನಾಮದಲಿ। ಶಾಸೇನು ತಳಿದರೇ। ಲೇಸಾಗಿ ವರಗಳನು ಕೊಡುವೆನೆಂದಾ।।8।। ಹರಿ ಅಂದ ನುಡಿಕೇಳಿ ಹರನು ನಾರದ ನಗುತ। ವಿನಯದಲಿ ಹೋಗಿ ಬಾರೆಂದನಾಗಾ। ಪೊಡವಿ ಪಾಲಕ ನಿಮ್ಮ ಮಡದಿ ರುಕ್ಮಿಣಿಗ್ಹೇಳಿ। ಸಡಗರದಿಂದ ಹೋಗಿ ಬಾರೆಂದನಾಗ।।9।। ಅಂದ ಮಾತನೆ ಕೇಳಿ ಚಂದದಲಿ ಶ್ರೀಕೃಷ್ಣ ಬೇಗದಲಿವಳ ಹೊಕ್ಕು ಬಂದನಾಗ। ನಾರಿ ರುಕ್ಮಿಣಿ ಈಗ। ಎನ್ನ ಕಳುಹಿಸು ಎಂದೂ। ವಾರಣದ ನುಡಿಯಲೋಲಾ ಡುತ್ತಿದ್ದ।।10।। ಅಂದ ಮಾತನು ಕೇಳಿ। ನೊಂದು ರುಕ್ಮಿಣಿದೇವಿ। ಸುಡು ನುಡಿಯ ನಾಡಿದಳು ಹರಿಯನಾಗ। ಪೊಡವಿಪಾಲಕ ನಿಮ್ಮ ಮಡದೇರು ಬಹಳಲ್ಲಿ ತಡೆಯದೇ ಬಿಡುವರೇ ನಿಮ್ಮನಿಲ್ಲಿ।।11।। ಕಟ್ಟಾಣಿ ಕೊರಳೋಳೆ। ಸಿಟ್ಯಾತಕೇ ನಿನಗೇ। ತಟ್ಟನೆ ಎದ್ದು ಬಂದೆನ್ನ ಕಳುಹೂ। ಎಷ್ಟುಸಾವಿರಮಂದಿ। ಸತಿಯರಿದ್ದರು ಎನಗೇ। ಪಟ್ಟದ್ಹೆಂಡತಿ ನಿನ್ನ ಸರಿ ಬರುವರೇ।।12।। ರುಕ್ಮಿಣಿಯ ನುಡಿಕೇಳಿ। ರುಕ್ಮಾಂಗದನು ಬಂದು। ಅಕ್ಕಯ್ಯಾ ನಿಮಗಿನ್ನು ಚಿಕ್ಕಬುದ್ಧಿ। ಮಕ್ಕಳಾಟಿಕೆಯೆಂದ। ಸೊಕ್ಕಿಯಾಡಲಿ ಬೇಡಿ। ಘಕ್ಕನೆ ಎದ್ದು ಬಂದ್ಹರಿಯಕಳುಹೂ।।13।। ಅಣ್ಣನಾ ನುಡಿಯನುಕೇಳಿ। ಕನ್ನೆರುಕ್ಮಿಣಿ ಕೇಳಿ। ಚಿನ್ನದಾರತಿಯ ನಡೆ ತಂದಳಾಗಾ। ಚನ್ನಕೇಶವ ನಿಮ್ಮ ಚರಣವೇ ಗತಿ

ಎಂದೂ। ಚಿನ್ನದಾರುತಿ ಎತ್ತಿ। ಬೆಸಗೊಂಡಳೂ।।14।। ಲಕ್ಷಣದ ನುಡಿಕೇಳಿ। ಪಕ್ಷಿವಾಹನವೇರಿ। ಆ ಕ್ಷಣದಿ ತೆರಳಿ ಬಂದನು ಬೇಗದೀ। ಶಿಕ್ಷೇಲಿ ಭಕ್ತರಿಗೆ ಮೋಕ್ಷವನೆ ಕೊಟ್ಟು। ಉಪೇಕ್ಷೆ ಮಾಡದೆ ಬಂದನಾಗ।।15।। ಕೇರಿಕೇರಿಲುಳ್ಳ। ತೋರಣಂಗಳು ಕಟ್ಟಿ। ಸಾಲು ಸಾಲಾದ ಮಂಟಪವು ರಚಿಸೀ। ತಾಳಮೇಳಗಳು। ಸಂಗೀತವಾದ್ಯಗಳಿಂದಾ। ಭಾಗ್ವತರು ಹರಿಯ ಬಾಗಿಲಿಗೆ ಬಂದರೂ।।16।। ಗರುಡನಾ ಹೆಗಲಿಂದ। ಇಳಿದನೇ ಶ್ರೀಕೃಷ್ಣ। ಪೊಡವಿಯಾ ಮೇಲೆ ತಾ ನಿಂತಾನಾಗ। ಸಡಗರದಿ ನಾರೇರು। ನಡೆಮುಡಿಯನ್ಹಾಸೋರೂ। ಎನ್ನೊಡೆಯ ನೀ ಸಲಹೆಂದು ಪೊಡವಂಟರೂ।।17।। ಬಿತ್ತರದಿ ನಾರೇರು। ಛತ್ತರಿಯನ್ಹಿಡಿವೋರು। ಎತ್ತಿ ಚಾಮರವ ಬೀಸಿದಾರಾಗಲೇ। ಸುತ್ತಲಿದ್ದವರೆಲ್ಲ ಅತ್ಯಂತ ಹರುಷದಲೀ। ಹಸ್ತಲಾಘವ ಕೊಟ್ಟು ನಡೆತಂದರೂ।।18।। ಅಂದಣವನೂ ಇಳಿದು। ಬಂದ ಶ್ರೀಕೃಷ್ಣಗೆ। ವಂದನೆಯ ಮಾಡಿದರು ಹರುಷದಿಂದಾ। ಮಂದಿರದ ಒಳಗಿರುವೊ। ಬೃಂದಾವನೆಯನೂ ನೋಡೀ। ಸಂದೇಹವಿಲ್ಲದೇ ನಿಂದರಾಗ।।19।। ಆಕಳಾ ಹಾಲಿಗೇ। ಬೇಕಾದ ಸಕ್ಕರೆ। ತೂಕವನೆ ಮಾಡಿ। ಅದರೊಳಗ್ಹಾಕಿಸೀ। ಲೋಕನಾಯಕನಿಗೇ। ಬೇಕಾದ ವಸ್ತುಗಳೂ। ಅನೇಕವಾಗಲ್ಲಿ। ತಂದಿರಿಸಿದಾರೂ।।20।। ಅಚ್ಚಕರ್ಪೂರದಾ। ಅಡಿಕೆ, ಬಿಳಿಎಲೆ ಸುಣ್ಣ। ಅರ್ಪಿತವ ಮಾಡಿದರು ಹರಿಗೆ ಬೇಗಾ। ಸರ್ಪಶಯನ ಕೂಡೆ ಒಪ್ಪಿರುವೋ ತುಳಸಿಗೇ। ಉಪ್ಪು ಬೇವುಗಳ ನೀವಾಳಿಸಿದಾರೂ।।21।। ತುಳಸಿಯಾ ಕಥೆಯನೂ ಹರುಷದಲಿ ಹೇಳಿದಾ। ಅರಸೇರಿಗ್ಮುತ್ತೈದೆ ತನ ಕೊಡುವನು। ಸರಸಿಜಾಕ್ಷನ ಕೂಡೆಬೆರಸಿ ಬಂದವರಿಗೇ। ಅರಸಿನಾ ಕುಂಕುಮಾ ಕೊಡುತಿದ್ದರೂ।।22।। ಬಂದನಾರೇರಿಗೆ ಬಾಗಿನಂಗಳ ಕೊಟ್ಟೂ ಬೇಗದಲಿ ಅವರವರ ಮನೆಗೆ ಕಳುಹೀ। ಮಂದರೋದ್ಧಾರನಾ। ಚರಣಕಮಲದವಳಗೇ। ಒಂದಾವಾಗಿರುವೆವು ನಾವೆಂದರಾಗಾ।।23।। ಸ್ವಪ್ನದಲಿ ಹೇಳಿದಾ। ಅಪ್ಪಣೆಯ ತಿಳಿದು ನಾ। ವಪ್ಪದಲಿ ಹೇಳಿದನು ಪುಣ್ಯ ಕಥೆಯಾ। ತಪ್ಪು ನೆಪ್ಪುಗಳೆಲ್ಲ।ತಿದ್ದು ಚಂಪಕ ಪುರದಾ। ಅಪ್ಪ ನೀ ಸಲಹೋ ರಾಮಪ್ಪ ಎನ್ನಾ ಜಯಮಂಗಳಂ ನಿತ್ಯ ಶುಭಮಂಗಳಂ।।

ಶ್ರೀತುಳಸಿ ಶ್ರೀದೇವಿ ಅಮೃತ ಕಳಶಗಳಿಂದ (ತುಳಸೀ ಕಥೆ)

ಶ್ರೀತುಳಸಿ ಶ್ರೀದೇವಿ ಅಮೃತ ಕಳಶಗಳಿಂದ ಅಮೃತ ಭಾಷ್ಪಗಳಿಂದ ಬಂದು ಜನಿಸಿ। ಪರಮ ಪಾವನ ಮಾಡಬೇಕೆಂದು ಜಗದೊಳಗೆ। ಪರಬ್ರಹ್ಮಗೊಪ್ಪುವೋ ಶ್ರೀಕೃಷ್ಣನು।।1।। ಎಲ್ಲಿ ವೃಂದಾವನ ಇದ್ದಂತಠಾವಿಗೆ। ಅಲ್ಲಿ ಶ್ರೀಕೃಷ್ಣನು ಬಂದು ನೆಲೆಸಿ। ತನ್ನ ರಾಣಿಯರಿಗೆ ಪೂಜೆಯನೆ ಮಾಡೆಂದು। ಸನ್ನದ್ಧನಾದನೇ ಶ್ರೀಕೃಷ್ಣನು।।2।। ಹಸಿರುಪಟ್ಟಾವಳಿ ನೆರಿ ಹಿಡಿದು ಉಟ್ಟಳೇ ಹೊಸ ಮುತ್ತಿನಾಭರಣ ತೊಡುಗೆ ತೊಟ್ಟು। ಪಚ್ಚೆಯಾ ಕುಪ್ಪುಸವ ತೊಟ್ಟಳೇ ಶ್ರೀತುಳಸಿ। ಅಚ್ಚುತನ ನೋಡುವೋ ಭರದಿಂದಲಿ।।3।। ಅಗಲವಾಯಿತು ಕಟ್ಟೆ ಮುಗಿಲು ಮುಟ್ಟಿತುತೆನೆ। ನಡುವೆ ಹೊನ್ನ ಕಳಶ ತೋರಣಗಳು ಪರಿಪರಿಯಿಂದಲಿ ವಂದಿಪಾ ವೃಂದಾವನದ ನಡುವೆ। ಶ್ರೀಕೃಷ್ಣ ಸ್ವಾಮಿಯ ಕಂಡರು।।4।। ಮುನ್ನೂರ ಮೂವತ್ಕೋಟಿ ದೇವತೆಗಳೆಲ್ಲರೂ। ಸ್ವಾಮಿ ಎದ್ದನು ಎಂದು ಬೇಗಬರಲು। ಮುಂದೆಗರುಡನು ಏರಿ ಹಿಂದೆ ಹನುಮನ ಸಹಿತ। ಬಂದನೇ ತುಳಸಿಯಾ ಮನೆಗೆ ಬೇಗ।।5।। ದಾನವಾ ಮಾಡುವಲ್ಲಿ ಧಾರೆಯಾನೆರೆವಲ್ಲಿ। ಅಲ್ಲಿ ಶ್ರೀ ತುಳಸಿಯಾ ದಳವಿಲ್ಲದೇ। ಮಾಡಿದಾ ದಾನವದು ನಿಶ್ಚಲವು ಎಂದು। ದೇವತೆಗಳೆಲ್ಲರೂ ಸಾರಿದಾರು।।6।। ಮಂಗಳಂ ಮಂಗಳಂ ಕಮಲ ಮುಖಿತಾಯಿಗೆ। ಮಂಗಳಂ ಮಂಗಳಂ ಕಮಲನಾಭನ ರಾಣಿಗೆ। ಮಂಗಳಂ ಮಂಗಳಂ ನಿತ್ಯ ಹೃದಯದೊಳಿರ್ಪ। ಮಾಂಗಲ್ಯ ಪದವಿಯಕೊಡುವ ಮಹಾತುಳಸಿಗೆ ।।7।। ಜಯಮಂಗಳಂ ನಿತ್ಯ ಶುಭಮಂಗಳಂ।।

ಶ್ರೀ ತುಳಸಿಯಾ ಸೇವಿಸಿ (ತುಳಸೀ ಕಥೆ) ರಾಗ: ಭೂಪಾಳಿ

ಶ್ರೀ ತುಳಸಿಯಾ ಸೇವಿಸಿ।।ಪ।। ಶ್ರೀ ತುಳಸಿಯಾ ಸೇವೆ ಪ್ರೀತಿಯಿಂದಲಿ ಮಾಡೆ। ಗಾತರದ ಮಲವಳಿದು ಮಾತೆಯೆಂಬ ನಿತರೊಳು। ಪಾತಕ ಪರಿಹರಿಸಿ ಪುನೀತರನು ಮಾಡುವಳು ಯಾತಕನುಮಾನಯ್ಯ।।ಅ.ಪ।। ಸುಧೆಗಡಲ ಮಥಿಸುವ ಸಮಯದಲಿ ವೈದ್ಯನಾಗಿ। ಪದುಮನಾಭನು ತಾನು ಉದುಭವಿಸಿ ಬರಲಿಂದ। ಉದುರಿದುವು ಕಣ್ಣಿಂದ ಉದಕವುತ್ಸಹ ದಿಂದಲದೆ ತುಳಸಿನಾಮವಾಗೆ। ತ್ರಿದಶರೊಂದಿಸುತ ಮೋದದಿಂ ಕೊಂಡಾಡಿದರು। ಒದಗಿ ಸುಜನರು ತಮ್ಮ ಸದನದಲಿ ನಿತ್ಯ ಸತ್ಪದವಿಗೆ। ಸಿದ್ಧವೆಂದು ಮುದದಿಂದ ತಿಳಿದು ವೃಂದಾವನ ರಚಿಸಿದರ್ರೈಯ।।1।। ಮೂಲದಲಿ

ಸರ್ವತೀರ್ಥಗಳುಂಟು ತನ್ಮಧ್ಯೆ। ಕಾಲಮೀರದೆ ಸರ್ವನದನದಿಗಳಮರಗಣ। ಮೇಲೆ ದಳ ಒಂದರಲಿ ಒಂದೊಂದು ಮೂರುತಿಯು ವಾಲಯವಾಗಿಪ್ಪುದು। ಮೂರ್ಲೋಕಗಳ ಧರ್ಮ ವ್ರತಕೆ ಮಿಗಿಲೆನಿಸುವುದು। ನೀಲಮೇಘ ಶ್ಯಾಮಗರ್ಪಿಸಿದ ತುಳಸಿ ನಿರ್ಮಾಲ್ಯವನು। ಸತತ ಕರ್ಣದಲಿ ಧರಿಸಿದ ಮನುಜ ಕಾಲನಾಳಿಗೆ ಶೂಲನೋ।।2।। ಉದಯದೊಳಗೆದ್ದು ನೀರೆರದು ಮಜ್ಜನಗೈದು। ತುದಿ ಬೆರಳಿನಿಂದ ಮೃತ್ತಿಕೆಯ ಫಣೆಯೊಳಗಿಟ್ಟು ಮುದದಿಂದಲೊಂದು ಪ್ರದಕ್ಷಿಣೆ ನಮಸ್ಕಾರ ತದನಂತರದಲ್ಲಿ ಭಜನೆ ವದನದೊಳು ಗೈಯೆ ಧರೆಯೊಳಗಿದ್ದ ಸರ್ವನದ ನದಿಗಳಿಗೆ ನೂರ್ಮಡಿಯಾತ್ರೆ ಮಾಡಿದ ಫಲ ಒದಗುವುದು ಹಿಂದಣಾನಂತ ಜನ್ಮಗಳಘವ ತುದಿತೊದಲು ದಹಿಪುದಯ್ಯ।।3।।ಆವವನ ಮನೆಯಲ್ಲಿ ತುಳಸಿ ಸಾಲಿಗ್ರಾಮ। ಆವವನ ಮನೆಯಲ್ಲಿ ಹರಿದಾಸರಾಕೂಟ। ಆವವನ ಭುಜದಲ್ಲಿ ತಪ್ತ ಮುದ್ರಾಂಕಿತವು ಪಾವಮಾನಿಯ ಮತದೊಳು। ಆವವನು ಕಾಲತ್ರಯವ ಕಳೆವನಾವಲ್ಲಿ। ಶ್ರೀವಾಸುದೇವ ಮುನಿದೇವಾದಿ ಗಣಸಹಿತ। ಕಾವುತ್ತಲಿಪ್ಪ ಬಲಿಗೊಲಿದಂತೆ ತೊಲಗದಲೆ ಭಾವಿಸಿರಿ ಭಾವಜ್ಞರು।।4।। ಕಂಡರೆ ದುರಿತಕ್ಕೆ ಕೆಂಡವನು ಬೀರುವುದು। ಕೊಂಡಾಡಿದರೆ ಪುಣ್ಯವಪರಿಮಿತಿವುಂಟು ಮೈದಿಂಡು। ಗೆಡಹಿದರೆ ಪುನರಪಿ ಜನನವಿಲ್ಲ ಸಲೆ ದಂಡವಿಟ್ಟವ ಮುಕ್ತನೊ। ಚಂಡಾಲ ಕೇರಿಯೊಳು ಇರಲು ಹೀನಯವಲ್ಲ ಪಾಂಡುರಂಗ ಕ್ಷೇತ್ರ ಸರಿಮಿಗಿಲು ಎನಿಸುವುದು। ತಂಡತಂಡದ ಕುಲಕೆ ಅವರವರ ಯೋಗ್ಯಫಲ ಕಂಡವರಿಗುಂಟೆ ಅಯ್ಯ।।5।। ಚಿತ್ತಶುದ್ಧನು ಆಗಿ ಮುಂಜಾನೆಯೊಳು ತುಳಸಿ। ಸ್ತೋತ್ರವನೆ ಮಾಡುತ್ತ ದಿವ್ಯವಾಗಿಹ ತ್ರಿದಳ ಪ್ರತ್ಯೇಕ। ಪಾತ್ರೆಯಲಿ ತೆಗೆದು ಶೋಧಿಸಿ ತುಂಬಿ ವಿತ್ತಾದಿಯಲಿ ತಾರದೆ। ಮತ್ತೆ ವಸ್ತ್ರದಿ ಹಸ್ತ ಶಿಲೆಯರ್ಕ ಏರಂಡ ಪತ್ರದಲಿ ತಾರದಲೆ ಭೂಮಿಯೊಳಗಿಡದೆ ಪೂರ್ವೋತ್ತರಭಿಮುಖನಾಗಿ ಭಕ್ತಿಯಿಂ ತರಬೇಕು ಹೊತ್ತು ಮೀರಿಸಲಾಗದೊ।।6।। ಕವಿಮಂಗಳವಾರ ವೈಧೃತಿ ವ್ಯತೀಪಾಂತ। ರವಿಶಶಿಯ ಸಂಗಮ ಪರ್ವಣಿ ಪುಣ್ಯಕಾಲ ದಿವಸ। ದ್ವಾದಶಿ ಶ್ರೇಷ್ಠ ಉಪರಾಗ ಪಿತೃಶ್ರಾದ್ಧ ಇವುಗಳಲಿ ತೆಗೆಯದಿರಿ। ನವವಸನ ಪೊದ್ದು ಊಟವಮಾಡಿ ತಾಂಬೂಲ ಸವಿಯುತ್ತ ಮುಟ್ಟದಿರಿ ಯುವತಿ ಶೂದ್ರರಿಂ ತರಿಸುವುದು। ಚಿತವಲ್ಲೆಂದು ತಿಳಿದು ಕೊಂಡಾಡುತಿರಿ ದಿವಸಗಳೊಳಯ್ಯ।।7।। ದಳವಿದ್ದರೇ ಒಳಿತು ಇಲ್ಲದಿದ್ದರೆ ಕಾಷ್ಠಾ। ಎಲೆ ಮೃತ್ತಿಕೆಗಳಿಂದ ಪೂಜೆ ಮಾಡಲಿಬಹುದು। ತುಳಸಿ ನಿರ್ಮಾಲ್ಯವಾದರೂ ತ್ರಿವಾರದಲಿ ತೊಳೆತೊಳೆದು ಏರಿಸಲಿಬಹುದು ತುಳಸಿ ಒಣಗಿದ್ದರೂ ಲೇಶದೋಷಗಳಿಲ್ಲ। ತುಳಸಿ ವಿರಹಿತವಾದ ಪೂಜೆಯದು ಸಲ್ಲದು ತುಳಸಿ।ತುಳಸಿ ಎಂದು ಸ್ಮರಣೆಯಾದರು ಮಾಡಿ ಜಲಜಾಕ್ಷನರ್ಚಿಸಿರೈಯ್ಯ।।8।। ತುಳಸಿ ಇಲ್ಲದ ಸದನ ಹೊಲೆಮಾದಿಗರ ಸದನ। ತುಳಸಿ ಇಲ್ಲದ ಬೀದಿ ನರಕಕೆಳೆಸುವ ಹಾದಿ ತುಳಸಿ ಇಲ್ಲದ ತೀರ್ಥವೆಂದಿಗಿದ್ದರೂ ವ್ಯರ್ಥ। ತುಳಸಿ ಬಲು ಪ್ರಾಧಾನ್ಯವೊ। ತುಳಸಿ ಮಿಶ್ರಿತವಾದ ನೈವೇದ್ಯ ಗತಿಸಾಧ್ಯ। ತುಳಸಿ ಧರಿಸಿದ ದೇಹ ಪರಮಸಾರ್ಥಕವಯ್ಯ ತುಳಸಿ ದಳ ಹರಿಗೆ ಅರ್ಪಿಸಿದವನ ಪುಣ್ಯಕ್ಕೆ ನೆಲೆಯ ನಾ ಕಾಣೆನಯ್ಯ।।9।। ಶಿವನ ಸತಿ ಪ್ರಹ್ಲಾದ ನಾರದ ವಿಭೀಷಣನು ಧ್ರುವ ಅಂಬರೀಷ ಶಶಿಬಿಂದು ರುಕ್ಮಾಂಗದನು ಇವರೆ ಮೊದಲಾದವರು ಭಕ್ತಿಪೂರ್ವಕದಲಿ ವಿವರವನು ತಿಳಿದರ್ಚಿಸಿ ತವಕದಿಂ ತಂತಮ್ಮ ಘನಪದವನ್ನೈದಿದರು। ಭುವನದೊಳಗುಳ್ಳ ನಿರ್ಮಲ ಜನರು ಭಜಿಸಿದರು। ಜವಭಟರನೋಡಿಸೀ ಜಡದೇಹವನು ನೀಗಿ ಭವದೂರರಾದರೈಯ್ಯ।।10।। ಉದಯ ಕಾಲದೊಳೆದ್ದು ಆವನಾದರು ತನ್ನ। ಹೃದಯನಿರ್ಮಲನಾಗಿ ಭಕ್ತಿ ಪೂರ್ವಕದಿಂದ। ಸದಮಲಾ ತುಳಸಿಯನು ಸ್ತೋತ್ರಮಾಡಿದ ಕ್ಷಣಕೆ ಮದಗರ್ವ ಪರಿಹಾರವೋ। ಇದೆ ತುಳಸಿ ಸೇವಿಸಲು ಪೂರ್ವದಲಿ ಕಾವೇರಿ। ನದಿಯ ತೀರದಲೊಬ್ಬ ಭೂಸುರ ಪದಕೆ ಪೋದ। ಪದಪದೆಗೆ ಸಿರಿ ವಿಜಯ ವಿಠ್ಠಲಗೆ ಪ್ರಿಯಳಾದ ಮದನ ತೇಜಳ ಭಜಿಸಿರೈಯ್ಯ।।11।।

ಭಜಿಸಿ ಗಣಪತಿಗೆ ಸರಸ್ವತಿಗೆ (ಜಲಂಧರ ವಧೆ) ರಾಗ: ಯಮನ್

ಭಜಿಸಿ ಗಣಪತಿಗೆ। ಸರಸ್ವತಿಗೆ। ವಂದನೆಮಾಡಿ। ಸ್ಮರಿಸುವೆನು ಮಂದಮಾರುತ ಗುರುಗಳಾ। ವಿರಚಿಸುವೆ ಶ್ರೀತುಳಸಿ ದೇವಿಯರ ಕಥೆಗಳನೂ। ಅರಿತಷ್ಟು ತಂತು ಮಾತ್ರಗಳಿಂದಲೇ। ಜಯ ಮಂಗಳಾ ನಿತ್ಯ ಶುಭಮಂಗಳಾ।।1।। ಪೂರ್ವದಲಿ ವೃಂದೇ। ಜಲಂಧರನ ವಧುವಾಗಿರಲು। ಆ ಪತಿವ್ರತೆಯಿಂದ ದಿಗ್ವಿಜಯದೀ। ದೇವಾದಿ ದೇವರ್ಕಳನು

ಸೆರೆ ಆಳುತ್ತಾ ಕಾಲಯಮಗಂಜ ದೀಹನು ಶೌರ್‍ಯದೀ॥2॥ ದೇವತೆಗಳೆಲ್ಲಾ ಸ್ವಾಮಿಗೆ ಬಂದು ಮೊರೆಯಿಡಲು। ಆಗ ಕಮಲಜ ಹರಿಹರ ಚಿಂತಿಸೇ। ಯಾವ ಪರಿಯಿಂದಲೋ। ಜಲಂಧರನ ವಧೆ ಮಾಡೀ। ಭೂಭಾರ ಇಳುಹಬೇಕೆನುತ್ತೊರಟರೂ॥3॥ ಸಕಲ ಸುರರೆಲ್ಲಾ। ಸಮರದಲಿ ಯುದ್ಧವ ಮಾಡೀ। ಪತಿವ್ರತಾ ಧರ್ಮದಿಂದಾ ಪುರುಷಗೇ। ಅತಿಶೌರ್‍ಯ ಹೆಚ್ಚಿ ಅಜಹರಿಹರರ ಸೋಲಿಸಲೂ। ಯುಕ್ತಿ ನಿಮ್ಮದು ಸ್ವಾಮಿ ಎನುತಿದ್ದರೂ॥4॥ ಬರೆದು ತೋರಿದನೆ ಸುದರ್ಶನನ ಕಪಟದಿ ಸ್ವಾಮಿ। ಬರೆದು ಆ ಸತಿ ತನ್ನ ಪರಿಯಂದಿರೇ। ಹರಿಯ ಕರದೊಳಗೆ ಜಲಂಧರನ ಶಿರಬೀಳೇ। ಎಲೆ ವೃಂಧೆ ಇದೇನೆಂದು ತೋರಿಸಿದನೂ॥5॥ ಶಿವಶಿವಾಎನ್ನ ಪತಿವ್ರತಾ ಧರ್ಮವನಳಿದ। ನಿಪುಣ ನ್ಯಾರಿವನೆಂದು ವೃಂದೆಯು ಚಿಂತಿಸೀ। ಕಪಟನಾಟಕ ಸ್ವಾಮಿ। ನಿಮ್ಮ ಮಾಯಕವೆಂದೂ। ಖರೆ ಇಂದ ವೃಂದೆ ಶಿಲೆಯಾಗೆಂದಳೂ॥6॥ ಸತಿಯಾಗು ಎಂದ ಸರ್ವೋತ್ತಮನು ಹೇಳಿದಾಗತಿ ಯಾವುದೆಂದೆ ವೃಂದೆಯು ಚಿಂತಿಸೀ। ಅರ್ಪಿತವಾಗಿ ಆದ್ಯಾಂತ ದೇವರಿಗೆಲ್ಲಾ। ವಕ್ಷಸ್ಥಳವಳ ವಾಸವಾಗಿರು ಎಂದನೂ॥7॥ ನಿನ್ನ ಭಜಿಸೋರು। ನೀರೆರೆದು ಕೈಮುಗಿವೋರು। ನಿನ್ನ ಸತ್ಕರಿಸಿ ಪೂಜಿಪ್ಪೋ ಭಕ್ತರೂ।ಧನ್ಯರಾಗೇ ಪರಮ ಪದವೀನೆ ಪಡೆವೋರೂ ಪಾವನ್ನೆ ಪರವಸ್ತು ಶ್ರೀ ತುಳಸೀಗೇ॥8॥ ಭಕ್ತಚಿಂತಾಮಣಿಗೆ। ಭಾಸ್ಕರ ಪ್ರಕಾಶಳಿಗೆ। ಮುಕ್ತಿದಾಯಕಿಗೆ। ಮುನಿಜನ ವಂದ್ಯೆಗೇ। ವತ್ತಲಿಸಿ ಎನ್ನ ಪಾಪಗಳ ಪರಿಹರಿಪೋಳಿಗೇ ವಿಷ್ಣುವಲ್ಲಭೆಗೇ। ಸಾಕ್ಷಾತ್ ತುಳಸಿಗೇ ಜಯ ಮಂಗಳಾ। ಶುಭಮಂಗಳಾ॥9॥

ಹೂವ ಕೊಡಮ್ಮ **ರಾಗ: ಶ್ರೀ**

ಹೂವ ಕೊಡಮ್ಮ ಬೇಡಿಕೊಂಬೆನು ನಿನ್ನ ಕನ್ಯೆ ತುಳಸಮ್ಮ॥ಪ॥ ನಿನ್ನ ನಂಬಿದೆನಮ್ಮ ನಿರುತ ಬೇಡುವೆನು। ನೀ ಮನ್ನಿಸಿ ಸಲಹಮ್ಮ ಕನ್ಯೆ ತುಳಸಮ್ಮ॥1॥ ಭಕ್ತಿ ಭಾವಗಳಿಂದ ನಾ ಭಜಿಸುವೆನಮ್ಮ। ಬಲುಶಕ್ತಿ ಉಳ್ಳವಳೆ ನೀ ಕನ್ಯೆ ತುಳಸಮ್ಮ॥2॥

ಬೃಂದಾವನೀ ಜನನೀ ವಂದಿಸುವೆ (ತತ್ತ್ವಸುವ್ವಾಲಿ) **ರಾಗ: ಕುರಂಜಿ**

ಬೃಂದಾವನೀ ಜನನೀ ವಂದಿಸುವೆ ಸತತ ಜಲಂಧರನ ರಾಣಿ ಕಲ್ಯಾಣಿ। ಕಲ್ಯಾಣಿ ಶ್ರೀ ತುಳಸಿ ನಿಜಮಂದಿರೆ ಎನಗೆ ದಯವಾಗೆ॥1॥ ಜಲಜಾಕ್ಷನಮಲ ಕಣ್‌ಜಲ ಬಿಂದು ಪೀಯೂಷ। ಕಲಶದಿ ಬೀಳೆ ಜನಿಸೀದಿ। ಜನಿಸೀದಿ ಹರಿಯಿಂದ ಶ್ರೀ ತುಳಸಿ ನೀನೆಂದು ಕರೆಸಿದಿ॥2॥ ಶ್ರೀ ತರುಣಿ ವಲ್ಲಭನ ಪ್ರೀತಿ ವಿಷಯಳೆ ನಿನ್ನ। ನಾ ಸ್ತುತಿಸಿ ಕೈಯ್ಯ ಮುಗಿವೆನು। ಮುಗಿವೆನು ಎನ್ನಯ ಮಹಾ ಪಾತಕವ ಕಳೆದು ಪೊರೆಯಮ್ಮ॥3॥ ತುಳಸಿ ನಿನ್ನಡಿಗೆ ನಾ ತಲೆಬಾಗಿ ಬಿನ್ನೈಪೆ। ಕಲುಷ ಕರ್ಮಗಳ ಎಣಿಸದೆ। ಎಣಿಸದೆ ಸಂಸಾರ ಜಲದಿಂದೆಮ್ಮ ಕಡೆ-ಹಾಯ್ಸು॥4॥ ನಿಂದಿಸಿದವರೆಲ್ಲ ನಿಂದ್ಯರಾಗುವರು। ಅಭಿವಂದಿಸಿದ ಜನರು ಸುರರಿಂದ। ಸುರರಿಂದ ನರರಿಂದ ವಂದ್ಯರಾಗುವರು ಜಗದೊಳು॥6॥ ನೋಡಿದವ ದುರಿತ ಈಡ್ಯಾಡಿದವ। ನಿನ್ನ ಕೊಂಡಾಡಿದವ ನಿತ್ಯ ಹರಿಪಾದ। ಹರಿಪಾದ ಕಮಲಗಳ ಕೂಡಿದವ। ಸತ್ಯ ಎಂದೆಂದು॥5॥ ಕಲುಷವರ್ಜಿತೆ ನಿನ್ನ ದಳಗಳಿಂದ। ಲಕ್ಷ್ಮೀ ನಿಲಯನಂಘ್ರಿಗಳ ಪೂಜಿಪ। ಪೂಜಿಪರಿಗೆ ಪರಮ ಮಂಗಳದ ಪದವಿತ್ತು। ಸಲಹುವಿ॥6॥ ಶ್ರೀ ತುಳಸಿ ದೇವಿ ಮನ್ಮಾತೆ ಲಾಲಿಸು। ಜಗನ್ನಾಥ ವಿಠಲನ ಚರಣಾಬ್ಜ। ಚರಣಾಬ್ಜ ಎನ್ನ ಹೃತ್ಪದ್ಮದಲಿ ನೀ ತೋರೆ। ಕೃಪೆಯಿಂದ॥8॥

ತುಳಸಿ ನಿನ್ನ ಬಳಸಿ ನಮಿಪೆ **ರಾಗ: ಆರಭಿ**

ತುಳಸಿ ನಿನ್ನ ಬಳಸಿ ನಮಿಪೆ। ನೀಡು ವರಗಳನು ತಾಯೇ ನೀಡುವರಗಳನು॥ಪ॥ ಪಚ್ಚೆದಳದಿ ಹೊಳೆಯುತಿರುವ। ಅಚ್ಚ ಶ್ರೀ ತುಳಸೀ ತಾಯೇ ಅಚ್ಚ ಶ್ರೀತುಳಸಿ॥1॥ ಹರಿಯ ರಾಣಿ ಉರಗವೇಣಿ। ಪರಮ ಮಂಗಳೆಯೇ ಜಗನ್ಮಾತೆ। ಪರಮ ಮಂಗಳೆಯೇ॥2॥ ಕರುಣದಿಂದಾ ಪಾಲಿಸೆಮ್ಮನು। ಪರಮ ಸುಕೃತವನು। ನೀಡು ತಾಯೆ ಪರಮ ಸುಕೃತವನು॥3॥

ಬೃಂದಾವನ ನಂದನಾ **ರಾಗ: ಗೌಡಮಲ್ಹಾರ್**

ಬೃಂದಾವನ ನಂದನಾ। ಜಲಧಿಯೋಳ್ ತುಳಸಿ।।ಪ।। ನೀರನೆರೆಯುತಾ। ಕರವ ಮುಗಿಯುತಾ। ಬೇಡಿದಂಥಾ ವರವಾ। ನೀಡುವಂಥಾ ತುಳಸಿ।।1।। ಪುಷ್ಪ ಬೇಡುವೇ ಭಕ್ತಿಯಿಂದಲೀ..। ಮುಕ್ತಿಯನ್ನು ನೀನೂ ನೀಡುವಂಥಾ ತುಳಸಿ।।2।। ನಾರಿ ಮಂಗಳಾಲೋಕ। ಮೋಹ ವಿಖ್ಯಾತ। ವರ ಶ್ರೀನಿವಾಸಾ.। ಪಟ್ಟದಾ ರಾಣಿಯೆ।।3।।

ಪಾಲಿಸಮ್ಮ ಹೂವ ತುಳಸಿ

ಪಾಲಿಸಮ್ಮ ಹೂವ ತುಳಸಿ ತಡವು ಮಾಡದೆ। ನಿಮ್ಮ ಓರೆ ತುರುಬಿನಲ್ಲಿ ಇರುವ। ಪಾರಿಜಾತವ ।। ಪ ।। ಒಂದೊಂದು ದಳದಲ್ಲಿ ಒಂದು ಮೂರುತೀ। ಸಂಧಿಸಿ ಇಪ್ಪನು ಹರಿಯು ಕಾಣಮ್ಮ। ಒಂದು ಸುತ್ತಿಗೆ ಮುಕ್ತಿ ಫಲವ ಕೊಡುವಳು।।1।। ಐದೈದು ದಳದಲ್ಲಿ ಐದು ಮೂರುತಿ। ತಾನೈದು ಒಪ್ಪಿಯಿರುವನು ಹರಿಯು ಕಾಣಮ್ಮ। ಐದು ಸುತ್ತಿಗೆ ಮುತ್ತೈದೆತನವ ಕೊಡುವಳು।।2।। ಹತ್ತತ್ತು ದಳದಲ್ಲಿ ಹತ್ತು ಮೂರುತಿ। ಹತ್ತಿರದಲ್ಲಿರುವನು ಹರಿಯು ಕಾಣಮ್ಮ। ಹತ್ತು ಸುತ್ತಿಗೆ ಪುತ್ರಭಾಗ್ಯ ಕೊಡುವಳು।।3।।

ಪೊಂಗೊಳಲೂದುವ ರಂಗನರ್ಧಾಂಗಿಯೇ

ಪೊಂಗೊಳಲೂದುವ ರಂಗನರ್ಧಾಂಗಿಯೇ। ಮಂಗಳ ತುಳಸೀ ಕಾಪಾಡೆ।।ಪ।। ಅಂಗಜಪಿತ ಧನ್ವಂತ್ರಿ ದೇವನ। ಕಂಗಳ ಭಾಷ್ಪದಿಂ ಉದಿಸಿಹಳೆ ।।ಅ.ಪ.।। ಅರಿಸಿನ ಕುಂಕುಮ ಪರಿಮಳ ಗಂಧದ। ಅರಳಿದ ಮಲ್ಲಿಗೆ ಚಂಪಕವ। ಹರುಷದಿ ಅರ್ಪಿಸಿ ಧೂಪ ನೈವೇದ್ಯವ। ಸರಸದಾರುತಿಗೈವೆ ದಯಮಾಡೆ ।।1।। ಉತ್ಥಾನದ್ವಾದಶಿ ಕೃಷ್ಣನ್ನ ಕೂಡಿಸಿ। ಮಿತ್ರೆ ನಿನ್ನೊಡನೆ ವಿವಾಹವನು। ಭಕ್ತಿಲಿ ಮಾಡುತ ವರಗಳ ಬೇಡುವೆ। ಮುತ್ತೈದೆ ತನವನು ನೀಡಮ್ಮ ।।2।। ಇಂದಿರೆ ದೇವಿಯೆ ಅಂದದ ವೇಷ। ಇಂದುಮುಖಿಯೆ ನಿನ್ನಲ್ಲಿ ಇಹುದೆ। ಮಂದರಧರ ನಾಗೇಶ ಶಯನನ। ಇಂದು ನೀ ಇಲ್ಲಿಗೆ ಕರೆತಾರೆ ।।3।।

ವರವ ಬೇಡುವೆ ತುಳಸಿತಾಯೆ **ರಾಗ: ಜುಂಜೂಟಿ**

ವರವ ಬೇಡುವೆ ತುಳಸಿತಾಯೆ ಪರಮಮಂಗಳೆ। ಹರಿಯನೊಲಿಸಿ ಧರಣಿಯಲಿ ತರುವಾಗಿರುವಳೆ ।।ಪ।। ಬೃಂದಾವನವ ಬಳಸಿ ನಮಿಸಿ ಮುಂದೆ ನಿಂದಿಹೆನೆ। ಸುಂದರಿ ಸೌಗಂಧಸುಮ ಮಂದಾರ ಬೇಡುವೆನೆ ।।1।। ಅರಳು ಮಲ್ಲಿಗೇ ಸುರಗಿ ಸಂಪಿಗೆ ಮರುಗ ಕೇದಿಗೆ। ಹರಸಿ ನೀಮುತ್ತೈದೆತನವ ವರವ ನೀಡೆನಗೆ ।।2।। ಪತಿಸುತ ಸಂಸಾರ ಭಾಗ್ಯಹಿತದಿ ರಕ್ಷಿಸೆ। ಶ್ರುತಿಪತಿ ನಾಗೇಶಶಯನನ ಭಕುತಿ ಪಾಲಿಸೆ।।3।।

ಯಾಕೆ ದಯ ಬಾರದೇ **ರಾಗ: ಭೀಮ್‌ಪಲಾಸ್**

ಯಾಕೆ ದಯ ಬಾರದೇ ಲೋಕಮಾತೆಯೇ ನಿನಗೆ।।ಪ।। ಅಡಿಗಳಿಗೆರಗುವೆ ಒಡೆಯಳೇ ಬೇಡುವೆ। ದೃಢಕರಾ ಭಕುತಿಯಾ ನೀಡು ದಯವನೂ।।1।। ನೀನಿಲ್ಲದಾವನಾ ಅಘೋರ ಕಾನನಾ। ನೀನಿರುವೊವನಾ ತುಳಸೀ ವೃಂದಾವನಾ।।2।। ಸೃಷ್ಟಿಗಧಿಕವಾದಾ ಶ್ರೀಕೃಷ್ಣನಾ ರಾಣಿಯೆ। ಅಷ್ಟೈಶ್ವರ್ಯವೂ ಮುತ್ತೈದೆತನವೂ।।3।।

ಕ್ಷೀರ ಸಮುದ್ರದಲ್ಲಿ ಜನಿಸಿ **ರಾಗ: ಕಾಂಬೋಧಿ**

ಕ್ಷೀರ ಸಮುದ್ರದಲ್ಲಿ ಜನಿಸಿ ತಾಯೆ। ಶ್ರೀನಿವಾಸನ ಪಾದಗಳ ಸ್ಮರಿಸಿ। ವರವ ಕೊಡುವ ಶಕ್ತಿ ದಯವೆರಸಿ। ಭೂಲೋಕದೊಳಗೆ ಸಂಚರಿಸಿ।।ಪ।। ನೋಡಮ್ಮ ತುಳಸಿ ಮಾತೆ। ಮಾಡಮ್ಮ ಎನ್ನ ಮೇಲೆ ಪ್ರೀತೆ। ಎಲ್ಲಿ ತುಳಸಿ ಜನಿಸ್ಯಾಳೆ ತಾಯೇ। ಮತ್ತಲ್ಲಿ ಶ್ರೀಹರಿಯು ಬಂದಿರುವ।।1।। ತುಳಸಿ ದಳದಳಕೆ ಸನ್ನಿಹಿತಳಾಗಿ। ಶ್ರೀನಿವಾಸನ ಪಾದಗಳ ಸ್ಮರಿಸಿ। ಬೃಂದಾವನದಲಿ ಬಂದು ತಾಯೇ ಸಂದೇಹವಿಲ್ಲದೆ ನಿಂದು। ಗೋಂವಿದನ್ನ ಕರತಂದು ಗೋಪಾಲನ ನೀ

ಕರತಂದು।। ಇಬ್ಬರೂ ಒಂದಾಗಿ ಪೂಜೆಗೊಂಡು।।2।।

ಎತ್ತಿದಳಾರತಿಯ ಶ್ರೀ ತುಳಸಿಗೆ ರಾಗ: ಮಾರ್ಗಹಿಂದೋಳ

ಎತ್ತಿದಳಾರತಿಯ ಶ್ರೀ ತುಳಸಿಗೆ। ಭಕ್ತಿಭಾವಗಳಿಂದಲೀ।।ಪ।। ಎತ್ತಿದಳಾರತಿ ಸತ್ಯಧರ್ಮನ ರಾಣಿ। ಅಚ್ಯುತನ ತೋರಿಸೆಂದತಿ ದೈನ್ಯದಿಂದಲಿ।।ಅ.ಪ।। ಹಾರ ಕೇಯೂರಗಳ। ಪಾಂಚಾಲಿ ತಾ ನಾರಿ। ತುಳಸಿಗೆ ರಚಿಸಿ। ಗಂಧಪರಿಮಳ ಕಸ್ತೂರಿ ಧೂಪ ದೀಪಗಳಿಂದ। ಇಂದ್ರ ನಂದನ ಸತಿ ಒಂದೇ ಮನಸಿನಿಂದ।।1।। ಅನ್ನ ಬೇಡಲು ಋಷಿಗಳು। ಪತಿಗಳು ಬಂದು ಎನ್ನನೆ ಕಾಡುವರೋ। ಪನ್ನಗವೇಣಿ ನಾ ನಿನ್ನ ಮೊರೆಹೊಕ್ಕೆನೆ। ಪನ್ನಗ ಶಯನನ ತೋರಿಸೆಂದೆನುತಲಿ।।2।। ಕ್ಷುಧೆಯಿಂದಲಿ ಒದರುವರೋ। ಯತಿಗಳು ಎಂದು ಪತಿಗಳು ಹೆದರುವರೋ। ಮತಿದಾಯಕಿ ನಿಮ್ಮ ಪತಿಯು ಕೃಷ್ಣಯ್ಯನ। ಅತಿತ್ವರೆಯಿಂದ ತೋರಿಸು ಎಂದು ತುಳಸಿಗೆ।।3।। ಬೇಡಿದ ಭಕ್ತರಿಗೆ ಶ್ರೀ ತುಳಸಿ ನೀ। ಸಾಯುಜ್ಯ ಪದವಿಯೀವೋಳೇ। ವಾರಿಜನಾಭನ ತೋರಿಸೆಂದೊರೆಯಲು। ತೋರಿದಳು ಧೀರ ಭೀಮೇಶ ಕೃಷ್ಣನ ಸತಿಗೆ।।4।।

ಹರೀಗೂ ತುಳಸೀಗೂ ಆರತಿ ಎತ್ತಿರೆ (ಆರತಿ) **ರಾಗ: ಮೋಹನ**

ಹರೀಗೂ ತುಳಸೀಗೂ ಆರತಿ ಎತ್ತಿರೆ। ಪರಿಮಳದಾರತಿಯಾ।।ಪ।। ಬಾಗಿನದನ್ನವು ಘೃತ ಪಾಯಸವೂ। ಭಾವ ಶುದ್ಧಿಲಿ ನೇವೇದ್ಯಕಿಟ್ಟು ಹರೀಗೆ।।ಅ.ಪ.।। ಎಲ್ಲಿ ತುಳಸಿಯು ಅಲ್ಲೇ ಕಮಲವು। ಅಲ್ಲೇ ಶ್ರೀರಮಣಾ। ತುಳಸೀ ಇಲ್ಲದೆ ಪೂಜೆಗೊಳ್ಳನು। ನಳಿನನಾಭನು ತಿಳೀರಿ ಸರ್ವದಾ।।1।। ತುಳಸೀ ಪೂಜೆ ಚೆಲೋದು ಜನರಿಗೆ। ಕೊಡುವಳು ವರಗಳಾ। ತುಳಸಿ ಇಲ್ಲದೆ ಪೂಜೆಗೊಳ್ಳನು। ಕಮಲನಾಭನು ತಿಳೀರಿ ಸರ್ವದಾ।।2।।

ಉದಯದಲೆದ್ದು ಮುಖವ (ಆರತಿ) **ರಾಗ: ಕಾಂಬೋಧಿ**

ಉದಯದಲೆದ್ದು ಮುಖವ ನೋಡಿದವರಿಗೆ। ಮಾಡಿದ ಪಾಪವು ಪರಿಹಾರವೂ।।ಪ।। ನೆನೆಯುತ್ತ ಭಕ್ತಿಯಿಂದಲೆ ಪ್ರದಕ್ಷಿಣೆ ಮಾಡುತ। ಮದಗಜ ಗಮನೆಗಾರುತಿ ಎತ್ತಿರೇ ರಂಗನರಾಣಿ ಶ್ರೀ ತುಳಸೀಗೆ। ಕೋಮಲಾಂಗಿಯರೊಲಿದು ಆರತಿ ಎತ್ತಿರೇ।।ಅ.ಪ।। ಗೋಮಯವನೆ ತಂದು ಸಾರಿಸಿ। ನಿತ್ಯ ಪನ್ನೀರನೆರೆದು ಪ್ರತಿ ದಿವಸದಲೀ। ಏಳು ಪ್ರದಕ್ಷಿಣೆಯನು ಮಾಡಿದವರೀಗೇ। ಏಳು ಜನ್ಮದ ಪಾಪ ಪರಿಹಾರವೂ।।1।। ಒಡೆಯನ ಮನೆಗೆ ನೀರನು ತಂದು ತುಂಬಿ। ಎಡವಿ ಬಿದ್ದುಕೊಡ ಒಡೆಯಲೂ। ಸಿಡಿದ ನೀರು ತುಳಸೀಗೆ ತಂಪೇರಲು ಕೊಡುವೊಳು ಅವಳಿಗಿಷ್ಟಾರ್ಥ ಸಂಪದವಾ ।।2।।

ನಾರಿಯರು ಮಂಗಳಾರತಿಯ (ಆರತಿ) **ರಾಗ: ಆರಭಿ**

ನಾರಿಯರು ಮಂಗಳಾರತಿಯ ತನ್ನಿ ಸಾರಸಾಂಬಕಿಗೆ।।ಪ।। ಶ್ರೀ ರಮಣಾ ಸಿರಿದೇವಿ ಸುರರಿಂದ ಚಾರು ಬೃಂದಾವನ ನಿವಾಸಿಗೆ।।ಅ.ಪ।। ಇಂದಿರೇಶನ ನೇತ್ರದಾ ಉದುಬಿಂದು ಸಂಭವಗೇ। ಸಿಂಧು ರಾಜನ ನಂದನೆಯ ಆವೇಶಯುಕ್ತಳಿಗೆ। ವಂದಿತಾ ಮುನಿವೃಂದ ಸನಕಸನಂದಾ ನಾರ್ಚಿತೆಗೆ। ಪೊಂದಿದವರ ಎಂದೆಂದು ಬಿಡದಿಹ ಸುಂದರಿಗೆ ವರ ಮಂದಿರೆಗೆ ಶುಭ।।1।। ನಾರದ ಮುನಿಯಿಂದ ವಂದಿತ ಚಾರು ಚರಿತಳಿಗೆ। ನೀರಜಾಂಡದಿ ಸತ್ಯ ಉದಾರ ಮಹಿಮಳಿಗೆ। ಮಾರಮಣನ ಪದಾರವಿಂದವ। ಚಾರು ಮಧುಪಳಿಗೆ ಘೋರ ದುರಿತವ ದೂರ ಮಾಡುವ ನಾರಿ।ಚಂದ್ರ ಸನ್ಮುಖ ಕುಂದದಂತೆಗೆ।।2।। ಮಂದಸ್ಮಿತಯುತೆಗೆ ಇಂದಿರೇಶನ ಕಂದರಾವರ ಮಂದಿರ ಸ್ಥಿತೆಗೆ। ಗಂಧಲೇಪಿತ ಫಾಲ ಕುಂಕುಮದಿಂದ ಶೋಭಿತೆಗೆ। ಮಂದರಧರ ಬಾಲಕೃಷ್ಣನ ಪೊಂದಿಕೊಂಡಿಹ ಸುಂದರಿಗೆ ವರ।।3।।

ಲೋಕಮಾತೆಯಾದ ತುಳಸಿ (ಆರತಿ) **ರಾಗ: ಪಂತುವರಾಳಿ**

ಲೋಕಮಾತೆಯಾದ ತುಳಸಿ। ಗಾರುತಿಯಮಾಡುವೆ। ಬೇಡಿದಿಷ್ಟ ಕೊಡುವೋಳೀಗ ನಮಿಸಿಪಾಡುವೆ...।।ಪ।। ಮುತ್ತು ಬಿಗಿದ ತಟ್ಟೆಯೊಳಗೆ ರತ್ನದಾರುತಿ। ಮಿತ್ರೇಯರು ಹರಿಗೆ ಬೇಗ। ಎತ್ತಿ ತುಳಸೀಗಾರುತೀಯಾ।।1।। ಧರೆಯೊಳಗೆ

ತುಳಸೀ ಪೂಜೆ ನಿರುತದಿಂದ ಮಾಡಲು। ಹರಿಯು ಮೆಚ್ಚು ವಂದದಿ ತುಳಸಿ। ಪರಮಭಕ್ತಳಿರುವಳು॥2॥

ಮಂಗಳಂ ಶ್ರೀತುಳಸೀದೇವಿಗೆ (ಮಂಗಳ) ರಾಗ: ನಾದನಾಮಕ್ರಿಯೆ, ಛಾಪುತಾಳ

ಮಂಗಳಂ ಶ್ರೀತುಳಸೀದೇವಿಗೆ। ಜಯ ಮಂಗಳಂ ಶ್ರೀ ಬೃಂದಾವನದೇವಿಗೆ॥ಪ॥ ನೋಡಿದ ಮಾತ್ರಕೆ ದೋಷ ಸಂಹಾರಿಗೆ। ಬೇಡಿದ ವರಗಳ ಕೊಡುವವಳಿಗೆ। ಮಾಡೆ ವಂದನೆಯನು। ಮನುಜರ ಪಾಪದಗೂಡ ನೀಡಾಡುವ ಗುಣವಂತೆಗೆ॥1॥ ಮುಟ್ಟಿದ ಮಾತ್ರಕೆ ಮುಕ್ತರ ಮಾಡುತ। ಮುದದಿಂದುದ್ಧರಿಸುವ ಮುನಿವಂದ್ಯಗೆ। ಕೊಟ್ಟರೆ ನೀರನು ಬೇರಿಗೆ ಕಾಲನ। ಮುಟ್ಟಲೀಸದ ಹಾಗೆ ಮಾಳ್ಪಳಿಗೆ॥2॥ ಬಿತ್ತಿ ಬೆಳೆಸಿ ತನ್ನ ಹೆಚ್ಚಿಸಿದವರಿಗೆ। ಚಿತ್ತವಲ್ಲಭ ಕೃಷ್ಣನ್ಹರುಷದಲಿ। ಅತ್ಯಂತವಾಗಿ ತಾ ತೋರಿ ಭವದ ಬೇರ। ಕಿತ್ತು ಬಿಸಾಡುವ ಕೋಮಲೆಗೆ॥3॥ ಕೋಮಲವಾಗಿದ್ದ ದಳ ಮಂಜರಿಗಳ। ಪ್ರೇಮದಿಂದಲಿ ತಂದು ಶ್ರೀಹರಿಗೆ। ನೇಮದಿಂದರ್ಚಿಸೆ ಪರಮಾತ್ಮನೊಳು ಜೀವ। ಕಾಮಿತಾರ್ಥವ ನೀವ ಸದ್ಗುಣೆಗೆ॥4॥ ಕಾಷ್ಠವ ತಂದು ಗಂಧವ ಮಾಡಿ ಕೃಷ್ಣಗೆ। ನಿಷ್ಠೆಯಿಂದಲಿ ಲೇಪನಮಾಳ್ಪರ। ಜ್ಯೇಷ್ಠರೆನಿಸಿ ವೈಕುಂಠದಿ ನಿಲಿಸಿ। ಸಂತುಷ್ಟರ ಮಾಡುವ ಸೌಭಾಗ್ಯೆಗೆ॥5॥ ಅನ್ನವನುಂಡರು ನೀಚರ ಮನೆಯಲ್ಲಿ। ಉನ್ನತ ಪಾಪವ ಮಾಡಿದ್ದರೂ। ತನ್ನ ದಳವನೊಂದ ಕರ್ಣದಲ್ಲಿಟ್ಟರೆ। ಧನ್ಯರ ಮಾಡುವ ದಯವಂತೆಗೆ॥6॥ ಸರಸಿಜನಾಭನ ಸಲಿಗೆಯ ರಾಣಿಗೆ। ಶರಣ ಜನರ ಪೊರೆವ ಸದ್ಗುಣೆಗೆ। ತಿರುಪತಿಯ ಶ್ರೀ ಪುರಂದರವಿಠಲನ। ಚರಣ ಸೇವಕಳಾದ ಚಿನ್ಮಯಿಗೆ ॥7॥

ಶ್ರೀ ತುಳಸಿ ಹರಿಗೆ ಅನಂತ ರಾಗ: ಮಧ್ಯಮಾವತಿ

ಶ್ರೀ ತುಳಸಿ ಹರಿಗೆ ಅನಂತ ಭಾಷಿತಳಾಗಿ। ಮಸ್ತ ಕಲಶದಲಿ ಜನಿಸಿದಳು ದೇವಿ। ಧರೆಯು ಪಾವನವಾದ ಜಗವನುದ್ಧರಿಸಿದಾ। ಪರಬ್ರಹ್ಮ ವಸ್ತುವೆ ಶ್ರೀತುಳಸಿಯು॥1॥ ಎಳೆಯ ದೊಳಸಿಯು ಬಳಬಳನೆ ಬಳುಕುತ್ತ। ಥಳಥಳನೆ ಹೊಳೆಯುತ್ತ। ಬಂದು ಕುಳಿತು ತೊಡೆಯಮೇಲೆ ಲಕ್ಷ್ಮಿ। ಮೆಲ್ಲಡಿಇಡುವಾಗ ಮೋದದಿಂದ। ನೋಡಿದಳೆ ಶ್ರೀ ತುಳಸಿಯು॥2॥ ಹಸಿರು ಪಟ್ಟಾವಳಿಯನುಟ್ಟಳೇ ಶ್ರೀತುಳಸಿ। ಹೊಸಬಣ್ಣ ಮಣಿಕದ ತೊಡಿಗೆಯನೆ ತೊಟ್ಟು। ಪಟ್ಟೆಯ ಕುಪ್ಪಸವನುಟ್ಟಳೇ ಶ್ರೀ ತುಳಸಿ। ಅಚ್ಚುತನ ಕೂಡುವೊ ಭರದಿಂದಲಿ॥3॥ ಉತ್ಥಾನ ದ್ವಾದಶಿಯಲ್ಲಿ ಕಟ್ಟಿಗುಡಿ ತೋರಣವೇ। ಕಟ್ಟಿರೇ ಮುತ್ತಿನಾ ಮಂಟಪವನು। ಮಿತ್ರೆಯರು ಹರಸಿ ಮಂತ್ರಾಕ್ಷತೆಯ ತಳಿದರೇ। ಪ್ರತ್ಯಕ್ಷವಾದಳೇ। ಶ್ರೀ ತುಳಸಿಯು॥ ಜಯಮಂಗಳಂ ನಿತ್ಯ ಶುಭಮಂಗಳಂ॥4॥

ಮಂಗಳಂ ಶ್ರೀ ತುಳಸಿ (ಮಂಗಳ) ರಾಗ: ಸುರಟಿ

ಮಂಗಳಂ ಶ್ರೀ ತುಳಸಿ ಸಜ್ಜನರಂಗಳದಲಿ ನೆಲಸಿ॥ಪ॥ ಮಂಗಳ ಪ್ರಜೆಗಳ ಹಿಂಗದೆ ಸಲಹಿ। ಪಾಪಂಗಳ ಕಳೆಯುವ ಅಂಗನಾ ಮಣಿಯೇ॥ಅ.ಪ.॥ ಉದಯ ಕಾಲದೊಳೆದ್ದು ತನ್ನಯ ಹೃದಯ ಕಮಲದಲ್ಲಿ। ಮುದದೊಳು ನೆನೆಯುತ ವದನವ ನೋಡಲು। ಒದಗಿದ ಪಾಪಗಳೆಲ್ಲವ ಕಳೆಯುತ॥1॥ ಮೂಲ ಮೃತ್ತಿಕೆಯನ್ನು ಭಕ್ತರು ಫಾಲಭಾಗದಲ್ಲಿ। ಲೀಲೆಯಿಂಧರಿಸಲು ಕಾಲನ ದೂತರ। ಕೀಳು ಮಾಡಿ ಶ್ರೀಲೋಲನ ಕಾಂಬರು॥2॥ ಭಕ್ತ ಜನರು ಎಲ್ಲ ನಿನ್ನನ್ನು ಸ್ತೋತ್ರಮಾಡುವರಲ್ಲ। ವಾರ್ತೆಯ ಕೇಳುತ ಕಾರ್ತಿಕ ದ್ವಾದಶಿ। ರಾತ್ರಿಲಿ ವಿಧಿವಿಧ ಆರತಿಗೊಂಬಳೆ॥3॥

❖ ❖ ❖